ಹೇಳಿಕೆಗಳಿಗೆ ಅವಕಾಶವನ್ನು ಕೊಡುವುದಕ್ಕೆ ಮುಂಚೆ ಪರಿಶೀಲನೆ ಮಾಡಿ ಅನುಮತಿ ಕೊಟ್ಟರೆ ಕ್ಷೇಮ ಎಂದು ನನಗನಿಸುತ್ತದೆ. ಒಳ್ಳೆಯ ಉದ್ದೇಶದಿಂದ ಮಾಡಿರಬಹುದು.

ಶ್ರೀ ಎಂ. ರಘುಪತಿ.—ಮಾನ್ಯ ಗುರುಪ್ರಸಾದ್ ಅವರು, ರೋಷನ್ ಬೇಗ್ ಅವರು ನಿಯಮ ೩[illegible] ರಲ್ಲಿ ಈ ವಿಷಯವನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೇನು ಮ್ಯಾಟರ್ ? ಸದನದಲ್ಲಿ ಮಧ್ಯದಲ್ಲಿ ಹೇಳಿಕೆ ಕೊಡುವಾಗ ಏನೋ ಮುಖ್ಯವಾದ ವಿಚಾರ ಎಂದು ನಾವು ತಿಳಿದುಕೊಂಡಿದ್ದರೆ ಇದು ಸಾಮಾನ್ಯ ದಿನನಿತ್ಯದ ವ್ಯವಹಾರಕ್ಕೆ ಸಂಬಂಧಿಸಿದ ವಿಷಯವಾಗಿದೆ. What is the matter and investigation ? They are normal, very ordinary investigation is made.

MR. SPEAKER.—I will look in to the matter.

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ .

† ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ)—ಮಾನ್ಯ ಅಧ್ಯಕ್ಷರೆ, ನಾನು ಅರಣ್ಯ ಖಾತೆಯ ಬೇಡಿಕೆಗಳನ್ನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅರಣ್ಯ ಖಾತೆಯ ಬಗ್ಗೆ ಹೇಳುವುದಾದರೆ, ಇಂದು ನಮಗೆ ೩೫ ರಿಂದ ೩೮ ಪರ್ಸೆಂಟ್ ಅರಣ್ಯ ಬೇಕಾಗಿದೆ. ಈ ಅರಣ್ಯವನ್ನು ಪಾಲಿಸತಕ್ಕಂತಹ ಕರ್ತವ್ಯ ಸರ್ಕಾರದ ಮೇಲಿದೆ. ಅರಣ್ಯದಿಂದ ಸರ್ಕಾರಕ್ಕೂ ಮತ್ತು ಜನತೆಗೂ, ಪ್ರಾಣಿ, ಪಕ್ಷಿಗಳಿಗೂ ಸಂಪತ್ತು ಸಿಕ್ಕುತ್ತದೆ. ಮತ್ತೆ ಅರಣ್ಯಗಳಿಂದ ನೀರಿಗೂ ಅನುಕೂಲವಾಗುತ್ತದೆ. ಆದರೆ, ಪರಿಸ್ಥಿತಿ ಏನಾಗಿದೆಯೆಂದರೆ, ಕೋಟ್ಯಾಂತರ ಹಣವನ್ನು ಸರ್ಕಾರ ಖರ್ಚು ಮಾಡಿದರೂ ಕೂಡ, ನಾವು ಅರಣ್ಯವನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ. ಒಂದು ಕಡೆ ೭೫ ಕೋಟಿ ಖರ್ಚು ಮಾಡಿ ಸಸಿಗಳನ್ನು ನೆಡುತ್ತಿದ್ದೇವೆ. ಮತ್ತೊಂದು ಕಡೆ ಮರಗಳನ್ನು ಕಡಿಯುತ್ತಿದ್ದಾರೆ ಈ ಮರಗಳನ್ನು ನೆಡುವ ಕಾರ್ಯಕ್ರಮವೇನಿದೆ, ಇದನ್ನು ನಾವು ೧೦೦ ವರ್ಷಗಳ ಯೋಜನೆಯನ್ನಾಗಿ ಹಾಕಿಕೊಳ್ಳಬೇಕಾಗುತ್ತದೆ. ಒಂದು ವರ್ಷದಲ್ಲಿ ಇಂತಿಷ್ಟು ಮರಗಳನ್ನು ಕಡಿದರೆ, ಅದಕ್ಕೆ ೨–೩ ರಷ್ಟು ಹೆಚ್ಚು ಮರಗಳನ್ನು ನೆಡುವ ಕಾರ್ಯಕ್ರಮವನ್ನು ಸರ್ಕಾರವು ಹಾಕಿಕೊಳ್ಳಬೇಕಾಗುತ್ತದೆ. ಈ ರೀತಿ ಯೋಜನೆಯನ್ನು ಹಾಕುವಂತಹ ಕಾಲದಲ್ಲಿ ಕೆಲವು ಮರಗಳು ೧೦ ವರ್ಷಕ್ಕೆ ಕೆಲವು ೨೦ ವರ್ಷಕ್ಕೆ ಮತ್ತೆ ಕೆಲವು ೪೦ ವರ್ಷಗಳಿಗೆ ಮೆಚ್ಯೂರಿಟಿ ಆಗುತ್ತವೆ. ಇಂಥ ಮರಗಳನ್ನು ಒಂದೇ ಕಡೆಯಲ್ಲಿ ಬೆಳೆಸುವ ವ್ಯವಸ್ಥೆ ಮಾಡಬೇಕು. ಈ ರೀತಿಯಾಗಿ ಯೋಜನಾಬದ್ಧವಾಗಿ ಮರಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳದೇ. ಬೇರೆ ಮಾರ್ಗವಿಲ್ಲ. ಹಿಂದೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಮರಗಳನ್ನು ಕಡಿಯುವಾಗ ಯಾರು ಗಲಾಟೆ ಮಾಡಿದರೋ. ಅವರ ಕಾಲದಲ್ಲಿಯೇ ಈಗ ಮರಗಳನ್ನು ಕಡಿಯುತ್ತಿದ್ದಾರೆ. ಆದ್ದರಿಂದ ಎಲ್ಲಾ ಮರಗಳನ್ನು ರಾಷ್ಟ್ರೀಕರಣ ಮಾಡುವುದು ಒಂದೇ ಮಾರ್ಗ ಉಳಿದಿದೆ. ಆದ್ದರಿಂದ, ನಾನು ಸರ್ಕಾರದವರಲ್ಲಿ ಎಲ್ಲಾ ಮರಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕದಲ್ಲಿ ಅರಣ್ಯ ಇಲಾಖೆ ಏನು ಮಾಡುತ್ತಿದೆ ಎಂದು ನಾನು ಕೇಳಲು ಬಯಸುತ್ತೇನೆ. ಇವತ್ತಿನ ದಿವಸ ರಬ್ಬರ್ ಪ್ಲಾಂಟೇಶನ್, ಟೀ ಪ್ಲಾಂಟೇಶನ್, ಕೋಕೋ ಪ್ಲಾಂಟೇಶನ್ ಮಾಡುತ್ತಿದ್ದಾರೆ. ಇವುಗಳಿಂದ ಇಲಾಖೆಗೆ ಲಾಭ ಬರುತ್ತಿಲ್ಲ. ಕರ್ನಾಟಕ ಫಾರೆಸ್ಟ್ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಕೂಡ ನಷ್ಟದಲ್ಲಿ ನಡೆಯುತ್ತಿದೆ. ಇವುಗಳನ್ನು ಇಂಪ್ರೂವ್ ಮಾಡತಕ್ಕಂತಹ ಕೆಲಸವನ್ನು ಸರ್ಕಾರದವರು ಮಾಡುತ್ತಿಲ್ಲ. ರಬ್ಬರ್ ಪ್ಲಾಂಟೇಶನ್‌ನಲ್ಲಿ ೧೦ ಎಕರೆ ರಬ್ಬರ್ ಬೆಳೆಸಿದರೂ ಕೂಡ ಬೇಕಾದಷ್ಟು ಲಾಭ ಪಡೆಯಬಹುದು. ಆದರೆ, ಇದನ್ನು ಸರಿಯಾಗಿ ಮಾಡುವಂತಹ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ. ಮತ್ತು ಸರ್ಕಾರ ಯಾವ ರೀತಿ ವರ್ತಿಸಿದೆ ಎಂಬ ಬಗ್ಗೆ ನಾನು ಹೇಳಬೇಕೆಂದರೆ, ಜಾರು ಬೇಡದಲ್ಲಿ ೫ ಸಾವಿರ ಎಕರೆ ಟೀ ಪ್ಲಾಂಟೇಶನ್ ಮಾಡುತ್ತಿದ್ದಾರೆ. ಆದರೆ ಇವತ್ತಿನವರೆಗೂ ಸರ್ಕಾರದವರು ಅದಕ್ಕೆ ಮಂಜೂರಾತಿ ಕೊಟ್ಟಿಲ್ಲ. ಕೆಲಸವನ್ನು ಹಾಗೇ ಮುಂದುವರಿಸಿದ್ದಾರೆ.

ಮತ್ತು ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್‌ಗೆ ಕಳೆದ ವರ್ಷ ೩೨ ಲಕ್ಷ ಹಣವನ್ನು ಒದಗಿಸಿದ್ದಾರೆ. ಅದನ್ನೂ ಸಹ ಪೂರ್ತಿಯಾಗಿ ಖರ್ಚು ಮಾಡಲಿಲ್ಲ. ಈ ವರ್ಷ ೪೦ ಲಕ್ಷ ರೂಪಾಯಿಗಳು, ಅಷ್ಟೇ ಅಲ್ಲ, ಆನೆಗಳ ಹಾವಳಿಯನ್ನು ತಡೆಯಲು ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಟ್ರೆಂಚಸ್ ಮಾಡುತ್ತಿದ್ದಾರೆ. ಆದರೆ ಈ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಮತ್ತು ಒದಗಿಸಿರುವ ಹಣವನ್ನು ಪೂರ್ತಿಯಾಗಿ ಖರ್ಚು ಮಾಡದೇ, ಹಣವು ಲ್ಯಾಪ್ಸ್ ಆಗುತ್ತಿದೆ. ಮತ್ತು ಇಲ್ಲಿ ಮರಗಳನ್ನು ಸ್ಮಗ್ಲಿಂಗ್ ಮಾಡುತ್ತಿರುವವರು ವ್ಯಾಪಾರಸ್ಥರು. ಆದರೆ, ಇದಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳ ಸಹಾಯವಿಲ್ಲದೆ ಈ ರೀತಿ ಸ್ಮಗ್ಲಿಂಗ್ ಮಾಡಲು ಸಾಧ್ಯವಿಲ್ಲ. I am stating this with due respect to the honest officials. ೫ ವರ್ಷಗಳ ಹಿಂದೆ ವಿರಾಜ್ ಪೇಟೆಯಿಂದ ಕೇರಳಕ್ಕೆ ಹೋಗುವಾಗ ಕೇರಳದಲ್ಲಿ ಪೋಲೀಸರು ಸ್ಮಗ್ಲಿಂಗ್ ಮಾಡುವವರನ್ನು ಹಿಡಿದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಹಿಡಿಯಲಿಲ್ಲ. ಇಂತಹ ಪ್ರಕರಣಗಳು ಬೇಕಾದಷ್ಟು ನಡೆದಿವೆ. ಇವುಗಳನ್ನು ತಡೆಗಟ್ಟಲು ಸರ್ಕಾರದವರು ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇಂತಹ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಂಡು ಅಂತಹವರನ್ನು ಇತ್ತೀಚಿನ ಸುಪ್ರೀಂ ಕೋರ್ಟ್ ಆಜ್ಞೆಯ ಪ್ರಕಾರ ಡಿಸ್‌ಮಿಸ್ ಮಾಡಬೇಕೆಂದು ಹೇಳಬಯಸುತ್ತೇನೆ,

ಮತ್ತೆ ಕೊಡಗಿನಲ್ಲಿ ದೇವರಕಾಡು ಎಂಬ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಒಂದು ಗ್ರಾಮದಲ್ಲ ೧೦೦ ಎಕರೆ ಕಾಡುಗಳನ್ನು ಇಟ್ಟುಕೊಂಡು ದೇವರ ಹೆಸರಿನಲ್ಲಿ ಅದನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಅಂತಹ ಮರಗಳನ್ನು ಈಗ ಕಡಿಯುವ ಒಂದು ಪ್ರಯತ್ನ ನಡೆಯುತ್ತಿದೆ. ಅಂತಹ ಪ್ರದೇಶದಲ್ಲಿ ಜನರು ಅಕ್ರಮ ಪ್ರವೇಶ ಮಾಡಿ, ಮರಗಳನ್ನು ಕಡಿದು ನಷ್ಟ ಉಂಟು ಮಾಡುತ್ತಿದ್ದಾರೆ. ಆದ್ದರಿಂದ ನಾನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ದೇವರಕಾಡು ಪ್ರದೇಶದಲ್ಲಿ ತಂತಿಗಳನ್ನು ಹಾಕಿ, ಭದ್ರಪಡಿಸುವ ಕಾರ್ಯಗಳನ್ನು ಮಾಡಬೇಕು. ಹಿಂದೆ, ಶ್ರೀಮತಿ ವಾಣಿ ಶ್ರೀರಾಂ ಅವರು ಜಿಲ್ಲಾಧಿಕಾರಿಯಾಗಿದ್ದಾಗ, ಹಾಕಿದ್ದ ತಂತಿಗಳಿಂದ ಕೆಲವು ಮರಗಳು ಹಾಗೆ ಉಳಿದಿವೆ. ಆದ್ದರಿಂದ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವಿಶ್ವ ಬ್ಯಾಂಕಿನಿಂದ ೧೯೮೦ ರಿಂದ ಈ ೫ ವರ್ಷದ ವರೆಗೆ ಸುಮಾರು ೨೦೨ ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಬಂದಿವೆ. ಇದು ಈ ಯೋಜನೆಯ ೫ ನೇ ವರ್ಷ. ಇದುವರೆಗೂ ಕೇವಲ ೧೦೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ, ೫೦ ಪರ್ಸೆಂಟ್ ಮಾತ್ರ ಖರ್ಚು ಮಾಡಿದ್ದಾರೆ. ಇದು ಅನ್ಯಾಯ. ಇದನ್ನು ಸರ್ಕಾರದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ರೀತಿ ಮಂದಗತಿಯಲ್ಲಿ ಕೆಲಸ ಮಾಡಿದರೆ, ನಾವು ಕಾಡುಗಳನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಇದೂ ಅಲ್ಲದೆ ಕೇಂದ್ರ ಸರ್ಕಾರದಿಂದ ಬರುತ್ತಿರುವ ಹಣವನ್ನೂ ಸರಿಯಾಗಿ ಉಪಯೋಗಿಸುತ್ತಿಲ್ಲ. ಮತ್ತು ಅರಣ್ಯ ಇಲಾಖೆಯಲ್ಲಿ ಒಂದು ಅರ್ಜಿ ಕೊಟ್ಟರೆ, ೫ ವರ್ಷಗಳಾದರೂ ಇತ್ಯರ್ಥವಾಗುವುದಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸದಿದ್ದರೆ, ಜನರು ಕ್ರಾಂತಿ ಮಾಡುವಂತಹ ಪ್ರಸಂಗ ಬರಬಹುದು. ಒಬ್ಬ ಬಡವನು ೫೦ ಕ್ಯೂಬಿಕ್ ಫೀಟ್‌ಗಾಗಿ ಅರ್ಜಿಕೊಟ್ಟರೆ ಅವನು ಅನೇಕ ಡಾಕ್ಯುಮೆಂಟ್‌ಗಳನ್ನು ಕೊಡಬೇಕಾಗುತ್ತದೆ. ಈ ಪದ್ಧತಿ ಹಿಂದೆ ಇರಲಿಲ್ಲ. ಮಾನ್ಯ ಸಚಿವರು ಬಂದಾಗ, ಬಡವರ ಅರ್ಜಿಯನ್ನು ಬೇಗ ಇತ್ಯರ್ಥ ಮಾಡುವುದಾಗಿ ಹೇಳುತ್ತಾರೆ, ಆದರೆ ಕಾರ್ಯಾಚರಣೆಯಲ್ಲಿ ಅದು ಆಗಿಲ್ಲ. ಇದರ ಪರಿಣಾಮವಾಗಿ, ಜನರಿಗೆ ಬಹಳ ತೊಂದರೆಯಾಗುತ್ತದೆ. ಈ ಟಿಂಬರ್ ಫೈಬರ್ ಇದೆ, ಬೇಕಾದವರಿಗೆ ಬೇಗ ಸಿಗುತ್ತದೆ. ಆದರೆ ಬಡವರಿಗೆ. ಇದು ಸಿಕ್ಕುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಅಧ್ಯಕ್ಷರು.—ಈಗಾಗಲೇ ೧೦ ನಿಮಿಷಗಳಾಗಿವೆ. ಮಾನ್ಯ ಸದಸ್ಯರು ಬೇಗ ಮುಗಿಸಬೇಕು.

ಶ್ರೀ ಡಿ. ಎ. ಚಿನ್ನಪ್ಪ.—ಮತ್ತು ಈ ಫಾರೆಸ್ಟ್ ಆ್ಯಕ್ಟನ್ನು ಸರಿಯಾಗಿ ರಿ-ಇನ್‌ಫೋರ್ಸ್ ಮಾಡಬೇಕು. ಮತ್ತು ಎಕನಾಮಿಕ್ಸ್ ಸರ್ವೆಯ ಪುಟ ೩೭ ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

"A new thrust has been given for the development of forestry and conservation, massive tree plantations have been undertaken under social forestry and public co-operation in this regard has also been encouraging. Harsh decisions have also been taken against felling of trees in natural forests."

ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಇವತ್ತು ಇವರಿಗೆ ಜನರ ಸಹಕಾರ ಬೇಕಾಗಿಲ್ಲ. ಇವತ್ತು ಜನರ ಸಹಕಾರ ಅಧಿಕಾರಿಗಳಿಗೆ ಬೇಕಾಗಿಲ್ಲ. ಇವರು ಟೇಬಲ್ ೬.೧೧ರಲ್ಲಿ ಈ ರೀತಿ ಹೇಳುತ್ತಾರೆ. ೧೯೮೩-೮೪ರಲ್ಲಿ ರೆವಿನ್ಯೂ ೫೨.೬೩ ಕೋಟಿಯಾದರೆ, ಎಕ್ಸ್‌ಪೆಂಡೀಚರ್ ೩೭.೨೯ ಕೋಟಿ ರೂಪಾಯಿಗಳಾಗಿವೆ. ಇವತ್ತು ಎಕ್ಸ್‌ಪೆಂಡೇಚರವನ್ನು ಬಹಳ ಕಡಿಮೆ ಮಾಡಿರುವುದರಿಂದ ಫಾರೆಸ್ಟ್‌ನ್ನು ಬೆಳೆಸುವುದಕ್ಕೆ ಆಗುತ್ತಿಲ್ಲ. ಮತ್ತೆ ಇವರು ಟೇಬಲ್ ೬.೧೨ರಲ್ಲಿ ಫ್ಯೂಯಲ್ ಮತ್ತು ಮಿಸಲೇನಿಯಸ್ ಪ್ಲಾಂಟೇಷನ್‌ನಲ್ಲೂ ಕಡಿಮೆ ಆಗಿದೆ ಇದು ೧೯೮೩-೮೪ರಲ್ಲಿ ೨೪೯೧ ಇದೆ ೧೯೮೪-೮೫ರಲ್ಲಿ ೨೮೦೧೫ ಇದೆ ಹಾಗೂ ೧೯೮೫-೮೬ರಲ್ಲಿ ೨೭೦೧೭ ಬಂದಿದೆ. ಇಲ್ಲೂ ಕೂಡಾ ಇಳಿಮುಖ ಆಗುತ್ತಿದೆ, ಪ್ಲಾಂಟೇಷನ್ ಏನಿದೆ ಇದರಲ್ಲಿ ಸರಿಯಾದ ರೀತಿಯಲ್ಲಿ ವ್ಯವಹಾರ ನಡೆಸದೇಹೋದನೆ ಖಂಡಿತವಾಗಿಯೂ ನಾವು ಪ್ರಪಂಚದಲ್ಲಿ ಸರಿಯಾಗಿ ಜೀವನ ಮಾಡುವುದಕ್ಕೆ ಆಗುವುದಿಲ್ಲ ಇದರಿಂದ ನಮ್ಮ ನದಿಗಳು ಬತ್ತಿ ಹೋಗುತ್ತವೆ. ನಮಗೆ ನೀರು ಸಿಗುವುದಿಲ್ಲ. ಇನ್ನು ಫೈರ್ ಉಡ್ ಬಗ್ಗೆ ಒಂದು ಸಲಹೆಯನ್ನು ಕೊಡುತ್ತೇನೆ. ಏನು ಇವತ್ತು ಕಾಡಿನಲ್ಲಿ ಮರಗಳು ಬಿದ್ದು ಹಾಳಾಗುತ್ತಿವೆ ಅವುಗಳನ್ನು ಸರ್ಕಾರದವರು ಸರ್ಕಾರಿ ಟಿಂಬರ್ ಯಾರ್ಡ್ಸ್‌ಗೆ ತಂದು ಅದನ್ನು ಜನರಿಗೆ ಹಂಚಲಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಕಾಡು ಸಾಕಷ್ಟು ಹಾಳಾಗಿರುವುದಕ್ಕೆ ಹಿಂದೆ ಸಾಕಷ್ಟು ಬಯಲು ಸೀಮೆಯವರೇ ಅರಣ್ಯ ಮಂತ್ರಿಗಳಾಗಿದ್ದುದು ಕಾರಣ ಎಂದು ನನಗನ್ನಿಸುತ್ತದೆ. ಏಕೆಂದರೆ, ಫಾರೆಸ್ಟ್ ಮಿನಿಸ್ಟರು ಬಯಲುಸೀಮೆಯವರಾಗಿದ್ದು ಅವರು ಸಾಕಷ್ಟು ಕಾಡನ್ನು ತೆಗೆಸಿದ್ದಾರೆ, ಅವರ ಅರಣ್ಯ ನೀತಿ ಹೇಗಿತ್ತೆಂದರೆ, ದಟ್ಟವಾದ ಕಾಡನ್ನು ಬಯಲು ಮಾಡಿ ಅಲ್ಲಿ ನೀಲಗಿರಿ ಮರಗಳನ್ನು ನೆಡುವ ಒಂದು ಪದ್ಧತಿಯನ್ನು ಅವರು ತಂದರು. ಆದುದರಿಂದ ಇವತ್ತು ಕಾಡು ಹಾಳಾಗಿದ್ದರೆ ಇಲ್ಲಿಯವರೆಗೆ ಇದ್ದ ಸರ್ಕಾರಗಳಿಂದ ಅದು ಹಾಳು ಆಗಿದೆಯೇ ಹೊರತು ಅಲ್ಲಿಯ ಜನರೇ ಕಾಡನ್ನು ಹಾಳು ಮಾಡಿದ್ದಾರೆ ಎನ್ನುವುದು ಸುಳ್ಳು. ಇವತ್ತು ಕಾಡು ಹಾಳಾಗಿದ್ದರೆ, ಹಿಂದಿನ ಸರ್ಕಾರಗಳು ಏನು ಮಾಡಿದವೆಂದರೆ ಪೂರ್ತಿಯಾಗಿ ದಟ್ಟ ಕಾಡನ್ನು ಕೆಲವು ಕಾಂಟ್ರಾಕ್ಟರ ಮತ್ತು ಕೆಲವಾರು ರಾಜಕಾರಣಿಗಳಿಗೆ ಲಾಭ ಮಾಡುವುದಕ್ಕೋಸ್ಕರ ಕಡಿದದ್ದರಿಂದ ಇವತ್ತು ನಮ್ಮ ದೇಶದಲ್ಲಿ ಕಾಡು ಸಂಪೂರ್ಣವಾಗಿ ನಾಶವಾಗಿದೆ, ಇವತ್ತು ಒಂದು ಸಂತೋಷವೇನೆಂದರೆ, ಮಲೆನಾಡಿನ ಬಗ್ಗೆ ಅದರ ಅರ್ಥ ಗೊತ್ತಿರುವ ಜನರೇ ನಮ್ಮ ಅರಣ್ಯ ಸಚಿವರಾಗಿರುವುದರಿಂದ ಸ್ವಲ್ಪ ಇತ್ತೀಚಿನ ೩ ವರ್ಷಗಳಲ್ಲಿ ಸಾಕಷ್ಟು ಮರಗಳನ್ನು ಬೆಳೆದಿದ್ದಾರೆ. ಇವತ್ತು ಎಲ್ಲಿ ನೋಡಿದರೂ, ರಸ್ತೆಯ ಬದಿಯಲ್ಲೂ ಕೂಡಾ ಸಾಕಷ್ಟು ಕಾಡನ್ನು ನಾವು ಇವತ್ತು ಕಾಣುತ್ತಿದ್ದೇವೆ. ಬಹಳ ಕಡೆ ಕಾಡಿನಲ್ಲಿ ನಮ್ಮ ಅಧಿಕಾರಿಗಳು ಅಲ್ಲಿಯ ಹಳ್ಳಿ ಜನರೇ ಕಳ್ಳರು ಎನ್ನುವ ರೀತಿಯಲ್ಲಿ ನೋಡುತ್ತಿದ್ದಾರೆ. ಇವತ್ತು ಅದು ತಪ್ಪಬೇಕು ಇವತ್ತು ಬೆಂಗಳೂರಿನಲ್ಲಿ ಒಬ್ಬೊಬ್ಬರ ಮನೆಯಲ್ಲಿ ಕಾಡಿನ ವಸ್ತುಗಳಿಂದ ತಯಾರಾದ ಕುರ್ಚಿ ಮೇಜುಗಳನ್ನು ನೋಡುತ್ತಿದ್ದೇವೆ. ಇವೆಲ್ಲಾ ಎಲ್ಲಿಂದ ಬಂದಿದ್ದು ? ಇವತ್ತು ನಮ್ಮ ಹಳ್ಳಿಗಳಲ್ಲಿ ಒಬ್ಬ ರೈತನ ಮನೆಯಲ್ಲಿ ಅಂತಹ ಕುರ್ಚಿ ಇಲ್ಲ. ಇವತ್ತು ನಮ್ಮ ರೈತರು ಏನು ಕಾಡುಗಳಲ್ಲಿ ಮರಗಳನ್ನು ಬೆಳೆಯುತ್ತಿದ್ದಾರೆ ಅವರನ್ನು ಈ ಅಧಿಕಾರಿಗಳು ಏಕೆ ಕಳ್ಳರಂತೆ ನೋಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇವತ್ತು ಕಾಡುಗಳಲ್ಲಿ ಐ.ಎಫ್.ಎಸ್ ಅಧಿಕಾರಿಗಳು ಹೆಚ್ಚು ಮಂದಿ ಇದ್ದಾರೆ. ಇವತ್ತು ನಾವು ಮಲೆನಾಡಿನ ರಸ್ತೆಗಳಲ್ಲಿ ಬಸ್‌ನಲ್ಲಿ ಹೋಗುವಾಗ ರಸ್ತೆಗಳ ಪಕ್ಕದಲ್ಲಿ ಮುಂಗಾರು ಗಾಳಿಯಿಂದ ಕೆಲವು ಮರಗಳು ಉರುಳಿ ಬಿದ್ದಿರುವುದನ್ನು ನಾವು ನೋಡುತ್ತಿದ್ದೇವೆ, ಈ ಐ.ಎಫ್.ಎಸ್. ಅಧಿಕಾರಿಗಳು ಆ ಮರ ಬಿದ್ದು ೧೦ ವರ್ಷಗಳಾಗಿದ್ದರೂ ಆ ಬಗ್ಗೆ ಗಮನ ಕೊಟ್ಟು ನೋಡುವುದಿಲ್ಲ. ಇವತ್ತು ಇಂತಹ ಬೀಟೆ ಮರಗಳು ಕೂಡಾ ಬಿದ್ದು ಸುಟ್ಟುಹೋಗುತ್ತಿವೆ. ಇವುಗಳ ಬಗ್ಗೆ ಯಾರೂ ಗಮನ ಕೊಟ್ಟಿಲ್ಲ. ಆದರೆ ಒಬ್ಬ ರೈತ ತಾನು ಬೆಳೆದ ಬಿದಿರುಗಳನ್ನು ಮುರಿದರೆ ಆತನಿಗೆ ದಂಡ ಹಾಕತಕ್ಕದ್ದು, ಒಳಗಿನ ವ್ಯವಹಾರವನ್ನು ಮಾಡಿಕೊಂಡು ಬರತಕ್ಕದ್ದು ನಡೆಯುತ್ತಾ ಇದೆ. ಇವತ್ತು ಹೆಚ್ಚು ಕಡಿಮೆ ನೂರಾರು ವರ್ಷಗಳಿಂದ ಮರಗಳು ಬಿದ್ದು ಸುಟ್ಟುಹೋಗುತ್ತಿವೆ. ಇತ್ತೀಚೆಗೆ ಎಲ್ಲಾ ಭಾಗಕ್ಕೂ ಬಂದಿರತಕ್ಕ ಐ.ಎಫ್.ಎಸ್. ಅಧಿಕಾರಿಗಳು ನೋಡುವುದಕ್ಕೆ ಹೋಗಿಲ್ಲ. ಇವತ್ತು ಎಲ್ಲೆಲ್ಲಿ ಗ್ರಾಮ ಸರಹದ್ದಿನಲ್ಲಿ ಇಂತಹ ಮರಗಳು ಬಿದ್ದಿರುತ್ತವೆ ಅವನ್ನು ಆಯಾಯ ಗ್ರಾಮಸ್ಥರಿಗೆ ಕೊಟ್ಟರೆ ಅವರು ಅವುಗಳನ್ನು ಹೇರಿಕೊಂಡು ಬಂದು ಮನೆಗಳನ್ನು ಕಟ್ಟಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಇಷ್ಟು ಮಾಡಿದರೆ, ಉಳಿದ ಬೆಲೆಬಾಳುವ ಮರಗಳನ್ನು ತಾವು ಕಡಿದು ತಂದು ಕಾನೂನು ರೀತ್ಯ ವಿಲೇವಾರಿ

ಮಾಡಬಹುದು. ಈ ರೀತಿ ಆಯಾಯ ಗ್ರಾಮದ ಜನರಿಗೆ ಮನೆ ಕಟ್ಟುವುದಕ್ಕೆ ಬಿದ್ದಿರುವ ಮರಗಳನ್ನು ಕೊಟ್ಟರೆ ಮಲೆನಾಡಿನ ಹಳ್ಳಿಗಳ ಜನ ಯಾರೂ ನಾಟಾವನ್ನು ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲ. ಇಂತಹ ವ್ಯವಸ್ಥೆ ಮಾಡಿದರೆ ಸರ್ಕಾರ ನಿಜವಾಗಿಯೂ ಒಂದು ದೊಡ್ಡ ಉಪಕಾರ ಮಾಡಿದಹಾಗೆ ಆಗುತ್ತದೆ. ಇವತ್ತು ಇಂತಹ ಮರಗಳಿಗೆ ಬೆಲೆ ಕಟ್ಟುವುದಕ್ಕೆ ಹೋಗಬೇಕು. ಈ ಮರಗಳು ಸಾವಿರಾರು ವರ್ಷಗಳಿಂದ ಸುಟ್ಟು ಹೋಗುತ್ತಿವೆ. ಈಗಲಾದರೂ ಇವುಗಳನ್ನು ರೈತರಿಗೆ ಹಂಚಿ, ಇವತ್ತು ಮರಗಳನ್ನು ಬೆಳೆಸುವ ಬಗ್ಗೆ ಸರ್ಕಾರದ ಪಾಲಿಸಿ ಇದೆ. ಇವತ್ತು ನಮ್ಮ ರೈತ ಆತನ ಜಾಗದಲ್ಲಿ ಮರವನ್ನು ಬೆಳೆದರೆ ಆ ನಂತರ ಅದನ್ನು ಕಡಿಯಲು ಆತ ಲೈಸೆನ್ಸ್ ಪಡೆಯವುದಕ್ಕೇ ಇವತ್ತು ಸಾಧ್ಯವಾಗುತ್ತಿಲ್ಲ. ಇವತ್ತು ಮರವನ್ನು ಕಡೆಯುವಾಗ ಕಾಂಟ್ರ್ಯಾಕ್ಟ್ ಕೊಡಬೇಕು. ಆಗ ಮಾತ್ರ ಸ್ವಲ್ಪ ಸಾಧ್ಯವಾಗುತ್ತದೆ ಇವತ್ತು ಒಬ್ಬ ರೈತ ಮರ ಕಡಿಯಲು ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಅರ್ಜಿ ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್ ಅಸಿಸ್ಟೆಂಟ್ ಕಮಿಷನರ್, ಡಿ.ಎಫ್.ಓ, ರೇಂಜರ್, ಮತ್ತೆ ಡಿ.ಸಿ ಯವರೆಗೆ ರೆಫರ್ ಆಗಬೇಕಾಗುತ್ತದೆ. ಪ್ರತಿಯೊಂದು ಹಂತದಲ್ಲೂ ಅವನ ಅಪ್ಲಿಕೇಶನ್ ರಿಜೆಕ್ಟ್ ಮಾಡುವುದಕ್ಕೆ ಕಾರಣ ಹುಡುಕುತ್ತಾರೆಯೇ ಹೊರತು ಏನಾದರೂ ಮಾಡಿ ಆತ ಬೆಳೆದಿದ್ದಾನೆ, ಅವನಿಗೆ ಕೊಡಬೇಕೆಂದು ಯೋಚನೆಯನ್ನೇ ಮಾಡುವುದಿಲ್ಲ. ಇದನ್ನು ಇವತ್ತು ಸರಿಪಡಿಸಬೇಕಾಗುತ್ತದೆ ಇದರಿಂದ ಇವತ್ತು ಬಾರಿ ದೊಡ್ಡ ಅನಾಹುತವಾಗಿದೆ. ಬಹಳ ಜನರು ಸ್ವಂತ ಜಮೀನಿನಲ್ಲಿ ಬೆಳೆದಿರುವ ಕಟ್ಟಿಗೆಯನ್ನು ಕಡಿಯಬೇಕೆಂದರೂ ಅದು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಮರ ಬೆಳೆಸುವ ಕಾರ್ಯಕ್ರಮವನ್ನು ಯಾವ ರೀತಿ ಮಾಡುತ್ತಾರೋ ಗೊತ್ತಿಲ್ಲ. ಇಂತಹ ಪರಿಸ್ಥಿತಿಗೆ ನೀವು ತಲುಪಿದ್ದೀರಿ ನಮ್ಮಂಥಹವರೂ ಕೂಡಾ ಲೈಸೆನ್ಸ್ ಮಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿ ಇವತ್ತು ನಮ್ಮ ಭಾಗದಲ್ಲಿ ಇದೆ. ಇವತ್ತು ಮರ ನೆಡುವ ಕಾರ್ಯಕ್ರಮದಲ್ಲಿ ಏನು ಹೊಸ ಜಾತಿಯ ಮರಗಳನ್ನು ಮಾತ್ರ ನೆಡುತ್ತಿದ್ದೀರಿ ಅದರ ಜೊತೆಗೆ ಅಲ್ಲಿಯ ಸ್ಥಳೀಯ ಮರಗಳನ್ನೂ ನೆಡತಕ್ಕದ್ದು ಒಳ್ಳೆಯದು ಇದೆ. ಇವತ್ತು ಸ್ಥಳೀಯ ಮರಗಳಾದ ಮತ್ತಿ, ಹೊನ್ನೆ ಬೀಟೆ ಮರಗಳನ್ನು ನೆಡಿ. ಮತ್ತು ಅವುಗಳ ಜೊತೆ ಹಣ್ಣು ಬಿಡುವಂತಹ ಮರಗಳನ್ನು ನೆಡಿ, ಇವತ್ತು ಕಾಡು ಜಾತಿಯ ಮಾವಿನ ಮರಗಳನ್ನು ಅಲ್ಲಿ ನೆಡಿ. ಅವುಗಳು ತನ್ನಷ್ಟಕ್ಕೆ ತಾನೇ ಬೆಳೆಯುತ್ತವೆ. ಇಂತಹದ್ದನ್ನು ಮಾಡಬೇಕೇ ಹೊರತು ಕೇವಲ ನೀಲಗಿರಿ ಹಾಗೂ ಇತರ ಮರಗಳನ್ನು ಬೆಳೆಯುವುದರಿಂದ ಇವತ್ತು ಕಾಡಿನಲ್ಲಿನ ಪ್ರಾಣಿಗಳು ಕೂಡಾ ಬದುಕುವುದಕ್ಕೆ ಕಷ್ಟವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಡು ಪ್ರಾಣಿಗಳು ತಿನ್ನಲು ಅಲ್ಲಿ ಏನೂ ಸಿಗುವುದಿಲ್ಲ. ಇವತ್ತಿನದಿವಸ ನೀಲಗಿರಿ ಗಿಡಗಳ ಮೇಲೆ ಯಾವ ಪಕ್ಷಿಗಳೂ ಕೂರುವುದಿಲ್ಲ ಗೂಡನ್ನು ಕಟ್ಟುವುದಿಲ್ಲ, ಮೊಟ್ಟೆಯನ್ನು ಇಡುವುದಿಲ್ಲ ಎಂಬ ಅಂಶ ತಿಳಿದುಬಂದಿದೆ. ಕಾಡೆಲ್ಲಾ ನೀಲಗಿರಿ ಮರಗಳಾದರೆ ಪ್ರಾಣಿ ಪಕ್ಷಿಗಳು ಎಲ್ಲಿಗೆ ಹೋಗಬೇಕು ? ಆದ್ದರಿಂದ ಬರೀ ಈ ಮರಗಳನ್ನು ಬೆಳೆಯುವುದರ ಜೊತೆಗೆ ಸ್ಥಳೀಯ ಮರಗಳನ್ನು ಕೂಡಾ ಬೆಳೆಯಬೇಕಾಗುತ್ತದೆ. ಹಣ್ಣು ಬಿಡುವ ಮರಗಳ ಜೊತೆಗೆ ಬಹಳ ವರ್ಷಕಾಲ ಬದುಕಬಲ್ಲಂತಹ ನಂದಿ, ಮತ್ತಿ ಮುಂತಾದ ಮರಗಳನ್ನು ಕೂಡಾ ಬೆಳೆಯಬೇಕಾಗುತ್ತದೆ. ಇವತ್ತು ಒಂದೇ ಜಾತಿಯ ಮರಗಳನ್ನು ಬೆಳೆಯುವುದು ಬೇಡ ಎನ್ನುವ ಪರಿಸ್ಥಿತಿಗೆ ಬಂದಿದ್ದೇವೆ ಇನ್ನು ನಮ್ಮ ಕಾಡಿನಲ್ಲಿ ಸಿ ಅಂಡ್ ಡಿ ಲ್ಯಾಂಡ್ ಎಂದು ಮಾಡಿದ್ದಾರೆ ಅದನ್ನು ಅವೈಜ್ಞಾನಿಕವಾಗಿ ಮಾಡಿದ್ದಾರೆ. ಇವತ್ತು ಬಯಲು ಸೀಮೆಯಲ್ಲಿ ಸಿ. ಅಂಡ್ ಡಿ. ಲ್ಯಾಂಡ್ ಎಂದು ಮಾಡಬಹುದು. ಇವತ್ತು ಮಲೆನಾಡಿನಲ್ಲಿ ಯಾವುದೋ ಜಮೀನಿನಲ್ಲಿ ಬೆಳೆಯುವುದಕ್ಕೆ ಬರುವುದಿಲ್ಲವೆಂದು ಅದನ್ನು ಸಿ. ಅಂಡ್ ಡಿ. ಲ್ಯಾಂಡ್ ಎಂದು ಮಾಡಿ ಬಂಜರು ಭೂಮಿ ಎಂದು ಹೇಳಿ ಮಾಡಿದ್ದಾರೆ.

೪—೩೦ ಪಿ. ಎಂ.

ಹಿಂದೆ ಯಾವುದೋ ಕಾಲದಲ್ಲಿ ಕಂದಾಯ ಇಲಾಖೆಗೆ ಸೇರಿದ್ದಂಥ ಜಮೀನನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ ಆದರೆ ಅವರು ಯಾವ ಜಮೀನನ್ನು ಕೊಟ್ಟಿದ್ದಾರೆ, ಯಾವ ಜಮೀನನ್ನು ಬಿಟ್ಟಿದ್ದಾರೆ ಎಂಬುದು ಏನೂ ಅರ್ಥವಾಗುವುದಿಲ್ಲ ಏಕೆಂದರೆ ಆ ಜಮೀನನ್ನು ಸರಿಯಾಗಿ ಅಳತೆಮಾಡಿ ಅವರಿಗೆ ವರ್ಗಾವಣೆ ಮಾಡಿಕೊಟ್ಟಿಲ್ಲ. ಇದರಿಂದ ಏನಾಗಿದೆ ಎಂದರೆ, ಅರಣ್ಯ ಇಲಾಖೆಯವರು ಯಾವ ಯಾವುದೋ ಜಮೀನನ್ನು ಅಳತೆಮಾಡಿಕೊಂಡು ಈ ಗೋಮಾಳ, ಈ ಖಾಲಿ ಜಮೀನು, ಇದೆಲ್ಲವೂ ನಮ್ಮ ಅರಣ್ಯ ಇಲಾಖೆಗೇ ಸೇರಿದ್ದು ಎಂದು ಅವರು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಜನರು

ಕಟ್ಟಿಕೊಂಡಿರತಕ್ಕ ಮನೆಯ ಜಾಗವನ್ನು ಬಿಟ್ಟರೆ ಉಳಿದುದೆಲ್ಲಾ ಅರಣ್ಯ ಇಲಾಖೆಯ ಜಮೀನು ಎಂದು ಹೇಳುವ ಪರಿಸ್ಥಿತಿಗೆ ಬಂದಿದೆ. ಅಂದರೆ ಅವರು ತಮ್ಮ ಮನೆಯಿಂದ ಹೊರಗಡೆಯೇ ಬರುವಂತಿಲ್ಲ. ಅವರು ಹೊರಗೆ ಬಂದರೆ ಅದು ಅರಣ್ಯ ಇಲಾಖೆಗೆ ಸೇರಿದ ಜಾಗ ಎನ್ನುವಂತಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಮಲೆನಾಡಿನ ಪಕ್ಕದಲ್ಲಿರತಕ್ಕ ಅರ್ಧ ಭಾಗದಷ್ಟು ಜಮೀನನ್ನಾದರೂ ತಾವು ಉಳಿಸಬೇಕು. ಇಲ್ಲದಿದ್ದರೆ ಆ ಜನರು ಮನೆಯಿಂದ ಹೊರಗಡೆ ಕಾಲೂ ಕೂಡ ಇಡುವಂತಿಲ್ಲ. ಅವರು ಜೀವನ ಮಾಡುವುದಕ್ಕಾಗುವುದಿಲ್ಲ. ಮಲೆನಾಡು ಮತ್ತು ಜೋಗಿನ ಕೆಲವು ಪ್ರದೇಶಗಳಲ್ಲಿ ಕಾಡುಕೋಣ, ಕಾಡು ಹಂದಿ, ಮುಂತಾದ ಕಾಡು ಪ್ರಾಣಿಗಳು ಬೆಳೆಗಳನ್ನು ಹಾಳುಮಾಡುವುದನ್ನು ನೋಡುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಕಾಡು ಮೃಗಗಳು ಜನರನ್ನೂ ಕೂಡ ತಿನ್ನುವುದಕ್ಕೆ ಅವಕಾಶವಿದೆ. ಪರಿಸ್ಥಿತಿ ಹೀಗಿರುವಾಗ ಮನೆಯ ಪಕ್ಕದಲ್ಲೇ ಅರಣ್ಯ ಇಲಾಖೆಯವರು ಮರಗಳನ್ನು ನೆಟ್ಟರೆ ಜನರು ಯಾವರೀತಿ ಬದುಕಬೇಕು? ಈ ತೊಂದರೆಯಿಂದ ಜನ ಪಾರಾಗಬೇಕಾದರೆ ಅರಣ್ಯ ಇಲಾಖೆಗೆ ಕೊಟ್ಟಿರತಕ್ಕ ಜಾಗವನ್ನು ವಾಪಸು ತೆಗೆದುಕೊಳ್ಳಿ. ರಾಜ್ಯ ಸರ್ಕಾರದವರು ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯ ಜಮೀನನ್ನು ಕೊಟ್ಟಿರುವುದರಿಂದ ಇಂಥ ತೊಂದರೆಗಳು ಉದ್ಭವಿಸುತ್ತಿವೆ. ಇದನ್ನು ಗಮನಿಸಿ ನಾವು ತಪ್ಪಾಗಿ ಈ ಜಮೀನನ್ನು ನಿಮಗೆ ಕೊಟ್ಟಿದ್ದೇವೆಂದು ಹೇಳಿ ಅದನ್ನು ವಾಪಸು ತೆಗೆದುಕೊಳ್ಳಬೇಕು. ನಮ್ಮ ಮಲೆನಾಡಿನಲ್ಲಿ ಒಂದೊಂದು ತಾಲೂಕಿನಲ್ಲೂ ಸುಮಾರು ೧೦ ಸಾವಿರ ಎಕರೆಯಷ್ಟು ಜಮೀನು ಬಡವರಿಗೆ ಹಂಚುವ ಸಲುವಾಗಿ ಸಿಕ್ಕುತ್ತದೆ. ನಾನು ಈಗಾಗಲೇ ಹೇಳಿದಂತೆ ಮಲೆನಾಡಿನ ಪಕ್ಕದಲ್ಲಿರುವ ಸುಮಾರು ಅರ್ಧದಷ್ಟು ಭೂಮಿಯನ್ನಾದರೂ ಸರ್ಕಾರದವರು ಅರಣ್ಯ ಇಲಾಖೆಯಿಂದ ವಾಪಸ್ಸು ತೆಗೆದುಕೊಂಡು ತಾವು ಉಳಿಸಿಕೊಳ್ಳಬೇಕು. ನಮ್ಮ ಮಲೆನಾಡು ಭಾಗದಲ್ಲಿ ವಾಸ ಮಾಡುತ್ತಿರುವ ಜನರಿಗೆ ಯಾವುದೇ ರೀತಿಯಲ್ಲೂ ತೊಂದರೆಯನ್ನು ಕೊಡುತ್ತಿಲ್ಲ ಎಂದು ಇಲ್ಲಿ ಮಂತ್ರಿಗಳು ಅಥವಾ ಮೇಲಧಿಕಾರಿಗಳು ಹೇಳಬಹುದು. ಆದರೆ ಅಲ್ಲಿಗೆ ಹೋಗಿ ನೋಡಿದರೆ ಆ ಜನರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಕಾಡು ಪ್ರಾಣಿಗಳನ್ನು ಬೆನ್ನಟ್ಟಿಕೊಂಡು ಹೋಗುವಂತೆ ಹೋಗುತ್ತಿದ್ದಾರೆ. ಇದು ತಪ್ಪಬೇಕು.

ಇನ್ನು ಶರಾವತಿ ಪ್ರಾಜೆಕ್ಟನ್ನು ಕಟ್ಟುತಕ್ಕ ಸಂದರ್ಭದಲ್ಲಿ ಅಲ್ಲಿ ಮುಳುಗಡೆ ಆದಂಥ ರೈತರನ್ನು ಬೇರೆ ಬೇರೆ ಕಡೆಗಳಿಗೆ ಕರೆದುಕೊಂಡು ಹೋಗಿ ಸರ್ಕಾರದವರೇ ಜಾಗಗಳನ್ನು ಕೊಟ್ಟು ಅಲ್ಲಿ ಕೂಡಿಸಿದ್ದಾರೆ. ಆದರೆ ಅವರಿಗೆ ಯಾವುದೇ ರೀತಿಯ ಹಕ್ಕುಪತ್ರವನ್ನೂ ಕೊಟ್ಟಿಲ್ಲ. ಆ ಜನರು ವ್ಯವಸಾಯ ಮಾಡಿಕೊಂಡು ತೆಂಗಿನ ತೋಟಗಳನ್ನು ಮಾಡಿಕೊಂಡಿದ್ದಾರೆ. ಹೊಸನಗರ, ಶಿವಮೊಗ್ಗ, ಸಾಗರ, ಈ ತಾಲೂಕುಗಳಲ್ಲಿ ಇಂಥ ಜನರು ಇದ್ದಾರೆ. ಇವರಿಗೆ ನಿಮ್ಮ ಅರಣ್ಯ ಇಲಾಖೆಯ ಜನರು ಬಹಳ ಕಿರುಕುಳವನ್ನು ಕೊಟ್ಟು ಆ ಜಾಗಗಳನ್ನು ಬಿಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇವರಿಗೆ ಹಕ್ಕುಪತ್ರಗಳು ಇಲ್ಲದಿರುವುದರಿಂದ ಈ ಕಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ನೀವು ಇಲ್ಲಿ ಏನು ಹೇಳುತ್ತೀರಿ, ನಾವು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವವರನ್ನು ಅಲ್ಲಿಂದ ಬಿಡಿಸುವುದಿಲ್ಲ ಎಂದು ಹೇಳುತ್ತೀರಿ ಆದರೆ ಅರಣ್ಯ ಇಲಾಖೆಯವರು ಅದು ಏನೇ ಆಗಲಿ ನಾವು ಈ ಜಮೀನಿನಿಂದ ನಿಮ್ಮನ್ನು ಬಿಡಿಸುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಶರಾವತಿ ಯೋಜನೆಯ ಅಡಿಯಲ್ಲಿ ಮುಳುಗಡೆಯಾದ ಜನರನ್ನು ನೀವೇ ಏನು ಕರೆದುಕೊಂಡು ಹೋಗಿ ಜಾಗವನ್ನು ಕೊಟ್ಟು ಇಟ್ಟಿದ್ದೀರಿ ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಕಟ್ಟಿಗೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ರೈತರು ಮನೆಗಳಲ್ಲಿ ಅಡಿಗೆ ಮಾಡಲು ಕಟ್ಟಿಗೆ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಅರಣ್ಯ ಇಲಾಖೆಯವರೇ ಸಬ್ಸಿಡಿ ರೇಟ್‌ನಲ್ಲಿ ಸೌದೆಯನ್ನೋ, ಸೀಮೆ ಎಣ್ಣೆಯನ್ನೋ, ಒದಗಿಸುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅಸ್ತ್ರ ಒಲೆಯನ್ನು ಆ ಜನರಿಗೆ ಸಬ್ಸಿಡಿ ರೇಟಿನಲ್ಲಿ ಒದಗಿಸುವ ವ್ಯವಸ್ಥೆಯನ್ನಾದರೂ ಮಾಡಿದರೆ ಅದರಿಂದ ಕಟ್ಟಿಗೆ ಉಳಿತಾಯವಾಗುತ್ತದೆ. ಇದರಲ್ಲಿ ಇನ್ನೊಂದು ತಾರತಮ್ಯ ಏನಿದೆ ಎಂದರೆ, ಸಿದ್ದಾಪುರ ಮತ್ತು ಸಾಗರ ಎರಡು ಪ್ರದೇಶಗಳೂ ಕೂಡ ಒಂದೇ ರೀತಿಯ ಮಲೆನಾಡು ಪ್ರದೇಶಗಳು. ಸಿದ್ದಾಪುರದಲ್ಲಿ ಒಂದು ಟನ್ ಸೌದೆ ೮೦ ರೂಪಾಯಿ ಬೆಲೆ ಇದೆ. ಆದರೆ ಅದೇ ಸಾಗರದಲ್ಲಿ ಹಿಂದೆ ೧೩೦ ರೂಪಾಯಿ ಇದ್ದುದು ಇವತ್ತು ೧೮೦ ರೂಪಾಯಿ ಆಗಿದೆ. ಆದ್ದರಿಂದ ಈ ತಾರತಮ್ಯವನ್ನು ಹೋಗಲಾಡಿಸಲು

ಸಿದ್ದಾಪುರದಲ್ಲಿ ಕಟ್ಟಿಗೆಯನ್ನು ಟನ್‌ಗೆ ೮೦ ರೂಪಾಯಿಯಂತೆ ಏನು ಮಾರಾಟ ಮಾಡುತ್ತಿದ್ದಾರೆ ಅದೇ ದರದಲ್ಲಿ ಸಾಗರದಲ್ಲೂ ಮಾರಾಟ ಮಾಡಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಭಾಗದಲ್ಲಿ ಭತ್ತವನ್ನು ಅಕ್ಕಿ ಮಾಡಿಸಬೇಕಾದರೆ ವಿಲೇಜ್ ಅಕೌಂಟೆಂಟ್‌ನಿಂದ ಅನುಮತಿಯನ್ನು ರೈತರು ತರಬೇಕಾಗಿದೆ. ಆ ವಿಲೇಜ್ ಅಕೌಂಟೆಂಟ್‌ಗಳು ಎಲ್ಲಿಯೂ ಸಿಕ್ಕುವುದಿಲ್ಲ. ರೈತರು ಅವರನ್ನು ಹುಡುಕಿಕೊಂಡು ಓಡಾಡುವುದಕ್ಕಾಗುವುದಿಲ್ಲ. ನಮ್ಮ ಮಲೆನಾಡಿನಲ್ಲಿ ಒಂದೊಂದು ಕುಟುಂಬದಲ್ಲಿ ೨೦—೮೦ ಕೆಲವು ಸಂಸಾರಗಳಲ್ಲಿ ೧೦೦ ಜನರವರೆಗೂ ಇರುತ್ತಾರೆ. ನಮ್ಮ ಮನೆಯಲ್ಲಿ ೨೦ ಜನರಿದ್ದೇವೆ. ನಾವು ಒಂದು ತಿಂಗಳಿಗೆ ಕನಿಷ್ಠ ೪-೫ ಸಾರಿಯಾದರೂ ಅಕ್ಕಿಯನ್ನು ಮಾಡಿಸಿಕೊಂಡು ಬರಲು ಮಿಲ್‌ಗೆ ಹೋಗಬೇಕಾಗುತ್ತದೆ. ಇತ್ತೀಚೆಗೆ ಈ ಒಂದು ನಿಯಮವನ್ನು ಸರ್ಕಾರದವರು ಮಾಡಿರುವುದರಿಂದ ನಮ್ಮ ಭಾಗದ ಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ತಾವು ಈ ಕಾನೂನನ್ನು ಸಡಿಲಗೊಳಿಸಿ ರೈತರು ಅಕ್ಕಿಯನ್ನು ಮಾಡಿಸಿಕೊಂಡು ಬರುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಆಹಾರ ಖಾತೆಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ವಾಹನ ತೆರಿಗೆಯ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಈ ತೆರಿಗೆಯನ್ನು ಕಂತಿನ ರೂಪದಲ್ಲಿ ಕಟ್ಟಲು ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಗೃಹ ನಿರ್ಮಾಣದ ಬಗ್ಗೆ ಒಂದು ಮಾತನ್ನು ಹೇಳಲೇಬೇಕಾಗಿದೆ. ಕಂಟ್ರಾಕ್ಟ್‌ನ್ನು ಕೊಟ್ಟು ಕಟ್ಟಿಸಿರತಕ್ಕ ಮನೆಗಳಿಗೆ ಅವು ಪೂರ್ತಿ ಆದಮೇಲೆ ಒಂದಕ್ಕೆರಡರಷ್ಟು ಹಣವನ್ನು ನಿಗದಿ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಆ ಮನೆಯನ್ನು ಕಟ್ಟಲು ಎಷ್ಟು ಖರ್ಚು ಬಿದ್ದಿರುತ್ತದೆ ಎಂಬುದನ್ನು ಲೆಕ್ಕ ಹಾಕಿ ಮೇಲೆ ಸ್ವಲ್ಪ ಮಾತ್ರ ಆದಾಯವನ್ನು ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹಳ ಪ್ರಮುಖವಾದ ವಿಚಾರ ಎಂದರೆ ನಾನು ಅರಣ್ಯ ಇಲಾಖೆಯ ಬಗ್ಗೆ ಹಲವಾರು ಸಲಹೆಗಳನ್ನು ನೀಡಿದ್ದೇನೆ. ಆದರೆ ಬಿದಿರು ಕೆಲಸವನ್ನು ಮಾಡತಕ್ಕ ಕಾರ್ಮಿಕರ ತೊಂದರೆಯ ಬಗ್ಗೆ ಒಂದೇ ಒಂದು ಮಾತನ್ನು ಹೇಳಲೇಬೇಕಾಗಿದೆ. ಈ ಬಿದಿರು ಕೆಲಸಮಾಡತಕ್ಕ ಜನರು ಒಂದೊಂದು ತಾಲೂಕಿನಲ್ಲಿ ೫೦ ಕುಟುಂಬಗಳಿಗಿಂತ ಹೆಚ್ಚು ಇರುವುದಿಲ್ಲ. ಇವರನ್ನು ಕೊರಮರು ಅಥವಾ ಮೇಧರು ಎಂಬು ಕರೆಯುತ್ತೇವೆ. ಇವರು ಬಿದಿರಿನ ಕೆಲಸವನ್ನೇ ನಂಬಿ ಜೀವನ ಮಾಡತಕ್ಕವರು. ಅವರಿಗೆ ಬೇಕಾದ ಬಿದಿರನ್ನು ಕಾಡಿನಿಂದ ತರಬೇಕಾಗುತ್ತದೆ. ಇದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಲೈಸೆನ್ಸ್ ಮೂಲಕವೇ ಬಿದಿರನ್ನು ತಂದು ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಇವರು ಕಳ್ಳತನದಲ್ಲಿ ಏನೂ ಮಾಡುವುದಿಲ್ಲ. ಇವರಿಗೆ ಯಾವುದೇ ತೊಂದರೆಯೂ ಆಗದಂತೆ ಸುಲಭವಾಗಿ ಲೈಸೆನ್ಸ್ ದೊರಕುವಂತೆ ಮಾಡುವುದಾದರೆ ಮಾಡಿ, ಇಲ್ಲದಿದ್ದರೆ ಇವರ ಮನೆಯ ಬಾಗಿಲಿಗೇ ಬಿದಿರನ್ನು ಅರಣ್ಯ ಇಲಾಖೆಯ ಮೂಲಕ ಒದಗಿಸುವ ವ್ಯವಸ್ಥೆ ಮಾಡಿ. ಇದರಿಂದ ಸರ್ಕಾರಕ್ಕೆ ಯಾವುದೇ ತೊಂದರೆಯೂ ಆಗುವುದಿಲ್ಲ. ನಾನು ಈಗಾಗಲೇ ಹೇಳಿದಂತೆ ಈ ಕಸುಬಿನ ಜನರು ಒಂದೊಂದು ತಾಲೂಕಿನಲ್ಲಿ ಗರಿಷ್ಠ ೫೦ ಕುಟುಂಬಗಳು ಇರಬಹುದು. ಇವರು ಬಿದಿರಿನ ಕೆಲಸವನ್ನೇ ಮಾಡಿ ಜೀವನ ಮಾಡುವವರು. ಆದ್ದರಿಂದ ಇವರ ಮನೆಯ ಬಾಗಿಲಿಗೆ ಬಿದಿರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ(ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಗ್ಗೆ ನಾನು ಮೊದಲನೆಯದಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇವತ್ತು ಆಹಾರ ಇಲಾಖೆ, ಅರಣ್ಯ ಇಲಾಖೆ, ಗೃಹ ಇಲಾಖೆ, ಇನ್ನೂ ಮುಂತಾದ ದೊಡ್ಡ ದೊಡ್ಡ ಇಲಾಖೆಗಳ ಬೇಡಿಕೆಗಳನ್ನೆಲ್ಲಾ ಒಟ್ಟಿಗೇ ಸಭೆಯ ಮುಂದಿಟ್ಟು ಒಂದೇ ದಿನದಲ್ಲಿ ಇವುಗಳಿಗೆಲ್ಲಾ ಅನುಮೋದನೆಯನ್ನು ನೀಡಬೇಕೆಂದು ತಾವು ಹೇಳಿದ್ದೀರಿ. ಈ ಇಲಾಖೆಗಳ ಬಗ್ಗೆ ನಾವು ಹಲವಾರು ವಿಷಯಗಳನ್ನು ಹೇಳಬೇಕಾದುದು ಇದ್ದರೂ ಕೂಡ ಸಮಯದ ಅಭಾವದಿಂದಾಗಿ ನಮ್ಮ ಎಲ್ಲ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಲು ಸಾಧ್ಯವಿಲ್ಲವಾಗಿರುವುದರಿಂದ ನಾನು ಆದಷ್ಟೂ ಪ್ರಯತ್ನಿಸಿ

ತಾವು ಕೊಟ್ಟಿರುವ ಕಾಲದಲ್ಲಿ ಮುಗಿಸುತ್ತೇನೆಂದು ಹೇಳಬಯಸುತ್ತೇನೆ. ಈ ನಿಗಮದ ೧೯೮೪–೮೫ನೇ ಸಾಲಿನ ವಾರ್ಷಿಕ ವರದಿಯಲ್ಲಿ "ಕಾರ್ಮಿಕರ ಬಾಂಧವ್ಯ" ದ ಬಗ್ಗೆ ಈ ರೀತಿ ಹೇಳಿದ್ದಾರೆ

> "ಸಂಸ್ಥೆಯು ೧೯೮೪–೮೫ರಲ್ಲಿ ಕಾರ್ಮಿಕರೊಂದಿಗೆ ಸೌಹಾರ್ದಯುತ ಬಾಂಧವ್ಯವನ್ನು ಹೊಂದಿತ್ತು ಪ್ರಸಕ್ತ ವರ್ಷದಲ್ಲಿ ಸಂಸ್ಥೆಯು ಸಂಧಾನ ನಿರ್ಣಯದಂತೆ ತನ್ನ ನೌಕರರಿಗೆ ೫ ಬಾರಿ ತುಟ್ಟಿಭತ್ಯವನ್ನು ಮಂಜೂರು ಮಾಡಲಾಯಿತು"

ಎಂದು ತಿಳಿಸಿದ್ದಾರೆ. ಸ್ವಾಮಿ, ಇವರು ಹೇಳಿರತಕ್ಕದ್ದು ಸರಿಯಲ್ಲ. ಮಾನ್ಯ ಸಚಿವರಿಗೆ ಯಾರೋ ಕೆಲವರು ತಪ್ಪು ಕಲ್ಪನೆ ಬರುವಂತೆ ಮಾಡಿದ್ದಾರೆ. ಈ ವರದಿಯ ೪೯ನೇ ಪುಟವನ್ನು ತಾವು ನೋಡಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ಮತ್ತು ಕೆಲಸಗಾರರ ಮಹಾಮಂಡಲವು ದಿನಾಂಕ ೨೦–೨–೧೯೮೫ ರಂದು ರಾಜ್ಯಾದ್ಯಂತ ಮುಷ್ಕರ ಹೂಡಲು ನಿರ್ಧರಿಸಿತು, ಆದರೆ ಸಂಸ್ಥೆಯ ಸಮಯ ಸ್ಫೂರ್ತಿ ನಿಲುವಿನಿಂದ ಮುಷ್ಕರವು ನಡೆಯಲಿಲ್ಲವೆಂದು ತಿಳಿಸಿದ್ದಾರೆ ಸಾವಿರಾರು ಜನರನ್ನು ಜೈಲ್‌ಗೆ ಕಳುಹಿಸಿ, ಸಸ್ಪೆಂಡ್ ಮಾಡಿ ಮತ್ತೆ ಸಮಯ ಸ್ಫೂರ್ತಿ ಎಂದು ಹೇಳಿದರೆ ಹೇಗೆ ಸಂಸ್ಥೆಯ ಮತ್ತು ಕಾರ್ಮಿಕರ ಬಾಂಧವ್ಯ ಚೆನ್ನಾಗಿ ಇರಲಿಲ್ಲ. ಇದು ಆಡಳಿತ ವರ್ಗದವರ ಕುತಂತ್ರ ಆಡಳಿತ ವರ್ಗದವರ ನೀತಿಯಿಂದಾಗಿ ಕಾರ್ಮಿಕರು ಮುಷ್ಕರ ಹೂಡಬೇಕಾಯಿತು. ಮಾನ್ಯ ಸಚಿವರು ಈ ಆಡಳಿತ ವರ್ಗದವರ ಮೇಲೆ ಸರಿಯಾದ ಹಿಡಿತವನ್ನು ಸಾಧಿಸಬೇಕು ಎಂದು ಹೇಳುತ್ತೇನೆ. ಎಲ್ಲಾ ವಿಚಾರಗಳಿಗೂ ಹಗಲೂ ರಾತ್ರಿ ಕೆಲಸ ಮಾಡುವ ಡ್ರೈವರ್, ಕಂಡಕ್ಟರ್‌ಗಳನ್ನು ಹೊಣೆ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಮಾನ್ಯ ಸಚಿವರು ತೀವ್ರ ಗಮನ ಹರಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಮತ್ತು ನಮ್ಮ ರಾಜ್ಯದಲ್ಲಿ ರಾಷ್ಟ್ರೀಕರಣ ಇನ್ನೂ ಪೂರ್ತಿ ಆಗಿಲ್ಲ. ೧೯೮೨ರಲ್ಲೇ ರಾಯಚೂರು ವಿಭಾಗವನ್ನು ರಾಷ್ಟ್ರೀಕರಣ ಮಾಡಬೇಕೆಂದು ತೀರ್ಮಾನವಾಯಿತು, ಆದರೆ ಅದು ಏಕೆ ಇನ್ನೂ ಆಗಲಿಲ್ಲವೆಂಬುದು ಗೊತ್ತಾಗಲಿಲ್ಲ. ಇನ್ನೂ ಚಿತ್ರದುರ್ಗ, ಗುಲ್ಬರ್ಗ ವಿಭಾಗಗಳನ್ನು ರಾಷ್ಟ್ರೀಕರಣ ಮಾಡಬೇಕಾಗಿದೆ. ಎಲ್ಲಾ ವಿಭಾಗಗಳನ್ನೂ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿದರೆ ಒಳ್ಳೆಯದು ಹಾಗೂ ಸಂಸ್ಥೆಗೆ ಲಾಭ ಬರುತ್ತದೆ ಎಂದು ಹೇಳಲು ಇಚ್ಛೆಪಡುತ್ತೇನೆ. ಏಕೆಂದರೆ ಖಾಸಗೀ ಬಸ್ಸುಗಳು ಚೆನ್ನಾಗಿ ಓಡುತ್ತಿದ್ದರೆ ಸರ್ಕಾರೀ ಬಸ್ಸುಗಳು ಖಾಲಿ ಓಡುತ್ತಿವೆ. ಮಾನ್ಯ ಸಚಿವರು ಕೆಲವು ದಿವಸ ಖಾಸಗೀ ಬಸ್ಸುಗಳನ್ನು ಹಿಡಿದು ಹಾಕಿದರು. ಅವುಗಳನ್ನು ಮತ್ತೆ ಏಕೆ ಬಿಟ್ಟರೋ ಗೊತ್ತಾಗಲಿಲ್ಲ. ಖಾಸಗೀ ಬಸ್ಸುಗಳು ಓಡುತ್ತಿರುವುದರಿಂದ ನಮ್ಮ ಸಾರಿಗೆ ಸಂಸ್ಥೆಗೆ ಬಹಳ ನಷ್ಟವಾಗಿದೆ. ಆದುದರಿಂದ ಮಾನ್ಯ ಸಚಿವರು ಎಲ್ಲಾ ವಿಭಾಗಗಳನ್ನೂ ಕೂಡಲೇ ರಾಷ್ಟ್ರೀಕರಣ ಮಾಡುವುದರ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಬಿ.ಟಿ.ಎಸ್. ಬಸ್‌ಗಳಲ್ಲಿ ಓಡಾಡುವವರ ಸಂಖ್ಯೆ ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಓಡಾಡುವವರ ಸಂಖ್ಯೆ ಕಡಿಮೆ ಆಗಿಲ್ಲ, ಹಣ ಕೊಡುವವರ ಸಂಖ್ಯೆ ಕಡಿಮೆ ಆಗಿಲ್ಲ. ಆದರೆ ಬಸ್ಸುಗಳ ಸಂಖ್ಯೆ ಕಡಿಮೆ ಆಗಿದೆ ಹಬ್ಬ ಹರಿದಿನಗಳಲ್ಲಿ ಬಹಳ ಕಡಿಮೆ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಹಬ್ಬದ ದಿನಗಳಲ್ಲಿ ಡ್ರೈವರ್‌ಗಳು ರಜೆ ಇದ್ದರೆ, ಬೇರೆ ಡ್ರೈವರ್‌ಗಳಿಗೆ ಓವರ್ ಟೈಂ ಕೊಟ್ಟು ಬಸ್ಸುಗಳನ್ನು ಓಡಿಸಬೇಕಾಗುತ್ತದೆ. ಹಬ್ಬದ ದಿನಗಳಲ್ಲಿ ಕಡಿಮೆ ಬಸ್ಸುಗಳನ್ನು ಓಡಾಡಲು ಬಿಟ್ಟು ಜನರಿಗೆ ತೊಂದರೆ ಕೊಟ್ಟು ಬಸ್ಸುಗಳಲ್ಲಿ ಓಡಾಡುವವರ ಸಂಖ್ಯೆ ಕಡಿಮೆ ಆಗಿದೆ ಎಂದು ಹೇಳಿದರೆ ಏನು ಅರ್ಥ ? ಇದರ ಕಡೆ ಮಾನ್ಯ ಸಚಿವರು ತೀವ್ರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಸಂಸ್ಥೆಯಲ್ಲಿ ೩೦೦ ಕಂಡಕ್ಟರ್ ಹುದ್ದೆಗಳಿಗೆ ೯೦೦ ಜನರ ಪಟ್ಟಿಯನ್ನು ಸಿದ್ಧಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಅಲ್ಲಿ ಹಣ ಕೊಡುವವರಿಗೆ ಕೆಲಸ ಸಿಗುತ್ತದೆ ಎಂಬ ವಿಷಯ ನನ್ನ ಗಮನಕ್ಕೆ ಬಂದಿದೆ. ಕೆಲಸಕ್ಕೆ ರೇಟ್ ನಿಗದಿ ಮಾಡಿ ೮೦೦೦ ಕೊಡಬೇಕು ಎಂದು ಕೇಳುತ್ತಿದ್ದಾರೆ. ಇದು ನಿಜವಾದ ಪಕ್ಷದಲ್ಲಿ ಸಂಬಂಧಪಟ್ಟ ಏಜೆಂಟ್‌ಗಳ ಮೇಲೆ ಉಗ್ರವಾದ ಕ್ರಮವನ್ನು ಮಾನ್ಯ ಸಚಿವರು ತೆಗೆದುಕೊಳ್ಳಬೇಕು. ನೀವು ಕೆಲಸ ಯಾರಿಗೇ ಕೊಡಿ, ಆದರೆ ಈ ಹಣದ ವ್ಯವಹಾರವನ್ನು ನಿಲ್ಲಿಸಬೇಕು. ಇದು ಎಷ್ಟು ಸತ್ಯವೋ ಗೊತ್ತಿಲ್ಲ. ಆದರೆ ಇದನ್ನು ಮಾನ್ಯ

ಸಚಿವರ ಗಮನಕ್ಕೆ ತಂದಿದ್ದೇನೆ. ತಾವು ಇಂತಹವನ್ನು ಪತ್ತೆ ಹಚ್ಚಿ ಅಂತಹವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆಗ ಸಚಿವರಿಗೂ ಒಳ್ಳೆಯದು, ಸಂಸ್ಥೆಗೂ ಒಳ್ಳೆಯದು. ಹಣ ಕೊಟ್ಟು ಕೆಲಸ ಪಡೆದುಕೊಳ್ಳುವವನು ಅದನ್ನು ಮರಳಿ ಪಡೆಯಲು ಸಂಪಾದನೆಯ ಮಾರ್ಗವನ್ನು ಹುಡುಕುತ್ತಾನೆ. ಆದುದರಿಂದ ಮಾನ್ಯ ಸಚಿವರು ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಮತ್ತು ಈ ಸಂಸ್ಥೆಯಲ್ಲಿ ಸುಮಾರು ೩೫೦೦ ನೌಕರರು ಪೆಂಡಿಂಗ್ ಎನ್‌ಕ್ವಯರಿಯಲ್ಲಿ ಇದ್ದು ಸಸ್ಪೆಂಡ್ ಆಗಿ ಅರ್ಧ ಸಂಬಳವನ್ನು ಪಡೆಯುತ್ತಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ಮಾನ್ಯ ಸಚಿವರು ಕೂಡಲೇ ಈ ವಿಚಾರಣೆಗಳನ್ನು ಮುಗಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕ್ರಮ ತೆಗೆದುಕೊಳ್ಳುವಾಗ ಅವರನ್ನು ಕೆಲಸದಿಂದ ವಜಾ ಮಾಡಬಾರದು. ಸಣ್ಣ ಪ್ರಮಾಣದ ಶಿಕ್ಷೆ ಅಥವಾ ವಾರ್ನಿಂಗ್ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಂಡು ಈ ಅರ್ಧ ಸಂಬಳವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹುಬ್ಬಳ್ಳಿಯಲ್ಲಿ ಒಬ್ಬ ರೀಜನಲ್ ಮ್ಯಾನೇಜರ್ ಮಾಡಿರತಕ್ಕಂತಹ ಒಂದು ಕೃತ್ಯವನ್ನು ಇಲ್ಲಿ ಹೇಳುವುದು ಉಚಿತವೋ ಏನೋ ನನಗೆ ಗೊತ್ತಿಲ್ಲ. ಅವರು ಅಲ್ಲಿಯ ಗೆಸ್ಟ್ ಹೌಸ್‌ನಲ್ಲಿ ಕೆಟ್ಟ ಕೆಲಸವನ್ನು ಮಾಡಿದ್ದಾರೆ. ಸೂಳೆಗಾರಿಕೆ ಮಾಡಿದ್ದಾರೆ. ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದೇ ಅಧಿಕಾರಿ ಬೆಳಗಾಂನಲ್ಲಿ ಕುಡಿದು ಬೆತ್ತಲೆ ಓಡಿದ್ದಾರೆ ಅಲ್ಲಿಯ ಪೋಲೀಸರು ಅವರನ್ನು ಹಿಡಿದು ಅವರ ಮೇಲೆ ಕೇಸ್ ಹಾಕಿದ್ದಾರೆ. ಆ ನಂತರ ಈ ಸಂಸ್ಥೆಯ ಅಧಿಕಾರಿಗಳು ಅವರನ್ನು ಬಿಡಿಸಿಕೊಂಡು ಬಂದಿದ್ದಾರೆ ಒಬ್ಬ ಸಾರಿಗೆ ಸಂಸ್ಥೆಯ ಅಧಿಕಾರಿ ಈ ರೀತಿ ನಡೆದುಕೊಂಡರೆ ಅದು ಇಡೀ ಸಂಸ್ಥೆಗೆ ಕೆಟ್ಟ ಹೆಸರು. ಕೊನೆಗೆ ಅವನನ್ನು ಬೆಂಗಳೂರಿಗೆ ವರ್ಗ ಮಾಡಿದ್ದಾರೆ. ಆದುದರಿಂದ ಇನ್ನು ಮುಂದೆ ಯಾರಾದರೂ ಬೆಂಗಳೂರಿಗೆ ಬರಬೇಕಾದರೆ ಇಂತಹ ಕೆಟ್ಟ ಕೆಲಸ ಮಾಡಿದರೆ ಬೆಂಗಳೂರಿಗೆ ಬರಬಹುದು ಎನ್ನುವ ಪರಿಸ್ಥಿತಿ ಉಂಟಾಗಿದೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲು ಅಂಜುತ್ತಾರೆ. ಆದುದರಿಂದ ಇಂತಹವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೆ ಡ್ರೈವರ್ಸ್ ಬಗ್ಗೆ ಸಾವಿರಾರು ವಿಷಯಗಳಿವೆ. ಅವುಗಳನ್ನು ನಾನು ಇಲ್ಲಿ...

ಅಧ್ಯಕ್ಷರು.—ಅವುಗಳೆಲ್ಲವನ್ನೂ ಮಾನ್ಯ ಸಚಿವರಿಗೆ ಬರೆದು ಕಳುಹಿಸಿ.

ಶ್ರೀ ಪಂಪಾಪತಿ.--ಕಳುಹಿಸುತ್ತೇನೆ ಮತ್ತು ಈ ಸಂಸ್ಥೆಯಲ್ಲಿ "ಕೆಂಪು ಪಟ್ಟಿ" ತಯಾರು ಮಾಡಿ ಸಾವಿರಾರು ಜನರನ್ನು ಕೆಲಸದಿಂದ ವಜಾ ಮಾಡಲು ಒಂದು ವ್ಯವಸ್ಥೆ ಆಗುತ್ತಿದೆ ಇದು ಆಗಬಾರದು. ಇದರಿಂದಾಗಿ ಕೆಲಸಗಾರರಿಗೆ ಬಹಳ ಅನ್ಯಾಯವಾಗುತ್ತದೆ. ಹಳೆಯ ಕೆಲಸಗಾರರನ್ನು ಮನೆಗೆ ಕಳುಹಿಸುವುದು ಮತ್ತು ಹೊಸ ಕೆಲಸಗಾರರನ್ನು ತೆಗೆದುಕೊಳ್ಳುವುದು ನಡೆಯುತ್ತಿರುವುದಾಗಿ ನನಗೆ ವರ್ತಮಾನ ಬಂದಿದೆ. ಈ ರೀತಿ ಆದರೆ ಸಂಸ್ಥೆಯಲ್ಲಿ ಅಶಾಂತಿ ಉಂಟಾಗುತ್ತದೆ. ಉತ್ಪಾದನೆಗೆ ಧಕ್ಕೆ ಬರುತ್ತದೆ. ಇದು ಆಗದ ಹಾಗೆ ಮಾನ್ಯ ಸಚಿವರು ನೋಡಿಕೊಳ್ಳಬೇಕು.

ಮತ್ತೆ ಮಿನಿ ವಾಹನಗಳನ್ನು ಪಟ್ಟಣ ಪ್ರದೇಶಗಳಲ್ಲಿ ಓಡಾಡಿಸುತ್ತಿದ್ದಾರೆ. ಎಲ್ಲರೂ ದೊಡ್ಡ ದೊಡ್ಡ ಬಸ್‌ಗಳನ್ನು ರಾಜ್ಯದಲ್ಲಿ, ರಾಷ್ಟ್ರಗಳಲ್ಲಿ ತರುತ್ತಿದ್ದರೆ ನೀವು ಮಾತ್ರ ಇಂಥ ಮಿನಿ ಬಸ್‌ಗಳನ್ನು ನಗರ ಪ್ರದೇಶಗಳಲ್ಲಿ ಹಾಕುವುದರಿಂದ ಆಗತಕ್ಕಂಥ ಪ್ರಯೋಜನವಾದರೂ ಏನು ಎಂದು ನಾನು ಕೇಳುತ್ತೇನೆ. ಇದರಿಂದ ಕೆಲವು ಜನರಿಗೆ ಮಾತ್ರ ಉಪಯೋಗವಾಗುತ್ತಿದೆ. ಆದ್ದರಿಂದ ಈ ಮಿನಿ ಬಸ್‌ಗಳನ್ನು ತಪ್ಪಿಸಿ ದೊಡ್ಡ ದೊಡ್ಡ ಬಸ್‌ಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ರಸ್ತೆ ಸಾರಿಗೆ ಕಾರ್ಪೊರೇಷನ್‌ನನ್ನು ಬಿಡಿ ಬಿಡಿ ಮಾಡಬೇಕೆಂದು ಯೋಚನೆ ಮಾಡಿದ್ದೀರಿ ಎಂದು ತಿಳಿದುಬಂದಿದೆ. ಇದು ಒಂದಾಗಿ ಇದ್ದರೆ ಒಳ್ಳೆಯದು. ಏತಕ್ಕೆಂದರೆ ಬಿಡಿ ಬಿಡಿ ಮಾಡುವುದರಿಂದ ಅದಕ್ಕೆ ಒಬ್ಬ ಅಧ್ಯಕ್ಷರು, ಅದಕ್ಕೆ ಒಬ್ಬ ಮಂತ್ರಿಗಳು, ರೀಜಿನಲ್ ಮ್ಯಾನೇಜರ್ ಈ ರೀತಿ ಅಧಿಕಾರಿವರ್ಗ ಬೆಳೆದುಕೊಂಡು ಅವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಈಗ ಇರತಕ್ಕಂಥ ರೀತಿಯಲ್ಲೇ ಮುಂದುವರಿಸಿಕೊಂಡು ಹೋದರೆ ಜನತೆಗೆ ಅನುಕೂಲತೆಯನ್ನು

ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇರತಕ್ಕಂಥ ವ್ಯವಸ್ಥೆಯಲ್ಲೇ ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆದರೆ ಕೆಲಸಗಾರರಿಗೂ ತೃಪ್ತಿಯಾಗುತ್ತದೆ ಮತ್ತು ಸಂಸ್ಥೆಗೂ ಒಳ್ಳೆಯ ಹೆಸರು ಬರುತ್ತದೆ.

ಇನ್ನು ಕೆ.ಎಸ್.ಆರ್.ಟಿ.ಸಿ. ವಿಭಾಗದಲ್ಲಿ ಒಬ್ಬ ಅಧಿಕಾರಿ ಇದ್ದಾರೆ. ಆ ಅಧಿಕಾರಿಯ ಕೆಲಸವೇನೆಂದರೆ ಕೆಲಸಗಾರರನ್ನು ವಜಾ ಮಾಡತಕ್ಕಂಥದ್ದು, ಅವರು ಇದುವರೆವಿಗೂ ನೂರು ಮಂದಿ ಕೆಲಸಗಾರರನ್ನು ವಜಾ ಮಾಡಿದ್ದಾರೆ. ತೊಂಬತ್ತೈದು ಜನರನ್ನು ಸಸ್‌ಪೆಂಡ್ ಮಾಡಿದ್ದಾರೆ. ೧೫೦೦ ಜನ ಕೆಲಸಗಾರರಿಗೆ ಇನ್‌ಕ್ರಿಮೆಂಟ್ ಹಿಡಿದಿದ್ದಾರೆ. ಇದು ಅವರು ಮಾಡಿರತಕ್ಕಂಥ ಸಾಧನೆ. ಅವರ ಕಾಲದಲ್ಲಿ ಆಗಿರತಕ್ಕಂಥ ಸಾಧನೆ. ಈ ರೀತಿಯಾಗಿ ಅವರು ಸಾಧನೆ ಮಾಡಿದ್ದರೂ ಒಟ್ಟು ೨೦ ಕೋಟಿ ರೂಪಾಯಿಗಳಷ್ಟು ಲುಕ್ಸಾನು ಕೆ.ಎಸ್.ಆರ್.ಟಿ.ಸಿ ಯಲ್ಲಿ ಏತಕ್ಕೆ ಆಯಿತೋ ಗೊತ್ತಿಲ್ಲ. ಆದ್ದರಿಂದ ಇಂಥ ಅಧಿಕಾರಿಯ ಬಗ್ಗೆ ತಾವು ಕೂಡಲೇ ಗಮನಹರಿಸಬೇಕು ಕಾರ್ಮಿಕ ವಿರೋಧಿ. ಕಾರ್ಮಿಕ ವಿರೋಧಿ ಧೋರಣೆಯನ್ನು ಹೊಂದಿರತಕ್ಕಂಥ ಅಧಿಕಾರಿಯ ಬಗ್ಗೆ ಗಮನಹರಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದು ಕೇಳಿಕೊಳ್ಳುತ್ತೇನೆ.

ಇನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಿಬ್ಬಂದಿ ಮತ್ತು ಕೆಲಸಗಾರರ ಮಹಾ ಮಂಡಲಿ ಎಂದು ಏನು ಇದೆ ಅವರು ಯಾವಾಗಲೂ ಚುನಾವಣೆಯನ್ನು ನಡೆಸಿ ಎಂದು ಹೇಳುತ್ತಿದ್ದಾರೆ. ಕಾರ್ಮಿಕರು ಯಾವ ಸಂಘಕ್ಕೆ ಮಾನ್ಯತೆ ಕೊಡುತ್ತಾರೋ ಅಂಥ ಸಂಘದವರ ಜೊತೆಯಲ್ಲಿ ವ್ಯವಹಾರವನ್ನು ನಡೆಸಿ. ಅವರ ಮೂಲಕ ತಮ್ಮ ಕಾರ್ಯಕಲಾಪಗಳನ್ನು ಒಳ್ಳೆಯ ರೀತಿಯಲ್ಲಿ ಜಾರಿಗೆ ತನ್ನಿ. ಯಾರು ಮೆಜಾರಟಿ ಇದ್ದಾರೆ ಎಂಬುದಕ್ಕೆ ಚುನಾವಣೆಗಳನ್ನು ನಡೆಸಿ. ನಮ್ಮನ್ನು ಕೇಳುವುದೇ ಬೇಡ. ನಮ್ಮನ್ನು ಕೇಳಲಿಲ್ಲವೆಂದು ಚಿಂತೆ ಇಲ್ಲ. ನ್ಯಾಯವಾಗಿ ಪ್ರಜಾಪ್ರಭುತ್ವದ ಆಧಾರದ ಮೇಲೆ ಚುನಾವಣೆಯನ್ನು ನಡೆಸಿ. ಯಾರಿಗೆ ಮೆಜಾರಟಿ ಬರುತ್ತದೋ ಅವರ ಸಹಾಯದಿಂದ ಆಡಳಿತವನ್ನು ನಡೆಸಿ ಎಂದು ಈ ಸಂದರ್ಭದಲ್ಲಿ ತಮಗೆ ಸಲಹೆ ಮಾಡಲು ಇಚ್ಛೆ ಪಡುತ್ತೇನೆ.

ಮತ್ತೊಂದು ವಿಚಾರವೇನೆಂದರೆ ಕೆಲಸಗಾರರ ಡೆತ್ ರಿಲೀಫ್ ಫಂಡ್ ಎಂದು ಇರುತ್ತದೆ. ಕೆಲಸಗಾರರು ಏನಾದರೂ ತೀರಿಕೊಂಡಲ್ಲಿ ಹಣವನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಇದೆ. ಕೋಟ್ಯಾಂತರ ರೂಪಾಯಿಗಳು ಬ್ಯಾಂಕಿನಲ್ಲಿ ಇವೆ. ಇದನ್ನು ಬ್ಯಾಂಕಿನಲ್ಲಿ ಏತಕ್ಕೆ ಇಡಬೇಕು ? ನಿಮ್ಮ ಸಂಸ್ಥೆಯಲ್ಲೇ ಇಟ್ಟುಕೊಂಡರೆ ಸಂಸ್ಥೆಗೂ ಉಪಯೋಗವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ನಿಮಗೆ ಮ್ಯಾಕ್ಸಿಮಮ್ ಟೈಮ್ ಕೊಟ್ಟಿರುತ್ತೇನೆ. ಆದಷ್ಟು ಜಾಗ್ರತೆಯಾಗಿ ನಿಮ್ಮ ಭಾಷಣವನ್ನು ಮುಗಿಸಿ.

ಶ್ರೀ ಪಂಪಾಪತಿ.—ಆದ್ದರಿಂದ ನಾನು ಚುನಾವಣೆಯನ್ನು ನಡೆಸುವುದರ ಬಗ್ಗೆ ಹೇಳುತ್ತಿದ್ದೆ. ಆದಷ್ಟು ಜಾಗ್ರತೆಯಾಗಿ ಚುನಾವಣೆಯನ್ನು ನಡೆಸುವುದರ ಮೂಲಕ ಸರಿಯಾದ ರೀತಿಯಲ್ಲಿ ಕಾರ್ಮಿಕರ ಸಂಘಟನೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಕಡೂರು ಬೆಳ್ಳಿಗನೂರು ಹೋಬಳಿ, ಹೂವಿನಹಳ್ಳಿ, ಹಾಲದಹಳ್ಳಿ ಇವೇ ಮುಂತಾದ ಮೂರು ನಾಲ್ಕು ಹಳ್ಳಿಗಳ ಗ್ರಾಮಸ್ಥರಿಂದ ಬಂದಿರತಕ್ಕಂಥ ಮನವಿಗಳಿವೆ ಅವನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ಸುಮಾರು ೧೬೫೦ ಎಕರೆ ಮೂರು ಗುಂಟೆ ಜಮೀನು ಗ್ರಾಮದ ದನ ಕರುಗಳಿಗೆ, ಜಾನುವಾರುಗಳಿಗೆ ಮೇವಿಗಾಗಿ ಉಪಯೋಗಿಸಿ ಕೊಂಡಿರತಕ್ಕಂಥ ಜಮೀನಾಗಿರುತ್ತದೆ ಈ ಜಮೀನನ್ನು ಭದ್ರಾವತಿ ಕಾಗದದ ಕಾರ್ಖಾನೆಯವರಿಗೆ ನೀಲಗಿರಿ ಮರಗಳನ್ನು ನೆಡುವುದಕ್ಕಾಗಿ ತಾವು ಕೊಟ್ಟಿದ್ದೀರೆಂದು ಹೇಳುತ್ತಾರೆ. ದಯವಿಟ್ಟು ಈ ನೀಲಗಿರಿ ಸಸಿಗಳನ್ನು ನೆಡುವುದಕ್ಕೆ ಅವಕಾಶವನ್ನು ಕೊಡಬೇಡಿ. ಇದರಿಂದ ಜನರಿಗೆ ಮತ್ತು ದನಕರುಗಳಿಗೆ ಮೇವಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಹಾಗೇಯೇ ಉಳಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಕೊಟ್ಟಿರತಕ್ಕಂಥ ಅರ್ಜಿಗಳನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ಅದನ್ನು ತಾವು ಪರಿಶೀಲನೆ ಮಾಡಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಧಾನ್ಯಗಳ ಪೂರೈಕೆ ಬಗ್ಗೆ ಮಾನ್ಯ ಆಹಾರ ಸರಬರಾಜು ಮಂತ್ರಿಗಳ ಬಗ್ಗೆ ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ಅವರು ಈಗಾಗಲೇ ಸಾಸಿರು ಕಾರ್ಡುಗಳನ್ನು ಹಂಚಿದ್ದಾರೆ. ಈ

ಕಾರ್ಡುಗಳನ್ನು ಹಂಚಿರುವುದು ಬಹಳ ಕಡಿಮೆ ಇದೆ. ಮತ್ತು ಸರಿಯಾದ ರೀತಿಯಲ್ಲಿ ಆಹಾರ ಧಾನ್ಯಗಳು ಸರಬರಾಜು ಆಗುತ್ತಿಲ್ಲವೆಂದು ಕೂಡ ಹೇಳುತ್ತಿರುತ್ತಾರೆ. ಆದ್ದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಮತ್ತು ಹಸಿರು ಕಾರ್ಡುಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಂಚತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡಬೇಕೆಂದು ಹೇಳುತ್ತೇನೆ. ಪಟ್ಟಣ ಪ್ರದೇಶಗಳಲ್ಲಿಯಾದರೂ ಕಾರ್ಡುದಾರರಿಗೆ ಸಕ್ಕರೆ, ಎಣ್ಣೆ, ಇವೇ ಮುಂತಾದ ಪದಾರ್ಥಗಳು ಸಾಕಷ್ಟು ಪ್ರಮಾಣದಲ್ಲಿ ಹಂಚಿಕೆಯಾಗುತ್ತದೆ. ಆದರೆ ಹಳ್ಳಿಗಾಡುಗಳಲ್ಲಿ ಇದರ ಪ್ರಮಾಣ ಕಡಿಮೆ ಇರುತ್ತದೆ. ಜನರಿಗೆ ಆಹಾರ ಪದಾರ್ಥಗಳು ಸಿಕ್ಕುವುದೇ ಕಷ್ಟವಾಗಿರುತ್ತದೆ. ಮತ್ತೆ ತಾವು ಒದಗಿಸತಕ್ಕಂಥ ಸಕ್ಕರೆ, ಎಣ್ಣೆ ಇವೇ ಮುಂತಾದ ಪದಾರ್ಥಗಳ ಬೆಲೆಯೂ ಹೊರಗಡೆ ಜಾಸ್ತಿಯಿರುವುದರಿಂದ ಸೊಸೈಟಿಗಳ ಮುಖಾಂತರ ಒದಗಿಸತಕ್ಕಂಥ ಪದ್ಧತಿ ಇರುತ್ತದೆ. ಈ ಸೊಸೈಟಿಯವರು ಅಲ್ಲೇ ಮಾರಾಟ ಮಾಡತಕ್ಕಂಥ ಸಂದರ್ಭಗಳೂ ಇರುತ್ತದೆ. ಆದ್ದರಿಂದ ತಮ್ಮ ಜಿಲ್ಲಾಧಿಕಾರಿಗಳಿಗೆ ತಿಳಿಸಬೇಕು. ಯಾವುದೇ ಸೊಸೈಟಿಯವರು ಸಕ್ಕರೆ ಎಣ್ಣೆ ಮುಂತಾದ ಯಾವುದೇ ಪದಾರ್ಥಗಳನ್ನು ತಂದರೆ ಅವತ್ತಿನ ದಿವಸವೇ ಬೋರ್ಡಿನಲ್ಲಿ ಸ್ಟಾಕ್ ಇರುವ ಬಗ್ಗೆ ಸೂಚನೆ ಹಾಕಬೇಕು. ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಅದನ್ನು ಪ್ರಕಟಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ಜನತೆಗೂ ಕೂಡ ತಿಳಿದುಕೊಳ್ಳಲು ಸಹಾಯವಾಗುತ್ತದೆ. ಕೆಲವು ಸೊಸೈಟಿಗಳು ಈ ರೀತಿಯಾಗಿ ಮಾಡಿದರೆ ಈ ಸೊಸೈಟಿಗಳು ಸಮಾಧಾನಕರವಾಗಿ ಕೆಲಸ ಮಾಡಿದಂತಾಗುತ್ತದೆ. ಆದ್ದರಿಂದ ಈ ಬಗ್ಗೆ ಆದೇಶವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಸತಿ ಬಗ್ಗೆ ಹೇಳುವುದಾದರೆ ತಾವು ವಿಚಾರ ಮಾಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ವಸತಿ ಸೌಕರ್ಯವನ್ನು ಒದಗಿಸುವ ಬಗ್ಗೆ ಅಷ್ಟೊಂದು ತ್ವರಿತಗತಿಯಲ್ಲಿ ನಡೆಯುತ್ತಿಲ್ಲ. ದಾವಣಗೆರೆ ಒಂದು ದೊಡ್ಡ ನಗರ ದಿನೇದಿನೇ ಬೆಳೆಯುತಕ್ಕಂಥ ನಗರವಾಗಿದೆ. ಈವತ್ತು ಅಲ್ಲಿ ಬೇಕಾದಷ್ಟು ಜನರಿಗೆ ಮನೆಗಳ ಅಭಾವವಿದೆ. ಅಭಾವ ಇರತಕ್ಕಂಥ ಕಡೆ ಮನೆಗಳನ್ನು ಕಟ್ಟಿಸಿ ಕೊಡತಕ್ಕಂಥದ್ದು ಬಹಳ ಅಗತ್ಯವಿದೆ. ಆದರೆ ಇಲ್ಲಿಯವರೆಗೂ ಈ ಯೋಜನೆಯಲ್ಲಿ ದಾವಣಗೆರೆಯೂ ಬಹಳ ಹಿಂದೆ ಬಿದ್ದಿದೆ. ಕೆ.ಎಸ್.ಆರ್.ಟಿ.ಸಿ.ಯ ನೌಕರರ ಬಗ್ಗೆಯೂ ಕೇಳಿಕೊಳ್ಳುತ್ತಿದ್ದೇನೆ. ೨೫-೩೦ ವರ್ಷಗಳ ಹಿಂದೆಯೇ ಲೇಬರ್ ಕಾಲೋನಿ ಎಂದು ಮಾಡಿದ್ದರು, ಅಲ್ಲಿ ಜಾಗ ಇದೆ. ಕಾರ್ಮಿಕ ವರ್ಗದವರು ಇರತಕ್ಕಂಥ ಜಾಗ. ಅದು ತಮ್ಮ ವಶದಲ್ಲಿದೆ. ಗೃಹ ನಿರ್ಮಾಣ ಮಂಡಲಿ ಅಧ್ಯಕ್ಷರು ಆ ಸ್ಥಳವನ್ನು ಮುನಿಸಿಪಾಲಿಟಿಯವರಿಗೆ ಕೊಟ್ಟರೆ ಬಹಳ ಜನರಿಗೆ ಅನುಕೂಲವಾಗುತ್ತದೆ. ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸಹಾಯ ಮಾಡಿದಂತಾಗುತ್ತದೆಂದು ಹೇಳುತ್ತಾರೆ. ದಾವಣಗೆರೆ, ಹರಿಹರ ಇವು ಬೆಳೆಯುತಕ್ಕಂಥ ನಗರಗಳಾಗಿವೆ, ಅಲ್ಲಿ ವಸತಿ ಗೃಹಗಳನ್ನು ಕಟ್ಟಿಸುವುದಕ್ಕೆ ಕೂಡಲೇ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಹುಡ್ಕೋ ಸ್ಕೀಮಿನಿಂದಾಗಲಿ, ಅಥವಾ ಇನ್ನು ಯಾವುದೇ ಸ್ಕೀಮಿನಿಂದ ಆಗಲೀ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ಇನ್ನು ಮಂಡಕ್ಕಿ ಮತ್ತು ಬೀಡಿ ಕಾರ್ಮಿಕರ ಬಗ್ಗೆ ಮಾನ್ಯ ಕಾರ್ಮಿಕರ ಸಚಿವರು ಹೇಳಿದ್ದಾರೆ. ಈ ಜನತೆ ಬಹಳ ಕಷ್ಟದಲ್ಲಿರತಕ್ಕಥ ಜನರು. ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂಥ ಜನ, ಇವರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ದಾವಣಗೆರೆ, ಹರಿಹರ ಬಗ್ಗೆ ಸುಮಾರು ಹತ್ತು ವರ್ಷಗಳಿಂದ ಗೃಹ ಮಂಡಲಿಯವರಿಂದ ಯಾವ ವಿಧವಾದ ಪ್ರಯೋಜನವೂ ಆಗಿಲ್ಲ. ಇನ್ನು ಮುಂದಾದರೂ ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಸ್ತೆಸಾರಿಗೆ ಸಂಸ್ಥೆಯಲ್ಲಿ ಇರತಕ್ಕಂಥ ಕೆಲವು ನ್ಯೂನ್ಯತೆಗಳ ಬಗ್ಗೆ ಹೇಳಿದೆ, ತಾವು ಇದರ ಬಗ್ಗೆ ತನಿಖೆಯನ್ನು ನಡೆಸಬೇಕು, ತಾವು ಎಲ್ಲವೂ ಸರಿಯಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಯಾರು ತಪ್ಪಿತಸ್ಥರು ಇರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಚುನಾವಣೆಗಳನ್ನು ನಡೆಸಬೇಕು. ಚುನಾವಣೆಯಲ್ಲಿ ಬಹುಮತವನ್ನು ಯಾರು ಪಡೆಯುತ್ತಾರೆ ಅವರಿಗೆ ಪ್ರಾಶಸ್ತ್ಯವನ್ನು ಕೊಡಬೇಕು. ಇದರಿಂದ ತಮ್ಮ ಇಲಾಖೆ ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ನಡೆಸುವುದಕ್ಕೆ ಸಹಾಯವಾಗಬೇಕೆಂದು ತಮ್ಮಲ್ಲಿ ಕೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೦೦ ಪಿ.ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ಬೇಡಿಕೆಗಳ ಬಗ್ಗೆ ಒಂದೆರಡು ಅಭಿಪ್ರಾಯಗಳನ್ನು ಕೊಡುತ್ತಾ, ಈ ಅರಣ್ಯ ಇಲಾಖೆಗೆ ಮತ್ತು ಭೀಕರ ಬರಗಾಲಕ್ಕೂ ಸಹ ಪರಸ್ಪರ ಸಂಬಂಧ ಇದೆಯೆಂದು ಹೇಳುತ್ತೇನೆ. ಅವರು ಕೊಟ್ಟಿರುವ ವರದಿಯನ್ನು ಓದಿದ ಮೇಲೆ ನನಗನ್ನಿಸಿದ್ದು ಏನೆಂದರೆ, ಈ ರಾಜ್ಯದಲ್ಲಿ ರೈತರು ಬದುಕಬೇಕು, ಬರಗಾಲ ಮತ್ತೊಮ್ಮೆ ಬರಬಾರದು ಅಂತಿದ್ದರೆ ಒಂದು ಸಾರಿ ಒಂದು ಹತ್ತು ವರ್ಷದವರೆಗೆ ಈ ಕಾಡನ್ನು ಕಡಿಯುವುದನ್ನು ನಿಲ್ಲಿಸುವುದಕ್ಕೆ ಏನಾದರೂ ಯೋಜನೆ ಮಾಡಿ ಎಂದು ತಮ್ಮ ಮೂಲಕ ನಾನು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ ಏತಕ್ಕೆ ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ ಎಂದರೆ, ಈ ಇಲಾಖೆಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತದೆ ಎಂಬುದು ಇಲ್ಲಿ ಕಂಡುಬಂದಿರುವ ಅಂಶವಾದರೂ, ನಾವು ಏನು ಲಾಭ ಗಳಿಸುತ್ತಿದ್ದೇವೆ, ಅದರ ಹತ್ತರಷ್ಟು ಕಳ್ಳಸಾಗಾಣಿಕೆ ಮೂಲಕ ಹೋಗುತ್ತಾ ಇದೆ, ಇದನ್ನು ದಿನನಿತ್ಯ ಕಣ್ಣುಮುಚ್ಚಿಕೊಂಡು ನಾವು ನೋಡುತ್ತಿದ್ದೇವೆ. ಇವತ್ತು ಕಾಡುಗಳು, ಸರ್ವನಾಶವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಹೇಗಾದರೂ ಮಾಡಿ ಈ ಕಾಡುಕಡಿಯುವುದನ್ನು ಹೇಗಾದರೂ ಮಾಡಿ ತಮ್ಮ ಇಲಾಖೆಯಿಂದ ನಿಲ್ಲಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

೧೯೮೩-೮೪ನೇ ಸಾಲಿನಲ್ಲಿ ೮೦ನೇ ಪುಟದಲ್ಲಿ ತಾವು ಕೊಟ್ಟಿರುವ ವಿವರದ ಪ್ರಕಾರ ತಾವು ಆದಾಯ ಮಾಡಿರುವಂಥಾದ್ದು ೫೩ ಕೋಟಿ ೯೯ ಲಕ್ಷ ರೂಪಾಯಿಗಳು. ಖರ್ಚು ಮಾಡಿರುವಂಥಾದ್ದು ೩೪ ಕೋಟಿ ೩೬ ಲಕ್ಷ. ಅಂದರೆ ಸುಮಾರು ೧೯೮೩-೮೪ರಲ್ಲಿ ಉಳಿಸಿರುವಂಥ ಆದಾಯ ೧೯ ಕೋಟಿ ರೂಪಾಯಿಗಳು, ಅದೇ ರೀತಿ ೧೯೮೪-೮೫ರಲ್ಲಿ ತಾವು ಆದಾಯ ಮಾಡಿರುವಂತಾದ್ದು ೫೫ ಕೋಟಿ ೬೫ ಲಕ್ಷ ಇದ್ದರೆ, ಖರ್ಚು ಮಾಡಿರುವಂತಾದ್ದು ೪೩ ಕೋಟಿ ೨೨ ಲಕ್ಷ. ಅಂದರೆ ಉಳಿದಿರುವಂತಾದ್ದು ಕೇವಲ ೧೨ ಕೋಟಿ ಮಾತ್ರ ೧೯೮೧-೮೨, ೧೯೮೨-೮೩ಕ್ಕೆ ಹೋಲಿಸಿದರೆ ೧೯೮೧-೮೨ ರಲ್ಲಿ ೪೬ ಕೋಟಿ ಆದಾಯ ಬಂದಿದ್ದರೆ, ಖರ್ಚು ಮಾಡಿದ್ದು ೨೪ ಕೋಟಿ. ಅರ್ಧದಷ್ಟು ಹಣ ಉಳಿಸಿದ್ದಾರೆ ೧೯೮೨-೮೩ರಲ್ಲಿ ೪೩ ಕೋಟಿ ಆದಾಯ ಇದ್ದರೆ ೨೬ ಕೋಟಿ ಖರ್ಚಾಗಿದೆ. ಹೀಗೆ ನಾನು ಹೇಳಿದರೆ, ನಾವು ಈಗ ಅರಣ್ಯವನ್ನು ಬೆಳೆಸುತ್ತಿದ್ದೇವೆ, ಕಡಿಯುವುದನ್ನು ನಿಲ್ಲಿಸಿದ್ದೇವೆ ಹೀಗೆ ಖರ್ಚು ಜಾಸ್ತಿ ಇರುವುದರಿಂದ ಆದಾಯ ಕಡಿಮೆ ಬಂದಿರಬಹುದು ಎಂದು ಮಾನ್ಯ ಅರಣ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಬಹುದು, ಆದರೆ ನಾವು ನೋಡಿರುವ ಮಟ್ಟಿಗೆ ತಾವು ಅರಣ್ಯವನ್ನು ಬೆಳೆಸುವಂಥ ಉತ್ತಮವಾದ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ ತಾವು ಖರ್ಚು ಮಾಡದಿದ್ದರೂ ಸಹ ಅವರು ಹಣ ಕೊಡುತ್ತಿದ್ದಾರೆ. ಆದರೆ ಮುಖ್ಯ ರಸ್ತೆಯಿಂದ ನೋಡುವುದಾದರೆ ಕಣ್ಣಿಗೆ ಕಾಣುವಷ್ಟು ಮಾತ್ರ ಅರಣ್ಯ ಕಾಣುತ್ತಿದೆಯೇ ಹೊರತು ಒಳಗಡೆ ಹೋಗಿ ನೋಡಿದರೆ ಸರ್ವನಾಶ ಮಾಡಿರುವುದು ನಮಗೆ ಮನದಟ್ಟಾಗುತ್ತದೆ.

ಹಾಗೆಯೇ ತಾವು ಮತ್ತೊಂದು ಪೋಸ್ಟರ್‌ನ್ನು ಕೊಟ್ಟಿದ್ದೀರಿ ಅದನ್ನು ನೋಡಿದರೆ ಒಂದಕ್ಕೊಂದು ಸಂಬಂಧ ಇರುವಂತೆ ಕಾಣುವುದಿಲ್ಲ. ೧೯೮೪-೮೫ ರಲ್ಲಿ ಪತ್ತೆಹಚ್ಚಲಾದ ಅರಣ್ಯ ಅಪರಾಧಗಳ ಸಂಖ್ಯೆಗಳನ್ನು ಹೇಳುತ್ತಾ, ಸ್ವಾಧೀನಪಡಿಸಿಕೊಂಡ, ಮುಟ್ಟುಗೋಲು ಹಾಕಿಕೊಂಡ ವಾಹನಗಳ ಪಟ್ಟಿಯನ್ನು ಕೊಟ್ಟಿದ್ದೀರಿ. ಸ್ವಾಧೀನಪಡಿಸಿಕೊಂಡ ಲಾರಿಗಳು ಮತ್ತು ಟ್ರಕ್‌ಗಳು ೭೩೬ ಮತ್ತು ಮುಟ್ಟುಗೋಲು ಹಾಕಿಕೊಂಡಿರುವುದು ೮. ಇದನ್ನು ನೋಡಿದಾಗ ನಾನು ಹೇಳುತ್ತೇನೆ, ಲಾರಿಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತರಷ್ಟು ಗಂಧದ ನಾಟಾಗಳನ್ನು ಸಾಗಿಸುತ್ತಿದ್ದಾರೆ. ಇದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು. ಯಾವರೀತಿ ಕಳ್ಳಸಾಗಾಣಿಕೆ ಆಗುತ್ತಿದೆ ಎನ್ನುವುದು ನನಗೆ ಗೊತ್ತಿದೆ. ಆದರೆ ೭೩೬ ಟ್ರಕ್‌ಗಳನ್ನು ಸ್ವಾಧೀನಪಡಿಸಿಕೊಂಡಿದ್ದರೆ ಎಂಟನ್ನು ಮಾತ್ರ ಮುಟ್ಟುಗೋಲು ಹಾಕಿಕೊಂಡಿದ್ದೀರಿ ಇದರಿಂದ ಉಳಿದಿದ್ದುದನ್ನು ಬಿಟ್ಟಿದ್ದೀರಿ ಎಂದು ಅರ್ಥವಾಗುತ್ತದೆ. ನಾನು ಹೇಳುವುದೇನೆಂದರೆ, ಈ ರೀತಿಯಾಗಿ ಗಂಧದ ನಾಟಾಗಳನ್ನು ಲಾರಿಗಳಲ್ಲಿ ಬಹಿರಂಗವಾಗಿ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಏನಾಗುತ್ತದೆ ಎಂದರೆ, ಇವತ್ತು ಲಾರಿಯನ್ನು ಹಿಡಿದಾಗ ಆ ಲಾರಿಯ ಮಾಲೀಕ ಆ ದಿನವೇ ತನ್ನ ಲಾರಿ ಕಳ್ಳತನವಾಗಿದೆ ಎಂಬ ದೂರನ್ನು ಕೊಟ್ಟಿರುತ್ತಾನೆ. ನಾಳೆಬೆಳಿಗ್ಗೆ ಹಿಡಿದರೆ ಲಾರಿ ತನಗೆ ಗೊತ್ತಿಲ್ಲ ಎಂದು ಹೇಳುತ್ತಾನೆ. ಹಿಡಿದಿಲ್ಲ ಎಂದರೆ ಪೋಲೀಸ್ ಕಂಪ್ಲೇಂಟ್ ವಾಪಸ್ಸು ತೆಗೆದುಕೊಳ್ಳುತ್ತಾನೆ. ಏತಕ್ಕೆ ಇದನ್ನು ಹೇಳು

ತ್ತಿದ್ದೇನೆ ಎಂದರೆ ಸರ್ಕಾರ ಮತ್ತು ಅಧಿಕಾರಿಗಳಿಗೆ ಪ್ರಾಮಾಣಿಕತೆ ಏನಾದರೂ ಇದ್ದಿದ್ದರೆ ೭೬೬ ಟ್ರಕ್ಕುಗಳನ್ನು ಮುಟ್ಟುಗೋಲು ಹಾಕಿ ಕೇವಲ ೮ ಟ್ರಕ್ಕುಗಳನ್ನು ಸರ್ಕಾರ ವಶಕ್ಕೆ ತೆಗೆದುಕೊಳ್ಳು ತ್ತಿರಲ್ಲಿಲ್ಲ. ಅಂದರೆ ಉಳಿದ ಟ್ರಕ್ಕುಗಳನ್ನು ಬಿಟ್ಟಿದ್ದೀರಿ ಎಂದು ಗೊತ್ತಾಗುವುದಿಲ್ಲವೇ? ಇಲ್ಲಿ ೧೯೮೪-೮೫ರದ್ದು ಹೇಳಿದ್ದೀರಿ. ೧೯೮೫-೮೬ರದ್ದು ಇದರಲ್ಲಿ ವಿವರಗಳು ಇಲ್ಲ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಏನಾದರೂ ಮಾಡಿ ಅರಣ್ಯವನ್ನು ಉಳಿಸುವುದರ ಜೊತೆಗೆ ಅರಣ್ಯ ಕಡಿಯುವ ಬಗ್ಗೆ ತಕ್ಷಣ ನಿಲ್ಲಿಸುವ ಪ್ರಯತ್ನ ಮಾಡಿ. ಬಹಳಷ್ಟು ವಿವರಗಳನ್ನು ನಾನು ಇಟ್ಟುಕೊಂಡಿದ್ದೇನೆ. ಎಲ್ಲೆಲ್ಲಿ ದಟ್ಟವಾದ ಕಾಡು ಬೆಳೆದಿದೆ. ಅಲ್ಲಿ ಕಳ್ಳಸಾಗಾಣಿಕೆ ಮೂಲಕ ದಿನನಿತ್ಯ ಲೂಟಿ ಮಾಡು ತ್ತಿದ್ದಾರೆ. ಇದರ ವಿವರಗಳು ನನ್ನ ಹತ್ತಿರ ಇದೆ ನಾನು ಹೋದ ಸಾರಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದೆ. ಶಿವಮೊಗ್ಗ ಜಿಲ್ಲೆ ಶ್ರೀಗಂಧಕ್ಕೆ ಹೆಸರಾಗಿರುವಂಥ ಜಿಲ್ಲೆ ಅಲ್ಲಿ ಪ್ರತಿನಿತ್ಯ ಲಾರಿಗಳಲ್ಲಿ ಕಳ್ಳಸಾಗಾಣಿಕೆ ಆಗುತ್ತಿದೆ, ಶಿಕಾರಿಪುರ, ಸೊರಬ ಶ್ರೀಗಂಧಕ್ಕೆ ಹೆಸರಾದ ಸ್ಥಳಗಳು. ಈ ಕಳ್ಳಸಾಗಾಣಿಕೆಯನ್ನು ತಕ್ಷಣ ನಿಲ್ಲಿಸುವ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಇದು ಯಥಾ ಪ್ರಕಾರ ನಡೆಯುತ್ತಲೆ ಇದೆ. ಕಳೆದ ಎಂಟು-ಒಂಭತ್ತು ತಿಂಗಳ ಅವಧಿಯಲ್ಲಿ ಈ ರೀತಿಯಾಗಿ ಹತ್ತಾರು ಲಾರಿಗಳಲ್ಲಿ ಶ್ರೀ ಗಂಧದ ಕಳ್ಳಸಾಗಾಣಿಕೆಯಾಗಿದೆ ನಮ್ಮ ಜಿಲ್ಲೆಯಲ್ಲಿ ಅರಣ್ಯ ಅಧಿಕಾರಿಗಳು ತಾಲ್ಲೂಕು ರೇಂಜ್ ಅಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ರಿಸ್ಕ್ ತೆಗೆದುಕೊಂಡು ಲಾರಿಗಳನ್ನು ಹಿಡಿಯುತ್ತಾರೆ, ಮೊನ್ನೆ ಶಿಕಾರಿಪುರ ತಾಲ್ಲೂಕಿನಲ್ಲಿ ಒಂದು ಲಾರಿಯನ್ನು ಹಿಡಿಯುವು ದಕ್ಕೆ ವ್ಯವಸ್ಥಿತವಾಗಿ ಹೋದರು. ಅಧಿಕಾರಿಗಳು ಎಲ್ಲಾ ಸರ್ವಪ್ರಯತ್ನ ಮಾಡಿದರು. ಪೋಲೀಸರ ಎರಡು-ಮೂರು ಜೀಪುಗಳು ಹೋದವು. ಅಂತೂ ಆ ಲಾರಿಯನ್ನು ಹಿಡಿದರು. ಈ ಪ್ರಕರಣವನ್ನು ನಾನು ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಇಷ್ಟೊಂದು ವ್ಯವಸ್ಥಿತವಾಗಿ ಈ ಕಳ್ಳಸಾಗಾಣಿಕೆ ನಡೆಯು ತ್ತಿರುವುದಕ್ಕೆ ಕಾರಣ ಏನು ? ನಾನು ಅರಣ್ಯ ಅಧಿಕಾರಿಗಳ ಜೊತೆಯಲ್ಲಿ ಕೆಲವು ಕಡೆಗೆ ಹೋಗಿದ್ದೆ. ಗಂಧದ ಮರಗಳನ್ನು ಸ್ಟಾಕ್ ಮಾಡಿದ್ದನ್ನು ನೋಡಿಕೊಂಡು ಬಂದೆವು ಲಾರಿಬಂದಾಗ ಹಿಡಿಯುವುದು ಎಂದು ಕಾದರೆ ಅವರು ಬರುವುದೇ ಇಲ್ಲ. ಹದಿನೈದು ದಿನಗಳ ಕಾಲ ಕಾದು ಈ ಕಡೆಗೆ ಬಂದರೆ, ಮಾರನೇ ದಿನ ಗಂಧ ಪತ್ತೆಯೇ ಇರುವುದಿಲ್ಲ. ಅಂದರೆ ಸಿಬ್ಬಂದಿ ವರ್ಗದರಲ್ಲಿ ಕೆಲವರು ಇದರಲ್ಲಿ ಶಾಮೀಲಾಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಅವರೇ ಲಾರಿಗಳು ಬರುವಂಥ ವ್ಯವಸ್ಥೆ ಮಾಡುವವರು. ಅವರೇ ಅದನ್ನು ತುಂಬಿಸಿಕೊಡುವ ವ್ಯವಸ್ಥೆಯನ್ನೂ ಮಾಡುವವರು. ನನ್ನಲ್ಲಿ ವಿವರಗಳು ಇವೆ. ಹೆಸರುಗಳನ್ನು ಬೇಕಾದರೆ ಹೇಳುತ್ತೇನೆ. ಇದರಿಂದ ಅಧಿಕಾರಿಗಳು ಪ್ರಾಮಾಣಿಕವಗಿ ಪತ್ತೆಹಚ್ಚಲಿಕ್ಕೆ ಆಗುತ್ತಿಲ್ಲ. ಯಾವುದೇ ಶಾಸಕನು ಈ ರೀತಿಯಾಗಿ ಅನುಮಾನ ಬಂದಿರುವ ತಾಲ್ಲೂಕು ಗಳಲ್ಲಿ, ಅಲ್ಲಿರುವಂಥ ನೌಕರರನ್ನು ಬದಲಾಯಿಸಬೇಕೆಂದು ಹೇಳಿದರೆ ಅದನ್ನು ದಯವಿಟ್ಟು ಮಾಡಿ. ಯಾರು ಒಳ್ಳೆಯ ಕೆಲಸ ಮಾಡುತ್ತಾರೆ, ಅವರನ್ನು ಶ್ಲಾಘನೆ ಮಾಡಿ. ಅವರಿಗೆ ಬೇಕಾದಂಥ ಸೌಲಭ್ಯ ಗಳನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಕಾಡು ಉಳಿಯುತ್ತದೆ ಮತ್ತು ರಾಜ್ಯವೂ ಉಳಿಯುತ್ತದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಬಗರ್‌ಹುಕುಂ ಸಾಗುವಳಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶಾಸಕರನು ಒಳಗೊಂಡ ಒಂದು ಸಮಿತಿಯನ್ನು ಮಾಡಿ ತಾಲೂಕು ಆಫೀಸ್ ಲೆವಲ್‌ನಲ್ಲಿ ಸ್ಥಳ ತನಿಖೆ ಮಾಡಿ ಈ ರೀತಿಯಾಗಿ ಯಾರು ಬಡವರು ೧೯೭೮ರನೇ ಇಸವಿಗೆ ಮುಂಚಿನಿಂದ ಅನಧಿಕೃತವಾಗಿ ಸಾಗುವಳಿ ಮಾಡು ತ್ತಿದ್ದಾರೆ, ಅವರಿಗೆ ಜಮೀನು ನೀಡುವುದಾಗಿ ಹೇಳಿದರು. ಆದರೆ ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿದರೂ ಸಹ ನಿಮ್ಮ ಅರಣ್ಯ ಇಲಾಖೆಯಲ್ಲಿ ಮತ್ತು ರೆವಿನ್ಯೂ ಇಲಾಖೆ ಯಲ್ಲಿ ದಾಖಲೆಗಳು ಸಿಗದೇ ಇರುವ ಪರಿಣಾಮವಾಗಿ ಯಾರಿಗೆ ಅನುಕೂಲವಾಗಬೇಕಿತ್ತೋ ಅದು ಸಾಧ್ಯ ವಾಗಿಲ್ಲ. ಆದ್ದರಿಂದ ಈ ಸಮಿತಿಯನ್ನು ಮಾಡಿದಾಗ ಸ್ಥಳ ಪರಿಶೀಲನೆ ಮಾಡಿದಂಥ ಸಂದರ್ಭದಲ್ಲಿ ಯಾರು ಹತ್ತಿಪ್ಪತ್ತು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಇರುತ್ತಾರೆ, ತಕ್ಷಣ ಅವರಿಗೇ ಭೂಮಿಯನ್ನು ಮಂಜೂರು ಮಾಡುವ ಪ್ರಯತ್ನ ಮಾಡಬೇಕು. ಇದರ ಜೊತೆಗೆ ಇನ್ನೊಂದು ಸಮಸ್ಯೆ ಇದೆ ಅದೇನೆಂದರೆ, ಮೊನ್ನೆ ಕಂದಾಯ ಇಲಾಖೆಯು ಸಿ ಅಂಡ್ ಡಿ ಲ್ಯಾಂಡ್‌ನ್ನು ನಿಮಗೆ ವಹಿಸಿಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದ ಸ್ಪಷ್ಟವಾದ ನೀತಿ ಏನು ಎಂದು ನಾನು ಕೇಳ್ತ

ತ್ತಿದ್ದೇನೆ. ನಿಮ್ಮ ಹತ್ತಿರ ಲೇಟೆಸ್ಟ್, ಅಪ್‌ಟುಡೇಟ್ ದಾಖಲೆಗಳು ರೆವಿನ್ಯೂ ಇಲಾಖೆಯಲ್ಲಿ ಇಲ್ಲ. ನಾನು ಚಿಕ್ಕಮಂಗಳೂರು ಜಿಲ್ಲೆಯ ನಾಲ್ಕಾರು ಕಡೆಗೆ ಹೋಗಿದ್ದೆ. ವಿವರಗಳನ್ನು ಬೇಕಾದರೆ ಕೊಡುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಸಹ ಹತ್ತಾರು ವರ್ಷಗಳಿಂದ ಬಗರ್‌ಹುಕುಮ್ ಸಾಗುವಳಿ ಮಾಡುತ್ತಿದ್ದಾರೆ. ಒಂದು ಕಡೆ ನೀವು ಹೇಳುತ್ತಿದ್ದೀರಿ ಏನೆಂದರೆ, ಯಾರು ಅರಣ್ಯ ಇಲಾಖೆಯ ಜಮೀನಿನಲ್ಲಿ ಬಗರ್‌ಹುಕುಮ್ ಸಾಗುವಳಿ ಮಾಡುತ್ತಿದ್ದಾರೆ, ಅವರನ್ನು ಗುರುತುಹಚ್ಚಿ ವಾಪಸ್ಸು ಕೊಡಿ ಅಂತ. ಮತ್ತೊಂದು ಕಡೆ ನೀವು ಸಿ ಅಂಡ್ ಡಿ ಲ್ಯಾಂಡ್‌ನ್ನು ಹೊಸದಾಗಿ ವಶಕ್ಕೆ ತೆಗೆದುಕೊಂಡು ಬಡವರು ಏನು ಸಾಗುವಳಿ ಮಾಡಿದ್ದಾರೆ, ಅದನ್ನು ನಿಮ್ಮ ಇಲಾಖೆಗೆ ತೆಗೆದುಕೊಂಡು ವಾಪಸ್ಸು ಕೊಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪುವುದಿಲ್ಲವೆಂದು ಹೇಳುತ್ತೀರಿ. ಇದು ಯಾವ ಧರ್ಮ ಸ್ವಾಮಿ ? ನಿಮ್ಮ ಸರ್ಕಾರದ ನೀತಿಯಾದರೂ ಏನು ಎಂದು ನಾನು ಕೇಳುತ್ತೇನೆ. ನಿಮಗೆ ರೈತ ಬದುಕಬೇಕೆಂಬ ಆಸೆ ಇದ್ದರೆ, ದಯಮಾಡಿ ಸ್ಥಳ ತನಿಖೆ ಮಾಡಿ ಎಲ್ಲಿ ಅರಣ್ಯವನ್ನು ಬೆಳೆಸಿಲ್ಲ, ಅಂತಹ ಜಮೀನನ್ನು ಮಾತ್ರ ತೆಗೆದುಕೊಳ್ಳಬೇಕು. ಅರಣ್ಯ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ, ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಆಜ್ಞೆ ಬಂದಿರುತ್ತದೆ. ಅದನ್ನು ವಶಪಡಿಸಿಕೊಳ್ಳುವುದಕ್ಕೆ ತಕ್ಷಣ ಹೋಗುತ್ತಾರೆ. ಇದು ಸರ್ಕಾರದ ನೀತಿಯಾಗಬಾರದು. ಈ ವಿಚಾರದಲ್ಲಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈಗ ತಾವು ಈ ಬಗ್ಗೆ ಒಂದು ಸಮಿತಿ ನೇಮಕ ಮಾಡುವುದಾಗಿ ಏನು ದಿಟ್ಟವಾದಂಥ ಹೇಳಿಕೆ ಕೊಟ್ಟಿದ್ದೀರಿ, ಈ ಬಗ್ಗೆ ನಿಮ್ಮ ಮಂತ್ರಿಮಂಡಲದ ಒಪ್ಪಿಗೆ ಇದೆಯೇ ? ಮಂತ್ರಿಮಂಡಲದ ಒಪ್ಪಿಗೆ ಇಲ್ಲದಿದ್ದರೆ ತಾವು ಕೂಡಲೇ ಒಪ್ಪಿಗೆ ತೆಗೆದುಕೊಳ್ಳಬೇಕು. ಮತ್ತೊಂದು ಸಲ ಈ ಸಭೆ ಸೇರುವ ಹೊತ್ತಿಗೆ ತಾವು ಈ ಕೆಲಸ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ರೆವಿನ್ಯೂ ಇಲಾಖೆಯಿಂದ ನೀವು ಸಿ ಮತ್ತು ಡಿ ದರ್ಜೆ ಭೂಮಿಯನ್ನು ತೆಗೆದುಕೊಂಡ ಮೇಲೆ, ಅಲ್ಲಿ ಕಟ್ಟಿಗೆಗಳನ್ನು ಬೆಳೆಸಲು ವ್ಯವಸ್ಥೆ ಮಾಡಿದರೆ ರೈತರಿಗೆ ಬೇಕಾದಂಥ ಸೌದೆಯನ್ನು ಒದಗಿಸಲು ಅನುಕೂಲವಾಗುತ್ತದೆ. ಆದ್ದರಿಂದ ಇದಕ್ಕೆ ನೀವು ಏನಾದರು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಈಗ ನೀವು ಅಧಿಕಾರದಲ್ಲಿದ್ದೀರಿ, ಮುಂದೆ ಬೇರೆಯವರು ಅಧಿಕಾರಕ್ಕೆ ಬರಬಹುದು. ಆದ್ದರಿಂದ ನಿಮ್ಮ ಕಾಲದಲ್ಲಿ ಈ ರಾಜ್ಯದ ಜನರಿಗೆ ಅನುಕೂಲ ಒದಗಿಸಲು ಕೆಲವು ಯೋಜನೆಗಳನ್ನು ಕೈಕೊಳ್ಳುವುದು ಒಳ್ಳೆಯದು. ಕಳೆದ ಮೂರು ವರ್ಷಗಳಿಂದ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಸಹ ತಾವು ನಮಗೆ ತಿಳಿಸಬೇಕು. ಸಿ ಮತ್ತು ಡಿ ಲ್ಯಾಂಡ್‌ನಲ್ಲಿ ಕಟ್ಟಿಗೆಯನ್ನು ಬೆಳೆಸಬೇಕಲ್ಲದೆ ಈಗ ಕಾಡುಗಳಲ್ಲಿರುವ ಉಪಯುಕ್ತವಲ್ಲದ ಮರಗಳನ್ನು ಕಡಿದು ಒಂದು ಕಡೆ ಶೇಖರಣೆ ಮಾಡಬೇಕು. ರೈತರು ಸೌದೆಗೆಂದು ಗಾಡಿಗಳನ್ನು ಕಟ್ಟಿಕೊಂಡು ಕಾಡಿಗೆ ಬಂದಾಗ ನೀವು ಈ ರೀತಿ ಶೇಖರಣೆ ಮಾಡಿದ ಸೌದೆಯನ್ನು ಕೊಟ್ಟು ಅವರಿಂದ ಹತ್ತು ರೂಪಾಯಿಗಳ ಫೀ ಎಂದು ವಸೂಲಿ ಮಾಡಬಹುದು. ಇದರಿಂದ ಸರ್ಕಾರಕ್ಕೆ ಆದಾಯ ಸಹ ಬರುತ್ತದೆ. ಈ ವ್ಯವಸ್ಥೆ ಮಾಡದಿದ್ದರೆ ರೈತರು ಅಲ್ಲಿರುವಂತಹ ಅಧಿಕಾರಿಗಳಿಗೆ ೨೫-೩೦ ರೂಪಾಯಿಗಳನ್ನು ಕೊಟ್ಟು ಸೌದೆಯನ್ನು ತರುತ್ತಾರೆ. ಈ ಹಣ ಅಧಿಕಾರಿಗಳಿಗೆ ಹೋಗುತ್ತದೆಯೇ ಹೊರತು ಸರ್ಕಾರಕ್ಕೆ ಬರುವುದಿಲ್ಲ. ಆದ್ದರಿಂದ ಈ ಬಗ್ಗೆ ಒಂದು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮುಖ್ಯವಾಗಿ ಗಂಧದ ಮರಗಳನ್ನು ಯಾರು ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ, ಅಂತಹವರ ಮೇಲೆ ತೀವ್ರವಾದಂಥ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಆಗಬೇಕು. ಈಗ ನಿಮ್ಮ ಅಧಿಕಾರಿಗಳು ಇಂತಹವರನ್ನು ಹಿಡಿಯುತ್ತಾರೆ, ಅವರೆ ಹಿಡಿದ ಮಾರನೇ ದಿವಸವೇ ಬಿಟ್ಟುಬಿಡುತ್ತಾರೆ. ಇದು ಸರಿಯಲ್ಲ. ಇಂತಹವರನ್ನು ಪತ್ತೆ ಮಾಡಲು ನಮ್ಮ ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲ್ಲೂಕ್‌ನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ನೀವು ವೈರ್‌ಲೆಸ್ ಸೆಟ್ಟುಗಳನ್ನು ಒದಗಿಸಬೇಕು.

ಇನ್ನು ಆಹಾರ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಹಸಿರು ಕಾರ್ಡಿನ ವಿತರಣೆ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಈಗ ಯಾರುಯಾರಿಗೆ ಸಿಕ್ಕಿಲ್ಲ, ಅಂತಹವರಿಗೆ ಕೊಡಿಸುತ್ತೇನೆ ಮತ್ತು ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಮಾತನ್ನು ಹೇಳಿ ಒಂದು ತಿಂಗಳು ಕಳೆದರೂ ಸಹ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ನಾನು ಇತ್ತೀಚೆಗೆ ೫-೬ ತಾಲ್ಲೂಕ್‌ಗಳಿಗೆ ಭೇಟಿ ಕೊಟ್ಟು ನೋಡಿದಾಗ, ಕಾರ್ಡುಗಳು ತಾಲ್ಲೂಕ್ ಕಛೇರಿಗೆ ಬಂದು ಬಿದ್ದಿವೆ, ಆದರೆ ಇನ್ನೂ ಅರ್ಹರಾದವರಿಗೆ ವಿತರಣೆ ಆಗಿಲ್ಲ. ಈ ಕಾರ್ಡುಗಳನ್ನು

ಹಂಚಲು ಇನ್ನೂ ಎಷ್ಟು ಸಮಯ ಬೇಕು ? ಬಡವರಿಗೆ ಏತಕ್ಕೆ ಕಿರುಕುಳ ಕೊಡುತ್ತೀರಿ ? ಮುಖ್ಯವಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿರುವಂತಹ ಕಡುಬಡವರಿಗೆ ಈ ಕಾರ್ಡುಗಳನ್ನು ಕೂಡಲೇ ವಿತರಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಜನರಿಗೆ ಎಂತಹ ದರ್ಜೆಯ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಹಳ್ಳಿಯ ಜನರಿಗೆ ರಾಗಿ ಮತ್ತು ಜೋಳವನ್ನು ಸಹ ಹಂಚುವ ವ್ಯವಸ್ಥೆ ಆಗಬೇಕು. ಮತ್ತೆ ಸಹಕಾರಸಂಘಗಳಿಂದಲೇ ಈ ಪದಾರ್ಥಗಳನ್ನು ಜನತೆಗೆ ಹಂಚಿಕೆ ಮಾಡಬೇಕೆಂದು ನಾವು ಸಲಹೆ ಮಾಡಿದ್ದರೂ ಸಹ ಕೆಲವು ಶಾಸಕರ ಶಿಫಾರಸ್ ಬಂತು ಎಂಬ ಕಾರಣದಿಂದ ಖಾಸಗಿಯವರಿಗೂ ಸಹ ಈ ನ್ಯಾಯಬೆಲೆ ಅಂಗಡಿಗಳನ್ನು ನಡೆಸಲು ಅನುಮತಿ ಕೊಟ್ಟಿದ್ದೀರಿ. ಎಲ್ಲಿ ಸಹಕಾರ ಸಂಘಗಳು ಇರುವುದಿಲ್ಲವೋ ಅಂತಹ ಕಡೆ ಬೇಕಾದರೆ ಖಾಸಗಿಯವರಿಗೆ ಈ ಏಜೆನ್ಸಿಯನ್ನು ಕೊಡಿ. ಆದರೆ ಸಹಕಾರಸಂಘಗಳು ಇರುವ ಕಡೆಗಳಲ್ಲಿಯೂ ಸಹ ಖಾಸಗಿಯವರಿಗೆ ಏತಕ್ಕೆ ಕೊಡಬೇಕು ? ೧೧ ಸಾವಿರ ನ್ಯಾಯಬೆಲೆ ಅಂಗಡಿಗಳ ಪೈಕಿ ಖಾಸಗಿಯವರು ಎಷ್ಟು ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿದ್ದಾರೆಂಬ ಬಗ್ಗೆ ನಮಗೆ ನೀವು ವಿವರಗಳನ್ನು ಕೊಡಬೇಕು.

ಇನ್ನು ಬಡವರು ಒಂದೆರಡು ಮೂಟೆ ಸಿಮೆಂಟ್ ಪಡೆಯಬೇಕಾದರೆ ತಾಲ್ಲೂಕ್ ಕಛೇರಿಗೆ ಹೋಗಿ ಪರದಾಡುವಂತಹ ಪರಿಸ್ಥಿತಿ ಬಂದಿದೆ.

ಶ್ರೀ ಜಿ. ಬಸವಣ್ಣಪ್ಪ.—ಅದು ನನ್ನ ಖಾತೆಗೆ ಸಂಬಂಧಪಡುವುದಿಲ್ಲ.

ಅಧ್ಯಕ್ಷರು.—ತಾವು ಬೇಗನೆ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸಿಮೆಂಟ್ ತೂಕದಲ್ಲಿ ಸಹ ಕಡಿಮೆ ಇರುತ್ತದೆ. ಆದ್ದರಿಂದ ಇದರ ಕಡೆಗೂ ಸರ್ಕಾರ ಗಮನ ಕೊಡಬೇಕಾಗುತ್ತದೆ. ಇನ್ನು ಮುಂದೆ ತಾವು ಬೇಡಿಕೆಗಳ ಮೇಲೆ ಮಾತನಾಡಲು ನಮಗೆ ಹೆಚ್ಚಿನ ಅವಕಾಶ ಕೊಡಬೇಕು. ಇಲ್ಲದಿದ್ದರೆ ಇಲ್ಲಿ ಉಪಯುಕ್ತವಾದಂಥ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನಾಲ್ಕು ಇಲಾಖೆಗಳ ಬೇಡಿಕೆಗಳನ್ನು ಒಂದೇ ಸಲ ಸೇರಿಸಿಬಿಟ್ಟಿದ್ದಾರೆ. ಈ ನಾಲ್ಕು ಇಲಾಖೆಗಳು ಯಾವ ರೀತಿ ಇವೆ ಎಂದರೆ, ಮೊದಲು ಮಾನ್ಯ ಸಿಂಧ್ಯಾ ಅವರ ಹತ್ತಿರ ಹೋಗಿ ೫೦೦ ರೂಪಾಯಿಗಳನ್ನು ಕೊಟ್ಟು ಒಂದು ಜನತಾ ಮನೆಯನ್ನು ತೆಗೆದುಕೊಂಡು ಅನಂತರ ಶ್ರೀ ಬಸವಣ್ಣಪ್ಪನವರ ಹತ್ತಿರ ಹೋಗಿ ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಯಂತೆ ಅಕ್ಕಿಯನ್ನು ಮತ್ತು ಹತ್ತು ರೂಪಾಯಿಗಳಿಗೆ ಒಂದು ಸೀರೆಯನ್ನು ಖರೀದಿ ಮಾಡಿದ ನಂತರ ಬಸ್‌ನಿಲ್ದಾಣಕ್ಕೆ ಹೋಗಿ, ಅಲ್ಲಿ ಈಗಾಗಲೇ ಹೆಚ್ಚಿಸಿರುವ ಬಸ್ ದರವನ್ನು ಕೊಟ್ಟು ಪ್ರಯಾಣ ಮಾಡಿ ಕಟ್ಟಿಗೆ ಸಂಪಾದನೆ ಮಾಡಲು ಶ್ರೀ ಜೀವಿಜಯ ಅವರ ಹತ್ತಿರ ಹೋಗಬೇಕು. ಕಾಡಿನಿಂದ ಕಟ್ಟಿಗೆಯನ್ನು ತರುವಾಗ ಅಲ್ಲಿರುವ ಫಾರೆಸ್ಟ್ ಗಾರ್ಡ್ ಹತ್ತಿರ ಏನಾದರು ಸಿಕ್ಕಿಹಾಕಿಕೊಂಡರೆ, ಎಲ್ಲ ಕಡೆ ಖರ್ಚು ಮಾಡಿ ಉಳಿದಿರುವ ದುಡ್ಡನ್ನು ಅವರಿಗೆ ಕೊಟ್ಟು ವಾಪಸ್ ಮನೆಗೆ ಬರಬೇಕು. ಹೀಗೆ ಎಲ್ಲ ಪ್ರಮುಖ ವಿಚಾರಗಳನ್ನು ಕೇವಲ ೧೫ ನಿಮಿಷಗಳಲ್ಲಿ ಹೇಳಿ ಮುಗಿಸಬೇಕಾಗಿದೆ. ಆಹಾರಧಾನ್ಯದ ಹಂಚಿಕೆ ಬಗ್ಗೆ ಬಹಳಷ್ಟು ಜನ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಇಲ್ಲಿ ಮೊದಲಿನಿಂದಲೂ ಅವ್ಯವಹಾರ ನಡೆದುಕೊಂಡು ಬಂದಿದೆ. ಇದು ಮಾನ್ಯ ಬಸವಣ್ಣಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಈ ಹಿಂದೆ ಮಾನ್ಯ ಮಾಣಿಕ್‌ರಾವ್ ಪಾಟೀಲ್ ಅವರು ಆಹಾರ ಇಲಾಖೆ ಮಂತ್ರಿಗಳಾಗಿದ್ದಾಗ, ನಮ್ಮ ರಾಜ್ಯದಿಂದ ಆಹಾರಧಾನ್ಯಗಳು ಯಾವ ರೀತಿ ಸ್ಮಗಲಿಂಗ್ ಆಯಿತು ಎಂಬ ಬಗ್ಗೆ ತನಿಖೆ ಮಾಡಿ ವರದಿ ಕೊಡುವ ಸಲುವಾಗಿ ಜಸ್ಟೀಸ್ ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಕ ಮಾಡಲಾಗಿತ್ತು. ಈ ಆಯೋಗದವರು ಕೊಟ್ಟ ವರದಿ ಆಧಾರದ ಮೇಲೆ ಯಾರ ಯಾರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಈ ಸದನಕ್ಕೆ ಒಂದು ವರದಿ ಕೊಡಬೇಕು.

ಇನ್ನು ಮೂರು ಕಿಲೋಮೀಟರ್‌ಗೆ ಒಂದರಂತೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಈಗ ನೀವು ೭ ಕಿಲೋ ಮೀಟರ್‌ಗೆ ಒಂದರಂತೆ ತೆಗೆದಿದ್ದೀರಿ. ಇದು ಸರಿಯಲ್ಲ. ೫೦೦ ಕಾರ್ಡುಗಳಿಗೆ ಒಂದು ನ್ಯಾಯಬೆಲೆ ಅಂಗಡಿಯನ್ನು ತೆರೆಯುವುದಕ್ಕೆ ಬದಲು ೨೫೦ ಕಾರ್ಡುಗಳಿಗೆ ಒಂದರಂತೆ ನ್ಯಾಯಬೆಲೆ ಅಂಗಡಿಯನ್ನು ತೆರೆದು ಜನರಿಗೆ ಅನ್ನ

ಕ್ರಮ ಮಾಡಿಕೊಡಬೇಕೆಂದು ನಾನು ಅನೇಕ ಸಲ ಕೇಳಿಕೊಂಡರೂ ಸಹ ಮಾನ್ಯ ಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು ಯೋಚನೆ ಮಾಡಬೇಕು. ಕೇರಳಾದಲ್ಲಿ ಕಮ್ಯುನಿಸ್ಟ್ ಸರ್ಕಾರ ಇದ್ದಾಗ ಸುಮಾರು ಇಪ್ಪತ್ತು ವಸ್ತುಗಳನ್ನು ಅಂದರೆ ದಿನನಿತ್ಯ ಉಪಯೋಗ ಮಾಡುವಂತಹ ಸಾಬೂನು, ಎಣ್ಣೆ ಮುಂತಾದ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಬಡವರಿಗೆ ಒದಗಿಸಲು ಕ್ರಮ ತೆಗೆದುಕೊಂಡಿದ್ದರು. ಇದೇ ಪದ್ಧತಿಯನ್ನು ಪಶ್ಚಿಮ ಬಂಗಾಳದಲ್ಲಿ ಸಹ ಈಗ ಅನುಸರಿಸುತ್ತಿದ್ದಾರೆ. ಈ ಒಂದು ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತಂದರೆ ಅಗತ್ಯ ವಸ್ತುಗಳು ಬಡವರಿಗೆ ಸುಲಭವಾಗಿ ಸಿಗುತ್ತವೆ. ಕಳೆದ ಸಲ ಈ ಬಗ್ಗೆ ಹೇಳಿದಾಗ ಮಾನ್ಯ ಮಂತ್ರಿಗಳು ಯೋಚನೆ ಮಾಡುತ್ತೇನೆಂದು ಹೇಳಿದ್ದರು. ಆದರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿಕೆ ಕೊಡುತ್ತಾರೆ. ಆದರೆ ಡಿಮ್ಯಾಂಡ್ಸ್ ಪಾಸಾದ ಮೇಲೆ ಈ ಬಗ್ಗೆ ಯೋಚನೆ ಮಾಡುವುದೇ ಇಲ್ಲ. ಈ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಬೇಕು. ಈಗ ನ್ಯಾಯಬೆಲೆ ಅಂಗಡಿಗಳ ಮೂಲಕ ಮೂರು ಐಟಂಗಳನ್ನು ಕೊಡುತ್ತಿದ್ದೀರಿ. ಇನ್ನೂ ಎರಡು ಐಟಂಗಳನ್ನು ಸೇರಿಸಬೇಕೆಂದಿದ್ದೀರಿ, ಆದರೆ ಅದು ಸಾಲದು, ಕೊನೆಯಪಕ್ಷ ಇನ್ನೂ ಹತ್ತು ಐಟಂಗಳನ್ನಾದರೂ ಸೇರಿಸಿದರೆ ಜನರಿಗೆ ಸಹಾಯ ಮಾಡಿದಂತೆ ಆಗುತ್ತದೆ. ಅಷ್ಟೇ ಅಲ್ಲ, ಅವಶ್ಯಕ ವಸ್ತುಗಳ ಬೆಲೆಗಳನ್ನು ಕಂಟ್ರೋಲ್ ಮಾಡಿದಂತೆ ಆಗುತ್ತದೆ. ಆದ್ದರಿಂದ ಇದನ್ನು ಸೀರಿಯಸ್ ಆಗಿ ಯೋಚನೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದೇ ಇಲಾಖೆಯ ಮೇಲೆ ಮತ್ತೊಂದು ಆಪಾದನೆ ಇದೆ. ಅದೇನೆಂದರೆ, ಇವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಹನ್ನೆರಡೂವರೆ ರೂಪಾಯಿಗಳಿಗೆ ಒಂದು ಸೀರೆ ಮತ್ತು ರವಿಕೆಬಟ್ಟೆ ಮತ್ತು ೧೫ ರೂಪಾಯಿಗಳಿಗೆ ಧೋತಿ ಕೊಡುತ್ತೇವೆಂದು ಜನತೆಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಈಗ ಮಾನ್ಯ ಬಸವಣ್ಣಪ್ಪನವರು ಆಲ್ಫಬೆಟಿಕಲ್ ಆರ್ಡರ್‌ನಲ್ಲಿ ಇದನ್ನು ಹಂಚುವುದಾಗಿ ಹೇಳುತ್ತಿದ್ದಾರೆ. ಇದರ ಪ್ರಕಾರ ನಮ್ಮ ಜಿಲ್ಲೆಯ ಮೂರು ತಾಲ್ಲೂಕುಗಳು ಇದರಲ್ಲಿ ಕವರ್ ಆಗಿವೆ. ಅದೃಷ್ಟವಶಾತ್ ಯಾವುದೇ ತಾಲ್ಲೂಕ್ ಆಲ್ಫಬೆಟಿಕಲ್ ಆರ್ಡರ್‌ನಲ್ಲಿ ಮೊದಲು ಇದ್ದರೆ ಮಾತ್ರ ಅಲ್ಲಿನ ಜನರಿಗೆ ಈ ಸೌಲಭ್ಯ ಸಿಗುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ. ಇದು ಸರಿಯಾದ ಕ್ರಮವಲ್ಲವಾದ ಕಾರಣ, ಇದನ್ನು ತಪ್ಪಿಸಬೇಕು.

ದಯವಿಟ್ಟು ತಕ್ಷಣ ಅದನ್ನು ವಿಸ್ತರಿಸಬೇಕು. ಇನ್ನೂ ಒಂದು ಏನು ಎಂದರೆ ನಗರ ಪ್ರದೇಶಗಳಲ್ಲಿ ಬಡವರೇ ಇಲ್ಲವೆಂದು ಲೆಕ್ಕಾಚಾರ ಮಾಡಿರುವುದು ಸರಿಯಲ್ಲ. ನಗರ ಪ್ರದೇಶಗಳಲ್ಲಿ ಇರುವ ಬಡವರಿಗೂ ೨ ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡಬೇಕು. ಇವರುಗಳಿಗೂ ಸಹ ಜನತಾ ಸೀರೆ, ಪಂಚೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ,

ಇನ್ನು ಟ್ರಾನ್ಸ್‌ಪೋರ್ಟ್ ಬಗ್ಗೆ ನಾನೇನು ಹೆಚ್ಚಿಗೆ ಹೇಳದೇ ಕೆಲವೇ ವಿಷಯಗಳನ್ನು ಹೇಳುತ್ತೇನೆ. ಮೊನ್ನೆ ಮೊನ್ನೆ ನಾನು ಮಾನ್ಯ ಟ್ರಾನ್ಸ್‌ಪೋರ್ಟ್ ಮಂತ್ರಿಯವರೊಡನೆ ಮಾತನಾಡಿ ಎಲ್ಲಾ ವಿಷಯವನ್ನು ತಿಳಿಸಿರುವುದರಿಂದ ಇವತ್ತು ಅವರಿಗೆ ಹೆಚ್ಚಿಗೆ ಹೇಳಬೇಕಾಗಿಲ್ಲ ಎಂದು ಭಾವಿಸುತ್ತೇನೆ. ಅವರು ಕೊಟ್ಟಿರತಕ್ಕ ಸ್ಟ್ಯಾಟಿಸ್ಟಿಕ್ಸ್ ನೋಡಿದರೆ. ಮಾನ್ಯ ಸಿಂಧ್ಯಾರವರ ಡಿಪಾರ್ಟ್‌ಮೆಂಟ್ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿರುವಂತೆ ಕಾಣುತ್ತದೆ. ಇವರು ಒಂದು ವರ್ಷದಲ್ಲಿ ೧,೦೬೪ ಜನಕ್ಕೆ ಮಾತ್ರ ಕೆಲಸವನ್ನು ಕೊಟ್ಟಿದ್ದಾರೆ. ಇದು ಬಹಳ ಕಡಿಮೆ ಇನ್ನೂ ಹೆಚ್ಚು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಆಮೇಲೆ ಹೊಸದಾಗಿ ೩೮೦ ರೂಟ್‌ಗಳಿಗೆ ಬಸ್‌ಗಳನ್ನು ಓಡಿಸುತ್ತಿದ್ದಾರೆ. ಎಲ್ಲೆಲ್ಲಿ ಬಸ್‌ಗಳ ಅವಶ್ಯಕತೆ ಇದೆಯೋ ಅಂತಹ ಕಡೆಗಳಲ್ಲೆಲ್ಲಾ ಬಸ್‌ಗಳನ್ನು ಓಡಿಸಬೇಕು. ಮೊದಲು ೧೬.೭೨ ಕೋಟಿ ರೂಪಾಯಿಗಳು ಲಾಸ್ ಆಗಿದ್ದುದನ್ನು ಅದನ್ನು ೧೧.೯೮ ಕೋಟಿಗೆ ಮಾನ್ಯ ಸಿಂಧ್ಯಾರವರು ಇಳಿಸಿದ್ದಾರೆ. ಇದನ್ನು ನೋಡಿದರೆ ನಷ್ಟ ಏನು ಕಡಿಮೆಯಾಗಿಲ್ಲ ಕೇವಲ ೪ ಕೋಟಿ ೭೪ ಲಕ್ಷ ರೂಪಾಯಿಗಳು ಮಾತ್ರ ಕಡಿಮೆಯಾಗಿದೆ. ಬಸ್‌ನ ದರ ಏರಿಸಿರುವುದರಿಂದ ಈ ಹಣ ಬಂದಿರಬಹುದು ಎಂದು ನಾವು ತಿಳಿದುಕೊಳ್ಳಬಹುದು. ಬೆಲೆ ಏರಿಸಿದ ಮೇಲೆ, ಸ್ಟೇಜ್‌ಗಳನ್ನು ರಿವೈಸ್ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದರು. ಆದರೆ ಏನೂ ಮಾಡಲಿಲ್ಲ. ಆಶ್ವಾಸನೆಗೆ ಒಂದು ಬೆಲೆ ಉಂಟು. ಅದನ್ನು ಕಡೆಗಣಿಸಬಾರದು. ಇನ್ನೂ ಒಂದು ವಿಷಯ ಹೇಳುವುದಾದರೆ ಎಲ್ಲಾ ಬಸ್ ರೂಟ್‌ಗಳನ್ನು ನ್ಯಾಷನಲೈಸ್ ಮಾಡುವುದರಿಂದ ಒಳ್ಳೆಯ ಕಂಟ್ರೋಲ್ ಸಿಗುತ್ತದೆ, ತಾವು ಅದನ್ನು ಮಾಡಬೇಕು. ಕಂಡಕ್ಟರುಗಳು ದುಡ್ಡು ಹೊಡೆಯುವುದರಿಂದ ಲಾಸ್ ಆಗುತ್ತದೆಂದು ಹೇಳುತ್ತಾರೆ. ಕಂಡಕ್ಟರುಗಳು

ಬಸ್‌ನ್ನು ಹೊರಗೆ ತೆಗೆದುಕೊಂಡು ಬಂದು ಪುನಃ ಒಳಗೆ ತೆಗೆದು ಹೋಗುವವರೆಗೂ ಎಲ್ಲರಿಗೂ ಲಂಚವನ್ನು ಕೊಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಬೆಳಿಗ್ಗೆ ಬಸ್‌ನ್ನು ಡಿಪೋವಿಂದ ಹೊರಗೆ ತರಬೇಕಾದಾಗ ಬಸ್ ಕೊಡುವವನಿಗೆ ೨ ರೂಪಾಯಿ ಕೊಡಬೇಕು. ಆಮೇಲೆ ಡೀಸಲ್ ಹಾಕುವವನಿಗೆ ಒಂದು ರೂಪಾಯಿ ಕೊಡಬೇಕು. ಬಸ್ ಸ್ಟ್ಯಾಂಡ್‌ನಲ್ಲಿ ವಾಚ್‌ಮನ್ ಇರುತ್ತಾನೆ ಅವನಿಗೆ ಎಂಟು ಆಣೆಯೋ ೧ ರೂಪಾಯಿಯೋ ಕೊಡಬೇಕು, ಆಮೇಲೆ ಟ್ರಾಫಿಕ್ ಕಂಟ್ರೋಲರ್‌ಗೆ ಕೊಡಬೇಕು. ಈ ಟ್ರಾಫಿಕ್ ಕಂಟ್ರೋಲರ್ ಏನಾದರು ಜಬರ್‌ದಸ್‌ನವನಾದರೆ ಹೆಚ್ಚು ಕೊಡಬೇಕಾಗುತ್ತದೆ, ಪುಕ್ಲ ಮನುಷ್ಯನಾದರೂ ೧ ರೂಪಾಯಿ ಅಂತೂ ಕೊಡಲೇ ಬೇಕಾಗುತ್ತದೆ, ಆಮೇಲೆ ಡ್ರೈವರ್‌ಗೆ ಊಟ, ತಿಂಡಿ, ಕಾಫಿ ಎಲ್ಲಾ ಕೊಡಿಸಬೇಕಾಗುತ್ತದೆ. ಕೊನೆಗೆ ಬಸ್‌ನ್ನು ಡಿಪೋಗೆ ತೆಗೆದುಕೊಂಡು ಹೋಗಿ ಕ್ಯಾಶ್ ಕಟ್ಟುವಾಗ ಕಂಡಕ್ಟರ್ ಏನಾದರು ೨ ರೂಪಾಯಿ ಆ ಕ್ಯಾಶಿಯರ್‌ಗೆ ಕೊಡದೇ ಹೋದರೆ ಹಳೆ ನೋಟು ಹರಿದ ನೋಟುಗಳನ್ನೆಲಾ ಈ ಕಂಡಕ್ಟರ್ ಮುಖದ ಮೇಲೆಯೋ ಹಾಕುತ್ತಾನೆ. ಹೀಗೆ ಪ್ರತಿ ದಿನ ಒಬ್ಬ ಕಂಡಕ್ಟರು ೩೦ ರಿಂದ ೪೦ ರೂಪಾಯಿವರೆಗೆ ಬೇರೆಯವರಿಗೆ ಕೊಡಬೇಕು ಹಾಗೂ ಅವನೂ ಇದರಲ್ಲಿ ಊಟ ತಿಂಡಿ ಮಾಡಬೇಕು. ಆದ್ದರಿಂದ ಕಂಡಕ್ಟರು ಮತ್ತು ಡ್ರೈವರುಗಳಿಗೆ ಆವತ್ತಿನ ಬಾಟಾವನ್ನು ಅವತ್ತೇ ಕೊಡುವಂತೆ ಮಾಡಬೇಕು. ಈ ವಿಷಯವನ್ನು ನಾನು ಹೋದ ಸಾರಿಯೂ ಹೇಳಿದ್ದೆ. ಆದರೆ ತಾವು ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆಮೇಲೆ ಚೆಕಿಂಗ್ ಪಾಯಿಂಟ್‌ಗಳನ್ನು ಹೆಚ್ಚಿಗೆ ಮಾಡಬೇಕು. ಚೆಕಿಂಗ್ ಮಾಡುವವರ ಮೇಲೆ ಒಂದು ಚೆಕಿಂಗ್ ಸ್ಕ್ವಾಡ್‌ನ್ನು ಇಡಬೇಕು. ಈ ಚೆಕಿಂಗ್‌ನವರು ಸುಮ್ಮನೆ ತಿಂಗಳಿಗೆ ೧೦–೧೫ ಕೇಸ್‌ಗಳನ್ನು ಆಫೀಸ್‌ಗೆ ಹಿಡಿದು ಕೊಟ್ಟು ಮಿಕ್ಕ ಎಲ್ಲಾ ಕೇಸ್‌ಗಳನ್ನು ಇವರೇ ದುಡ್ಡು ತೆಗೆದುಕೊಂಡು ಬಿಟ್ಟು ಬಿಡುತ್ತಾರೆ. ಇವರುಗಳೆಲ್ಲಾ ಮಾಮೂಲಿಯನ್ನು ಫಿಕ್ಸ್ ಮಾಡಿಕೊಂಡು ಬಿಟ್ಟಿದ್ದಾರೆ. ಈ ಚೆಕಿಂಗ್ ಇನ್‌ಸ್ಪೆಕ್ಟರ್ ಒಂದು ದಿನಕ್ಕೆ ೫೦೦ ರೂಪಾಯಿ, ೧೦೦೦ ರೂಪಾಯಿಗಳನ್ನು ಜೇಬಿಗೆ ಹಾಕಿಕೊಳ್ಳದೇ ಮನೆಗೆ ಹೋಗುವುದಿಲ್ಲ. ಆಂಧ್ರದಲ್ಲಿ, ತಮಿಳುನಾಡಿನಲ್ಲಿ, ಕೇರಳಾದಲ್ಲಿ, ಇಷ್ಟೊಂದು ನಷ್ಟವಾಗುವುದಿಲ್ಲ. ತಮಿಳುನಾಡಿನಲ್ಲಿ ಬಹಳ ಚೆನ್ನಾಗಿ ಸಾರಿಗೆ ವ್ಯವಸ್ಥೆ ಇದೆ. ನೀವು ಸಹ ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಯಾವ ತರಹ ಮಾಡಿದ್ದಾರೆ ಅದನ್ನು ನೋಡಿಕೊಂಡು ಬಂದು ಇಲ್ಲಿಯೂ ಸಹ ಅದೇ ರೀತಿ ಮಾಡಿ ಲಾಭವನ್ನು ಗಳಿಸುವುದಕ್ಕೆ ಏಕೆ ಪ್ರಯತ್ನ ಮಾಡಬಾರದು ? ತಮಿಳುನಾಡಿನಲ್ಲಿ ಕಂಡಕ್ಟರುಗಳು ೧೦೦ ರೂಪಾಯಿಗಳನ್ನು ಕಲೆಕ್ಷನ್ ಮಾಡಿದರೆ ೫ ರೂಪಾಯಿಗಳನ್ನು ಕಂಡಕ್ಟರ್‌ಗೂ ೫ ರೂಪಾಯಿಯನ್ನು ಡ್ರೈವರ್‌ಗೂ ಕೊಡುತ್ತಾರೆ. ಹೀಗೆ ಕೊಡುವುದರಿಂದ ಡ್ರೈವರ್ ಮತ್ತು ಕಂಡಕ್ಟರುಗಳು ಪ್ಯಾಸೆಂಜರ್‌ಗಳನ್ನು ಬಿಡದೆ ಬಸ್‌ನಲ್ಲಿ ಹತ್ತಿಸಿಕೊಂಡು ಕಲೆಕ್ಷನ್ ಜಾಸ್ತಿ ಮಾಡಿಕೊಂಡು ಬರುತ್ತಾರೆ. ನೀವು ಏಕೆ ಹೀಗೆ ಮಾಡಬಾರದು ? ಅಲ್ಲಿ ಕಂಡಕ್ಟರುಗಳು ಸರಿಯಾಗಿ ಟಿಕೆಟ್‌ಗಳನ್ನು ಕೊಡುತ್ತಾರೆ, ಟಿಕೆಟ್ ಕೊಡದೇ ಇರುವ ಪ್ರಸಂಗವೇ ಇರುವುದಿಲ್ಲ. ಕಂಡಕ್ಟರು ಬಸ್‌ನಲ್ಲಿಯೇ ಕುಳಿತಿರುತ್ತಾನೆ ಆಗ ಪ್ಯಾಸೆಂಜರುಗಳು ಅವನ

ಹತ್ತಿರ ಹೋಗಿ ಟೀಕೆಟನ್ನು ಪಡದೇ ಬಸ್‌ನೊಳಗೆ ಹೋಗಬೇಕು. ಆ ರೀತಿ ಸಿಸ್ಟಮ್ ಅಲ್ಲಿ ಇದೆ. ದಯವಿಟ್ಟು ನಿಮ್ಮ ಅಧಿಕಾರಿಗಳನ್ನು ಆಂಧ್ರ, ತಮಿಳುನಾಡು, ಕೇರಳಾಗಳಿಗೆ ಕಳುಹಿಸಿ ಅಲ್ಲಿನ ಸಿಸ್ಟಮ್‌ಗಳನ್ನು ನೋಡಿಕೊಂಡು ಬಂದು ಇಲ್ಲಿಯೂ ಅದೇ ತರಹ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ನಮ್ಮ ಟ್ರಾನ್ಸ್‌ಪೋರ್ಟ್‌ನಲ್ಲಿ ಲಾಸ್ ಆಗುವುದು ನಿಲ್ಲುವುದಿಲ್ಲ.

ಆಮೇಲೆ ಮನೆಗಳ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಒಂದು ಜನತಾ ಮನೆಯನ್ನು ಕಟ್ಟುವುದಕ್ಕೆ ೪೫೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದೂ ಇನ್‌ಸ್ಟಾಲ್‌ಮೆಂಟ್ ಬೇಸಿಸ್ ರೂಪದಲ್ಲಿ ಕೊಡುತ್ತೀರಿ. ಅದರಲ್ಲಿ ರಾಯಲ್ಟಿ ಎಂದು ೧೦೦ ರೂಪಾಯಿಗಳನ್ನು ಬೇರೆ ಹಿಡಿದುಕೊಳ್ಳುತ್ತೀರಿ. ಇನ್ನು ಉಳಿದ ೪೪೦೦ ರೂಪಾಯಿಗಳನ್ನು ಮನೆ ಕಟ್ಟುವುದಕ್ಕೆ ಸಾಧ್ಯವೇ ? ೫೦೦೦ ಸಾವಿರ ರೂಪಾಯಿಗಳನ್ನಾದರು ಈ ತಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ೩೬೬ ಹಳ್ಳಿಗಳು ಇವೆ. ಈ ೩೬೬ ಹಳ್ಳಿಗಳಿಗೆ ೩೦೫ ಜನತಾ ಮನೆಗಳನ್ನು ಕಟ್ಟುವುದಕ್ಕೆ ಮಂಜೂರು ಮಾಡಿದ್ದೀರಿ. ನೀವು ಮಂಜೂರು ಮಾಡಿರುವ ಮನೆಗಳು ಸಾಕೆ ? ದಯವಿಟ್ಟು ಹೆಚ್ಚು ಮನೆಗಳನ್ನು ಮಂಜೂರು ಮಾಡಿ ಹಾಗೂ ಮನೆಗಳಿಗೆ ಗ್ರ್ಯಾಂಟ್‌ನ್ನು ಹೆಚ್ಚಿಗೆ ಮಾಡಿ. ಈ ಮನೆಗಳಿಗೆ ಹಣವನ್ನು ಮಂಜೂರು ಮಾಡಿಸಿಕೊಳ್ಳಬೇಕಾದರೆ ಬಹಳ ಕಷ್ಟವನ್ನು ರೈತರುಗಳು ಅನುಭವಿಸುತ್ತಿದ್ದಾರೆ. ಒಂದು ಜನತಾ ಮನೆಗೆ ಹಣವನ್ನು ಮಂಜೂರು ಮಾಡಿಸಿಕೊಳ್ಳಬೇಕಾದರೆ ೨೦೦–೩೦೦ ರೂಪಾಯಿಗಳನ್ನು

ಲಂಚ ಕೊಡಬೇಕಾಗುತ್ತದೆ. ಲಂಚಾವತಾರ ಜಾಸ್ತಿ ಆಗಿಬಿಟ್ಟಿದೆ, ಈ ಲಂಚಾವತಾರವನ್ನು ಕಡಿಮೆ ಮಾಡಲು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಇನ್ಸ್‌ಪೆಕ್ಟರ್‌ಗೆ ತಿಳಿಸಬೇಕು.

ಇನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೇಲೆ ೪ ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ 'ಸಿ' ಮತ್ತು 'ಡಿ' ಎಂದು ಎರಡು ಟೈಪ್ ಜಮೀನುಗಳ ಇವೆ. ಈ ಜಮೀನುಗಳಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ ವನಗಳನ್ನು ಮಾಡುತ್ತಿದ್ದಾರೆ. ನಮ್ಮ ಕೋಲಾರ ಜಿಲ್ಲೆಯಲ್ಲೂ ಬಹಳ ಕಡೆ ಈ ನೀಲಗಿರಿ ವನಗಳನ್ನು ಅರಣ್ಯ ಇಲಾಖೆಯವರು ಮಾಡಿದ್ದಾರೆ. ಈ ನೀಲಗಿರಿ ವನಗಳನ್ನು ಒಳ್ಳೆಯ ಆಲೋಚನೆಯಿಂದ ಇವರು ಮಾಡುತ್ತಿಲ್ಲ. ಬಿರ್ಲಾರವರಿಗೆ ಸಹಾಯ ಮಾಡಬೇಕು ಎನ್ನುವ ದುರಾಲೋಚನೆಯಿಂದ ಈ ನೀಲಗಿರಿ ವನಗಳನ್ನು ಅರಣ್ಯ ಇಲಾಖೆಯವರು ಬೆಳೆಸುತ್ತಿದ್ದಾರೆ ಹಣ್ಣುಗಳು ಕೊಡುವಂತಹ ಮಾವಿನ ಮರಗಳನ್ನು ಇವರು ಬೆಳೆಸುತ್ತಿಲ್ಲ, ಹುಣಿಸೆ ಮರಗಳನ್ನು ಇವರು ಬೆಳೆಸುತ್ತಿಲ್ಲ ಯಾವುದೇ ಫಲುಕೊಡುವಂತಹ ಮರಗಳನ್ನು ಇವರು ಬೆಳೆಸುತ್ತಿಲ್ಲ, ಅರಣ್ಯ ಮಂತ್ರಿಯವರಾದ ಜೀವಿಜಯರವರುಈ ಮರಗಳನ್ನು ನೆಡೆಸುವುದರಿಂದ ಅವರು ಆದರ ಫಲವನ್ನು ಅನುಭವಿಸದೇ ಇರಬಹುದು ವೆಂಕಟರಾಮಯ್ಯನಾದ ನಾನು ಅನುಭವಿಸದೇ ಇರಬಹುದು, ನಮ್ಮ ಮಕ್ಕಳಾದರು ಈ ಮರಗಳ ಸೌಲಭ್ಯವನ್ನು ಪಡೆಯುತ್ತಾರೆ. ಆದುದರಿಂದ ನಾವು ದೂರ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ ಬೇಗ ಮುಗಿಸಿರಿ.

ಶ್ರೀ ಆರ್. ವೆಂಕಟರಾಮಯ್ಯ.—ನೀಲಗಿರಿ ಮರಗಳನ್ನು ಕಡಿದು ಇವರು ಅದರ ಸಿಪ್ಪೆಗಳನ್ನು ಸುಲಿದು ೬ ತಿಂಗಳಾದ ಮೇಲೆ ಬಿರ್ಲಾ ಕಂಪನಿಗೆ ಮಾರುತ್ತಾರೆ. ಇದನ್ನು ಬಿರ್ಲಾರವರು ಬಹಳ ಪಾಗಿ ಮೆಚ್ಚಿದ್ದಾರೆ. ಏಕೆಂದರೆ, ನೀಲಗಿರಿ ಮರವನ್ನು ಕಡಿದ ತಕ್ಷಣ ಕಂಪನಿಗೆ ಮಾರಿದರೆ ತೂಕ ಹೆಚ್ಚಿಗೆ ಬಂದು ಬಿರ್ಲಾ ಕಂಪನಿಗೆ ಲಾಸ್ ಆಗುತ್ತದೆ. ಇಲ್ಲೇ ಸಿಪ್ಪೆ ಸುಲಿದು ೬ ತಿಂಗಳಾದ ಮೇಲೆ ಮಾರಿದರೆ ಹೆಚ್ಚು ಸೌದೆ ಕಡಿಮೆ ದುಡ್ಡಿಗೆ ಸಿಗುತ್ತದೆ. ಈ ರೀತಿ ಒಳ್ಳೆಯ ಕೆಲಸವನ್ನು ಬಿರ್ಲಾ ಕಂಪನಿಯವರಿಗೆ ಇವರು ಮಾಡಿಕೊಡುತ್ತಿದ್ದಾರೆ. ದಯವಿಟ್ಟು ನಿಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ತಾವು ನೀಲಗಿರಿ ಮರಗಳನ್ನು ಬೆಳೆಸಿ ನಮಗೆ ಉಪಕಾರ ಮಾಡುವುದು ಬೇಡ. ನೀವು ನಮ್ಮ ತಂಟೆಗೆ ಬರಬೇಡಿ ಎಂದು ಮಾನ್ಯ ಅರಣ್ಯ ಮಂತ್ರಿಯವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೩೦ ಪಿ. ಎಂ.

ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅಧ್ಯಕ್ಷರೆ ನನಗೆ ಮಾತನಾಡಲು ಐದೇ ನಿಮಿಷ ಗಳ ಕಾಲ ಎಂದೇ ಮಿತಿ ಹಾಕಿದ್ದೀರಿ, ಆದರೆ ಮಾತನ್ನೇ ಆಡಬೇಡಿ ಎಂದು ಹೇಳಲಿಲ್ಲ. ಏಕೆಂದರೆ ಬೆಳಿಗ್ಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರ ಹತ್ತಿರ ಒಂದು ಕ್ಲಾರಿಫಿಕೇಶನ್ ಕೇಳಬೇಕೆಂದು ಪ್ರಯತ್ನ ಮಾಡಿದ್ದೇ ಆದರೆ ತಾವುಗಳು ಅವಕಾಶ ಕೊಡಲಿಲ್ಲ, ಈಗ ಹಾಗೇ ಮಾಡದೇ ಐದು ನಿಮಿಷಗಳ ಕಾಲ ಮಾತನಾಡಲು ಕೊಟ್ಟಿದ್ದೀರಿ ಅದಕ್ಕಾಗಿ ತುಂಬ ಸಂತೋಷವಾಗಿದೆ. ಮೂರು ಖಾತೆಗಳ ಮೇಲೆ ಐದು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ ಎಂದು ಹೇಳಿದ್ದೀರಿ, ಆದರೆ ಯಾವ ಕಡೆಯಿಂದ ಪ್ರಾರಂಭಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡುವುದಕ್ಕೆ ಎರಡು ನಿಮಿಷಗಳು ಹೋಗುತ್ತಿವೆ, ಮುಖ್ಯವಾಗಿ ನಾನು ಈ ಕಡೆಯಿಂದ ಪ್ರಾರಂಭ ಮಾಡುತ್ತೇನೆ. ಏಕೆಂದರೆ ಮಾನ್ಯ ಸಿಂಧ್ಯಾರವರು ಈ ಕಡೆಯಲ್ಲಿಯೇ ಕುಳಿತಿದ್ದಾರೆ. ಸಾರಿಗೆ ಇಲಾಖೆಯ ಬಗ್ಗೆ ಹೇಳುವುದರ ಜೊತೆಗೆ ಮೂರು ಖಾತೆಗಳ ಮಾನ್ಯ ಮಂತ್ರಿಗಳು ಮಂಡಿಸಿದ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತು ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಸಾರಿಗೆ ಇಲಾಖೆಯ ಬಗ್ಗೆ ಮಾತನಾಡುವಾಗ ಮೊದಲನೇಯದಾಗಿ ಬರುವುದು ಬಸ್ಸ್ ದರದ ಏರಿಕೆಗೆ, ಕಳೆದ ಸಲವು ಕೂಡ ನಾನು ಇದೇ ಸ್ಥಾನದಲ್ಲಿ ನಿಂತು ಈ ಕುರಿತು ಮಾತನಾಡಿದ್ದೆ, ಕೊನೆಯ ಅಂತದಲ್ಲಿ ಹೇಳಿದ್ದೆ ಬಸ್ಸ್ ದರವನ್ನು ನೀವು ೨೫ ರಿಂದ ೩೦ ಪರ್ಸೆಂಟ್ ವರೆಗೆ ಏರಿಸುತ್ತೀರೆಂದು ಅದಕ್ಕೆ ನೀವು ಉತ್ತರ ರೂಪದಲ್ಲಿ ಇಲ್ಲವೆಂದು ತಲೆ ತೂಗಿಸಿದ್ದಿರಿ ಶಾಸನ ಸಭೆ ಮುಗಿದ ಕೂಡಲೇ ತಾವುಗಳು ಮಾಡಿದ ಮೊದಲನೇ ಕೆಲಸ ಎಂದರೆ ಬಸ್ಸ್ ದರಗಳನ್ನು ಏರಿಸಿದ್ದು ಅದು ೨೫ ರಿಂದ ೩೦ ಪರ್ಸೆಂಟ್ ಅಲ್ಲ ೪೦ ಪರ್ಸೆಂಟ್‌ಗೇ ಏರಿಸಿದ್ದೀರಿ. ಈ ಮಧ್ಯೆ ನೀವು ಏನು ಮಾಡಿದ್ದೀರಿ ಎಂದರೆ ಈ ಬಸ್ಸ್ ದರದ ಏರಿಕೆಯನ್ನು ಜನರಿಂದ ಮುಚ್ಚಿಡಲು

ಮೇಲಿಂದ ಮೇಲೆ ಪೇಪರ್‌ನಲ್ಲಿ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಾ ಇದ್ದೀರಿ, ಇದರಿಂದ ಜನರು ತಮ್ಮ ಮೇಲೆ ಎಗರಿ, ಎಗರಿ ಬೀಳುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆಂದು ಹಾಗೆ ಮಾಡಿದ್ದೀರಿ. ಅದರ ಮೂಲಕ ತಾವು ಜಾರಿಕೊಂಡು ಹೋಗಬಹುದೆಂದು ಸ್ಟೇಟ್‌ಮೆಂಟ್‌ನಲ್ಲಿ ದರದ ಏರಿಕೆಯನ್ನು ಪುನರ್ ಪರಿಶೀಲಿಸುತ್ತೇನೆ, ಸ್ಟೇಜ್‌ಗಳನ್ನು ರಿವೈಸ್ ಮಾಡುತ್ತೇನೆಂದು ಹೇಳಿದ್ದೀರಿ. ಜನ ಅಷ್ಟೇ ಅಲ್ಲ ಎಲ್ಲ ರಾಜಕೀಯ ಪಕ್ಷಗಳೂ ಕೂಡ ನಿಮ್ಮ ಜಾಣಾಕ್ಷತನಕ್ಕೆ ಬಲಿ ಬಿದ್ದವು. ಹೀಗೆ ಮೇಲಿಂದ ಮೇಲೆ ಪತ್ರಿಕಾ ಹೇಳಿಕೆಗಳನ್ನು ಕೊಡುವುದರಿಂದ ಜನರನ್ನು ಶಾಂತ್ವಾನಗೊಳಿಸುವುದರ ಮೂಲಕ ಸಮಯ ಹೋದಾಗ ಜನರ ಪ್ರತಿಭಟನಾ ಮನೋಭಾವ ಕಡಿಮೆಯಾಗುತ್ತದೆ. ಇದು ಸತ್ಯ. ಮತ್ತು ತಮ್ಮ ಆಲೋಚನೆ ಕೂಡ ಅದೇ ಆಗಿದೆ. ಒಂದು ಕಡೆ ನೀವು, ಮತ್ತೊಂದು ಕಡೆ ಮಾನ್ಯ ಜೀವರಾಜ ಆಳ್ವರವರು, ಹೀಗೆ ಸ್ಟೇಟ್‌ಮೆಂಟ್‌ಗಳ ಮೂಲಕವೇ ರಾಜಕೀಯ ಮಾಡಿ ಜನರ ಬಾಯಿ ಮುಚ್ಚಿಸಿ ಬಿಟ್ಟಿದ್ದೀರಿ. ಎಲ್ಲಾ ರಾಜಕೀಯ ಪಕ್ಷಗಳು, ಅಂದರೆ ಕಮ್ಯುನಿಷ್ಟ ಪಕ್ಷ ಒಂದನ್ನು ಹೊರತಾಗಿ ಬಿ.ಜೆ.ಪಿ. ಮತ್ತಿತರರ ಪಕ್ಷಗಳೆಲ್ಲರೂ ನಿಧಾನವಾಗಿ ತಮ್ಮ ಪ್ರತಿಭಟನೆಯನ್ನು ಸಲ್ಲಿಸಿದರು. ಈ ಎಲ್ಲಾ ಪ್ರತಿಭಟನೆಗಳನ್ನು ತಾವುಗಳ ಕೇಳಿಕೊಂಡರೂ ಕೂಡಾ ಕಿವಿಯನ್ನು ದಪ್ಪ ಮಾಡಿಕೊಂಡು ಕುಳಿತು ಬಿಟ್ಟಿದ್ದೀರಿ. ಇನ್ನು ಮುಖ್ಯವಾದ ವಿಚಾರ ಏನೆಂದರೆ ನಿಮ್ಮ ಸಾರಿಗೆ ಸಂಸ್ಥೆಯಲ್ಲಿ ಲಾಸ್ ಆಗುತ್ತಿರುವುದು. ನಿಮಗೆ ಯಾವಾಗಲೂ ಲಾಸ್ ಇದ್ದೇ ಇರುತ್ತದೆ. ನೀವು ಮಂತ್ರಿಗಳಾಗಿರುವವರೆಗೆ, ನೀವು ಎಷ್ಟೇ ಪ್ರಮಾಣದಲ್ಲಿ ಬಸ್‌ದರವನ್ನು ಏರಿಸುತ್ತಿದ್ದರೂ ಕೂಡಾ ನಿಮಗೆ ಲಾಭ ಮಾಡುವುದಕ್ಕೆ ಆಗುವುದಿಲ್ಲ. ಪತ್ರಿಕಾ ಪ್ರಕಟಣೆ ಕೊಡುವುದನ್ನು ಬಿಟ್ಟರೆ ನಿಮ್ಮ ಹತ್ತಿರ ಸಂಸ್ಥೆಯನ್ನು ಸುಧಾರಿಸಲಿಕ್ಕಾಗಲೀ, ಬೇರೆ ಏನೇ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಹಾಗೆಂದು ನೀವು ರಾಜೀನಾಮೆಯನ್ನು ಕೊಡುವುದು ಬೇಡ. ಏಕೆಂದರೆ ಅದರಿಂದ ಏನೂ ಉದ್ದೇಶ ಸಾಧನೆ ಆಗುವುದಿಲ್ಲ, ನೀವು ಸುಮ್ಮನೆ ರಾಜಿನಾಮೆ ಕೊಡುತ್ತೇನೆಂದು ಹೇಳುವುದು ಅನಂತರ ನಿಮ್ಮ ಬೆಂಬಲಿಗರು, ಆತ್ಮಹಾಗೆ ಮಾಡುವುದು ಇದನ್ನೆಲ್ಲಾ ಮಾಡುವುದು ಬೇಡ. ನೀವು ರಾಜಿನಾಮೆ ಕೊಡುವುದೂ ಬೇಡ, ಒಂದು ಕೆಲಸವನ್ನು ತಾವು ಮಾಡಿ, ಅದೇನೆಂದರೆ, ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟುಬಿಡಿ. ಅದರಲ್ಲಿ ಸಾರಿಗೆ ವ್ಯವಸ್ಥೆಗೆ ಎಷ್ಟೇ ನಷ್ಟವಾದರೂ ಕೂಡಾ ನಾನು ರಾಜಿನಾಮೆ ಮಾತ್ರ ಕೊಡುವುದಿಲ್ಲ ಎಂದು ಇರಲಿ. ಒಂದು ಕಡೆ ಸ್ಟೇಟ್‌ಮೆಂಟ್‌ನಲ್ಲಿ ತಾವು ಹೀಗೆ ಹೇಳಿದ್ದೀರಿ. ಸಾರಿಗೆ ಸಂಸ್ಥೆಯಲ್ಲಿನ ಸೋರುವಿಕೆಯಲ್ಲಿ ಕಂಡಕ್ಟರ್‌ಗಳು, ಕೆಲವು ಅಧಿಕಾರಿಗಳು ಭಾಗಿಗಳಾಗಿದ್ದಾರೆ ಎಂದು ಹೇಳಿದ್ದೀರಿ. ಅನಂತರ ಬಹುಶಃ ಸಂಬಂಧಪಟ್ಟವರಿಂದ ಪ್ರತಿಭಟನೆ ಬಂತು ಎಂದು ಕಾಣುತ್ತದೆ. ತಕ್ಷಣ ಬೇರೊಂದು ಸ್ಟೇಟ್‌ಮೆಂಟ್‌ನಲ್ಲಿ ಅಧಿಕಾರಿಗಳಿಂದ ಲಾಸ್ ಆಗುತ್ತಾ ಇಲ್ಲ ಎಂದು ಬಂತು. ಹೀಗಾದರೆ ಮಾನ್ಯ ಮಂತ್ರಿಗಳು ಹೇಳಿದ್ದನ್ನು ಜನರು ನಂಬಬೇಕೊ ಅಧಿಕಾರಿಗಳು ಹೇಳಿದ್ದನ್ನು ನಂಬಬೇಕೋ ಎಂದು ತಿಳಿಯುತ್ತಿಲ್ಲ. ಲಾಸ್ ಅಂತೂ ಆಗಿದೆ, ನೀವೆಲ್ಲರೂ ಒಬ್ಬರಿಗೊಬ್ಬರು ಮಾತನಾಡಿಕೊಂಡು ಸ್ಟೇಟ್‌ಮೆಂಟ್ ಕೊಡುತ್ತೀರಿ ಎಂದು ಕಾಣುತ್ತಿದೆ. ಒಟ್ಟಿನಲ್ಲಿ ಜನರ ಮೇಲೆ ಬಸ್‌ದರದ ಏರಿಕೆಯನ್ನು ಮಾತ್ರ ಹಾಕಿದ್ದಾಯಿತು. ಜ್ಯುಡೀಷಿಯಲ್ ಇನ್‌ಕ್ವಯರಿ ವಗೈರೆ ಆಗಬೇಕೆಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಮಾಡಬೇಕೆಂಬುದು ಸಾರ್ವಜನಿಕರ ಅಭಿಪ್ರಾಯವೂ ಇದೆ. ಕೆಲಸಕಾರ್ಯಗಳು ಕೂಡ ಚೆನ್ನಾಗಿ ನಡೆಯುತ್ತಿಲ್ಲ ಎಂದು ಹೈಕೋರ್ಟಿಗೆ ಅಪೀಲನ್ನು ಕೂಡಾ ಕೆಲವು ಜನರು ಹಾಕಿದ್ದಾರೆ. ಅದರ ಬಗ್ಗೆ ನಾನು ಏನನ್ನು ಹೇಳುವುದಿಲ್ಲ. ಸಂಸ್ಥೆಯಲ್ಲಿನ ಕುಂದುಕೊರತೆಗಳನ್ನು ಪರಿಹಾರ ಮಾಡುತ್ತೇನೆ. ಎಂದು ತಾವುಗಳು ಹೇಳಿದ್ದೀರಿ. ಬಸ್‌ಗಳ ಕ್ಲೀನಿಂಗ್ ಕಾರ್ಯವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ ಆ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಡುತ್ತೇವೆ ಎಂದು ಕೂಡಾ ಹೇಳಿದ್ದೀರಿ. ಯಾರಿಗೆ ಕೊಟ್ಟಿದ್ದೀರಿ ? ಬರೀ ಪತ್ರಿಕೆಯ ಹೇಳಿಕೆಯಲ್ಲಿ ಮಾತ್ರವೇ ? ಕೆಲಸ ಮಾತ್ರ ಆಗುತ್ತಿಲ್ಲ. ಎಂದು ಕಾಣುತ್ತದೆ ಇದರ ಬಗ್ಗೆ ತಾವುಗಳು ನಮಗೆ ತಿಳಿಸಬೇಕು. ಪ್ರಯಾಣಿಕರ ಸಂಖ್ಯೆಯ ಏರಿಳಿತವೂ ತಮಗೆ ಆಗಾಗ ಅನಿರೀಕ್ಷಿತ ಭೇಟಿ ಕೊಡುವುದರಿಂದ ತಿಳಿಯುತ್ತದೆ. ಇನ್ನೊಂದು ಲಾಟರಿ ಟಿಕೆಟ್ ರೀತಿಯಲ್ಲಿ ಬಸ್‌ಟಿಕೇಟ್‌ಗಳನ್ನು ಮುದ್ರಿಸುವುದು. ಹಾಗೆಯೆ ಬಸ್ ಟಿಕೇಟ್‌ಗಳನ್ನು ಕೊಂಡುಕೊಳ್ಳುವವರಿಗೆ ಲಾಟರಿಯ ಒಂದು ಪದ್ಧತಿ ಇದೆ. ಇದರಿಂದ ಜನರು ಹೆಚ್ಚು ಹೆಚ್ಚಾಗಿ ಟಿಕೆಟ್‌ಗಳನ್ನು ಕೊಂಡುಕೊಳ್ಳುತ್ತಾರೆ ಎಂಬ ಭಾವನೆ ತಮ್ಮದು. ಇದರಿಂದ ಪ್ರವಾಸ ಮಾಡುವವರ ಸಂಖ್ಯೆಯೂ ಹೆಚ್ಚುತ್ತದೆ ಎಂದಾಗಿರಬಹುದು. ಹಾಗೆ ಇದ್ದಲ್ಲಿ ಯಾವಾಗ ಇದನ್ನು ಮಾಡು

ತ್ತೀರಿ ಎಂದು ತಿಳಿಸಬೇಕು. ಹಾಗೆಯೇ ಕುಂದುಕೊರತೆಗಳ ಬಗ್ಗೆ ತಾವುಗಳು ಮಾತನಾಡುವಾಗ ಪರಿಹಾರದ ಬಗ್ಗೆ ಹೇಳಿದ್ದೀರಿ. ಬಸ್‌ನಲ್ಲಿ ಇರುವ ಕಂಪ್ಲೇಂಟ್ ಬಾಕ್ಸ್ ಏನಿದೆ, ಅದಕ್ಕೆ ಬೀಗ ಇಲ್ಲ. ಹಾಗಾದರೆ ನಾವುಗಳು ಕೊಟ್ಟ ಕಂಪ್ಲೇಂಟ್ ತಮಗೆ ಅಥವಾ ಅಧಿಕಾರಿಗಳಿಗೆ ಹೇಗೆ ತಲುಪುತ್ತದೆ ? ನಮಗೆ ದೂರಿನ ಬಗ್ಗೆ ಪರಿಹಾರ ಹೇಗೆ ಸಿಗುತ್ತದೆ. ಸುಮ್ಮನೆ ಅದಕ್ಕೊಂದು ಹೆಸರು ಮತ್ತು ವೆಚ್ಚಕ್ಕೆ ದಾರಿ ಎಂದು ಹೇಳಬಹುದು. ಈ ಕುರಿತಾಗಿ ನಮ್ಮದೊಂದು ಸಲಹೆ, ಏನೆಂದರೆ ಕುಂದುಕೊರತೆಗಳನ್ನು ಪರಿಹರಿಸಲು ಟೇಪ್ ಮಾಡುವ ಪದ್ಧತಿಯನ್ನು ಜಾರಿಗೆ ತನ್ನಿ. ಹೇಗೋ ತಾವುಗಳು ಟೇಪ್ ಮಾಡಿಕೊಳ್ಳುವುದರಲ್ಲಿ ಸಿದ್ಧಹಸ್ತರು. ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎನ್ನಬಹುದು. ಸುಳ್ಳು ಟೇಪ್ ಮತ್ತು ನಿಜವಾದ ಟೇಪ್ ಇವುಗಳನ್ನು ಮಾಡುವುದರಲ್ಲಿಯೂ ತಾವುಗಳು ನಿಸ್ಸೀಮರಿರಬಹುದು ಪರಿಣತರು ಇರಬಹುದು ಆದಕೋಸ್ಕರವಾಗಿ ಎಲ್ಲಾ ಬಸ್ ಸ್ಟ್ಯಾಂಡ್‌ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ನಿಮ್ಮ ಬಸ್ ಓಡಿಸುತ್ತಿರುವುದರಿಂದ ಸಾರ್ವಜನಿಕರು ತಮ್ಮ ಬಗ್ಗೆ ಕುಂದು ಕೊರತೆಗಳನ್ನು ಹೇಳುವುದಕ್ಕೆ ಟೇಪ್ ಮಾಡಿಕೊಳ್ಳುವ ವ್ಯವಸ್ಥೆಯನ್ನು ಎಲ್ಲಾ ಕಡೆಗಳಲ್ಲಿಯೂ ಮಾಡಿಬಿಡಿ, ಆಗ ಜನರು ಅದನ್ನು ಉಪಯೋಗ ಮಾಡಿಕೊಂಡು ದೂರುಗಳನ್ನು ಹೇಳುತ್ತಾರೆ. ಟೇಪ್ ಆಗುತ್ತದೆ ಅದನ್ನು ತಂದು ನೀವು ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡು, ಅದನ್ನು ಕೇಳುತ್ತಾ ಎಲ್ಲರೂ ಸಂತೋಷಪಟ್ಟುಕೊಳ್ಳಿ.

ಇನ್ನು ನಾನು ಸಾರಿಗೆ ವಿಷಯವನ್ನು ಬಿಟ್ಟು ಕಾಡಿಗೆ ಬರುತ್ತೇನೆ. ದಯಮಾಡಿ ಎರಡೇ ಎರಡು ನಿಮಿಷಗಳ ಕಾಲ ನನಗೆ ಅವಕಾಶ ಕೊಡಿ. ಇಲ್ಲದಿದ್ದರೆ ನಮ್ಮ ಮಾನ್ಯ ಅರಣ್ಯ ಖಾತೆಯ ಸಚಿವರಾದ ಶ್ರೀಮಾನ್ ಜೀವಿಜಯರವರು ಬೇಸರ ಮಾಡಿಕೊಳ್ಳುತ್ತಾರೆ. ಕಾಡಿನ ಬಗ್ಗೆ ನಾನು ಒಂದೇ ಒಂದು ಸಲಹೆಯನ್ನು ಮಾತ್ರ ಕೊಡಬಯಸುತ್ತೇನೆ. ಆ ಸಲಹೆಯನ್ನು ಅವರು ಒಪ್ಪಿಕೊಳ್ಳುವುದಿಲ್ಲ ಎಂದು ನನಗೆ ಗೊತ್ತಿದೆ, ಆ ಸಲಹೆಯಾದರೂ ಏನೆಂದರೆ ಮಂತ್ರಿಗಳಾದಿಯಾಗಿ ತಮ್ಮ ಇಲಾಖೆಯ ಗಾರ್ಡ್ ವರೆವಿಗೂ ಯಾರೂ ಸಹ ಇನ್ನು ಒಂದು ೧೦ ವರ್ಷಗಳ ಕಾಲ ಕಾಡಿನಲ್ಲಿ ಕಾಲಿಡಬಾರದು. ಆ ರೀತಿ ಇರುವುದಾದರೆ ಸಹ್ಯಾದ್ರಿ ಕಾಡು ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಅದಕ್ಕೆ ಬೇಕಾಗುವ ಎಲ್ಲಾ ರೀತಿಯ ಹವಾಮಾನಗಳು ಸಹ ಅಲ್ಲಿವೆ. ಯಾರು ಕಾಡು ಬೆಳೆಸಬೇಕಾಗಿಲ್ಲ. ತನ್ನಷ್ಟಕ್ಕೆ ತಾನೆ ಕಾಡು ಬೆಳೆಯುತ್ತದೆ. ಮತ್ತು ತಾವೆಲ್ಲ ಎಲ್ಲಿ ಟಿಂಬರ್ ಹೋಗುತ್ತದೆಯೋ ಎಂದು ಗಡಿ ಪ್ರದೇಶಗಳಲ್ಲಿ ಸರಿಯಾಗಿ ಕಾವಲು ಇದ್ದರೆ ಸಾಕು......

ಅಧ್ಯಕ್ಷರು.—ತಾವು ದಯಮಾಡಿ ಮುಗಿಸಿ. ನಿಮಗೆ ೫ ನಿಮಿಷ ಕೊಟ್ಟಿದ್ದು ತಾವು ಇನ್ನು ೫ ನಿಮಿಷ ಜಾಸ್ತಿ ತೆಗೆದುಕೊಂಡರು ಮಾತನಾಡಿದ್ದೀರಿ.

ಶ್ರೀ ಆರ್. ಎ. ನಾಯಕ್.—ನಿಮ್ಮ ಕಾಲುಸ್ಪರ್ಶ ಕಾಡಿನಲ್ಲಿ ಆಗದಿದ್ದರೆ ಸಾಕು. ಅಲ್ಲಿ ಕಾಡು ಬೆಳೆಯುತ್ತದೆ......

ಅಧ್ಯಕ್ಷರು.—ಮಾನ್ಯ ನಾಯಕರೇ ತಾವು ದಯಮಾಡಿ ಮುಗಿಸಿ. ನಾನು ಬೇರೆಯವರನ್ನು ಕರೆಯುತ್ತೇನೆ......

ಶ್ರೀ ಬಿ. ಯಸ್. ಯಡಿಯೂರಪ್ಪ.—ಸ್ವಾಮಿ ಪೌರಕಾರ್ಮಿಕರು ಹೊರಗಡೆ ಮುಷ್ಕರ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳನ್ನು ಕರೆಸಿ, ಈಗಾಗಲೇ ಸಮಯ ಆಗುತ್ತಾಬಂದಿದೆ.

ಅಧ್ಯಕ್ಷರು.—ಆಗಲಿ ಮಂತ್ರಿಗಳು ಬರಲಿ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಕೊನೆಯದಾಗಿ ಒಂದೇ ಒಂದು ನಿಮಿಷ ಅವಕಾಶ ಕೊಡಿ ಸಾಕು. ನಾನು ತಮಗೆ ವಂದನೆಗಳನ್ನಾದರೂ ಅರ್ಪಿಸುತ್ತೇನೆ. ಇಲ್ಲದಿದ್ದರೆ ತಮಗೆ ಬೇಸರವಾಗುತ್ತದೆ.

ಅಧ್ಯಕ್ಷರು.—ಆಯಿತು ಬೇಗ ಮುಗಿಸಿ.

ಶ್ರೀ ಆರ್. ಎನ್. ನಾಯಕ್.—ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎ ಉಮರಬ್ಬ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಸೂಕ್ತವಾದ ರೀತಿಯಲ್ಲಿ ಸಮರ್ಪಕವಾದ ರೀತಿಯಲ್ಲಿ ಈ ಮೂರು ಇಲಾಖೆಗಳನ್ನು ಹೊಂದಾಣಿಕೆ ಮಾಡಿ ಚರ್ಚೆಗೆ ತೆಗೆ

ಕೊಂಡಿರುವುದು ಬಹಳ ಸಂತೋಷದ ವಿಷಯ. ಇಲ್ಲಿ ಎಷ್ಟರ ಮಟ್ಟಿಗೆ ಸಮರ್ಪಕವಾಗಿದೆ ಎಂದು ನಾವು ಹೊಂದಾಣಿಕೆ ಮಾಡಿ ಹೇಳುವುದಾದರೆ ಒಬ್ಬ ಬಡವ ಒಂದೆರಡು ಕೆ. ಜಿ. ರೇಷನ್ ತರೋಣವೆಂದು ಹೇಳಿ ಹೊರಟು ದಾರಿಯಲ್ಲಿ ಬರುವಾಗ ಬಂದ ಬಸ್ಸಿನಲ್ಲಿ ಹತ್ತಿಕೊಂಡು ರೇಷನ್ ಅಂಗಡಿಗೆ ಬರುತ್ತಾನೆ, ಮೂರು ದಿವಸಗಳಹಿಂದೆಯೇ ರೇಷನ್ ಬರಬೇಕಾಗಿತ್ತು ಇನ್ನು ಬಂದಿಲ್ಲವೆಂದು ಹೇಳಿದಾಗ ಆ ಬಡವ ನಿರಾಶಾದಾಯಕವಾಗಿ ಮತ್ತೆ ಅದೇ ಬಸ್ಸಿನಲ್ಲಿದ್ದು ಮನೆಗೆ ಹಿಂತಿರುಗುತ್ತಾನೆ. ಮನೆಗೆ ಬಂದಾಗ ಅವನಲ್ಲಿ ಎರಡು ಕೆ ಜಿ. ರೇಷನ್ ತರುವುದಕ್ಕೆ ಇದ್ದ ಹಣದಲ್ಲಿ ಸ್ವಲ್ಪ ಬಸ್ಸಿಗೆ ಕೊಟ್ಟು ಇನ್ನು ಒಂದು ಕೆ. ಜಿ. ರೇಷನ್ ತರುವಷ್ಟು ಹಣ ಮಾತ್ರ ಅವನಲ್ಲಿ ಇರುತ್ತದೆ. ಮಾರನೆಯ ದಿವಸ ಆತ ರೇಷನ್ ಅಂಗಡಿಗೆ ಹೋಗಿ ರೇಷನ್ ತೆಗೆದುಕೊಂಡು ಬಂದು ಅದನ್ನು ಎಲ್ಲಾ ಕ್ಲೀನ್ ಮಾಡಿ ಅದರಲ್ಲಿರತಕ್ಕಂಥ ಕಳಪೆ ವಸ್ತುಗಳನ್ನೆಲ್ಲಾ ತೆಗೆದಾಗ ಅದು ಅರ್ಧ ಕೆ.ಜಿ, ರೇಷನ್ ಮಾತ್ರ ಆಗುತ್ತದೆ. ಆ ಅರ್ಧ ಕೆ.ಜಿ. ರೇಷನ್ ಒಲೆಯಮೇಲಿಟ್ಟು ಬೇಯಿಸಲು ಹೋದಾಗ ಸೌದೆ ಇರುವುದಿಲ್ಲ. ಪಕ್ಕದಲ್ಲಿಯೇ ಇದ್ದ ಕಾಡಿಗೆ ಹೋಗಿ ಅಲ್ಲಿ ಇದ್ದಂಥ ಒಣಕಲು ಸೌದೆಯನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಕಾಡಿನ ಗಾರ್ಡ್ ಬಂದು ಇವನನ್ನು ಹಿಡಿದುಕೊಳ್ಳುತ್ತಾನೆ. ಇದಕ್ಕೆ ನನಗೆ ಒಂದು ಗಾದೆ ಜ್ಞಾಪಕ ಬರುತ್ತದೆ. ಅದೇನೆಂದರೆ ಶನಿ ಹಿಡಿದವ ಸಂತೆಗೆ ಹೋದರೆ ನರಿ ಹಿಡಿದುಕೊಂಡು ತಲೆ ಬೋಳಿಸಿತಂತೆ. ಆ ರೀತಿ ಈ ಗಾರ್ಡ್ ಬಂದು ಅವನ ಬಳಿ ಇದ್ದಂಥ ಕತ್ತಿಯನ್ನು ಕಿತ್ತುಕೊಂಡು ಕಳುಹಿಸಿದ. ಆತ ನೇರವಾಗಿ ಜನತಾ ಮನೆ ಅಥವಾ ಹುಡ್ಕೋ ಮನೆಗೆ ಬಂದಾಗ ಆ ಅರ್ಧ ಕೆ. ಜಿ. ಅಕ್ಕಿ ಸಹ ಆ ಮನೆಯಲ್ಲಿ ಇರಲಿಲ್ಲ. ಕಾರಣವೇನೆಂದರೆ ಆ ಮನೆಗೆ ಸರಿಯಾದ ಬಾಗಿಲು ಇರುವುದಿಲ್ಲ. ಕಿಟಕಿ ಇರುವುದಿಲ್ಲ. ಆದ್ದರಿಂದ ತಾವು ಈ ಮೂರು ಇಲಾಖೆಗಳನ್ನು ಹೊಂದಾಣಿಕೆ ಮಾಡಿ ಹಾಕಿರುವುದರಿಂದ ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ ನಾನು ನೇರವಾಗಿ ಸಾರಿಗೆ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಸಾರಿಗೆ ಇಲಾಖೆಯಲ್ಲಿ ಸೋರುವಿಕೆ ಒಂದು ಇತಿಹಾಸದ ಕತೆ. ಅದನ್ನು ನಿಲ್ಲಿಸಲು ಮೇಲ್ನೋಟಕ್ಕೆ ಯಾರಿಂದಲೂ ಸಹ ಸಾಧ್ಯವಿಲ್ಲ ಮತ್ತು ಅದು ಅಷ್ಟು ಸರಳ ಕೂಡ ಅಲ್ಲ. ಎಷ್ಟೇ ವರಮಾನ ಬಂದರೂ ಸಹ ಈ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರಂಧ್ರಗಳು ಅಷ್ಟು ಬಿರುಕು ಬಿಟ್ಟಿವೆ ಎಂದು ನಾನು ಭಾವಿಸಿದ್ದೇನೆ. ಈ ಇಲಾಖೆಯಲ್ಲಿ ಅನೇಕ ಕಡೆಗಳಲ್ಲಿ ಸಮಗ್ರವಾದಂಥ ಒಂದು ವ್ಯವಸ್ಥೆ ಇಲ್ಲ. ಆದ್ದರಿಂದ ಈ ಇಲಾಖೆಯಲ್ಲಿ ಕೆಲವಾರು ಸಣ್ಣ ಸಣ್ಣ ಬದಲಾವಣೆಗಳು ಆಗಬೇಕಾಗಿದೆ ಎಂದು ನನ್ನ ನಂಬಿಕೆ, ಆ ಬಗ್ಗೆ ಅಗತ್ಯವಾಗಿ ನಾವು ಯೋಚನೆ ಮಾಡಬೇಕು. ದೊಡ್ಡ ದೊಡ್ಡ ಖಾಸಗಿ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಇವೆ. ಆ ಸಾರಿಗೆ ಸಂಸ್ಥೆಗಳು ಪ್ರಗತಿಯತ್ತ ಸಾಗುತ್ತಿರುವಾಗ ನಮ್ಮ ಸಂಸ್ಥೆ ಏತಕ್ಕೆ ಕುಂಠಿತಗೊಂಡಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ನೋಡಬೇಕಾಗಿದೆ. ಅವರು ಯಾವ ರೀತಿ ಲಾಭದಾಯಕವಾಗಿ ಮಾಡುತ್ತಿದ್ದಾರೆನ್ನುವ ಬಗ್ಗೆ ತಾವು ಸಹ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಬಹುದು. ನಾನು ತಮಗೆ ಒಂದು ಸಲಹೆಯನ್ನು ಕೊಡುವುದಾದರೂ ಏನೆಂದರೆ ತಾವು ಆ ಬಿಡಿ ಭಾಗಗಳ ಖರೀದಿ ಹಾಗೂ ಬಸ್ಸಿನ ಟೈರ್‌ಗಳ ಖರೀದಿ ಹಾಗೂ ಚಾಸಿಗಳು ಖರೀದಿಯನ್ನು ಏನು ನೇರವಾಗಿ ಮಾಡುತ್ತಿದ್ದೀರಿ, ಅದನ್ನು ನಿಲ್ಲಿಸಬೇಕು ಈಗ ಉದಾಹರಣೆಗೆ ಹೇಳುವುದಾದರೆ ಲೈಲ್ಯಾಂಡ್ ಗಾಡಿಯ ಬಿಡಿ ಭಾಗಗಳನ್ನು ಲೈಲ್ಯಾಂಡ್ ಕಂಪನಿಯಿಂದಲೇ ಖರೀದಿ ಮಾಡುತ್ತಿದ್ದೀರಿ. ಅಥವಾ ಮಧ್ಯಸ್ಥಿಕೆ ವಹಿಸಿರತಕ್ಕಂಥ ಜನರಿಂದ ಖರೀದಿ ಮಾಡುತ್ತಿರಬಹುದು, ಅವರಿಂದ ತಾವು ಈ ಬಿಡಿ ಭಾಗಗಳನ್ನು ಖರೀದಿ ಮಾಡುವುದರಿಂದ ತಾವು ಅವರಿಗೆ ಜಾಸ್ತಿ ಹಣವನ್ನು ಕೊಡಬೇಕಾದಂಥ ಪರಿಸ್ಥಿತಿ ಬರುತ್ತದೆ ಅದೇ ರೀತಿಯಲ್ಲಿ ತಾವು ಟೈರ್‌ಗಳನ್ನು ಸಹ ಕೊಂಡುಕೊಳ್ಳುತ್ತೀರಿ. ಈ ಬಗ್ಗೆ ತಾವು ಒಂದು ಪರಿಶೀಲನೆಯನ್ನು ನಡೆಸಬೇಕು. ಅದು ಯಾವ ರೀತಿ ಎಂದರೆ ತಮ್ಮ ಇಲಾಖೆಯಲ್ಲಿ ಒಂದು ಸ್ವಯಂ ಪ್ರೇರಿತ ಇಲಾಖೆ ಮಾಡಬೇಕು. ಅದು ಯಾವ ರೀತಿ ಎಂದರೆ ಸಣ್ಣ ಸಣ್ಣ ಯೂನಿಟ್‌ಗಳನ್ನು ತಾವು ಎಲ್ಲಾ ಕಡೆಗಳಲ್ಲಿಯೂ ತೆರೆಯಬೇಕು. ಈಗ ತಾವು ಬಸ್ಸುಗಳಿಗೆ ಬಾಡಿ ಕಟ್ಟುವ ಕೆಲಸವನ್ನು ಬೇರೆ ಖಾಸಗಿಯವರಿಂದ ಮಾಡಿಸುತ್ತಿದ್ದೀರಿ ಎಂದು ಕೇಳಿದ್ದೇನೆ. ತಮ್ಮ ಇಲಾಖೆಯಲ್ಲಿ ಸಾವಿರಾರು ಬಸ್ಸುಗಳಿಗೆ ಬಾಡಿ ಕಟ್ಟಬೇಕಾಗಿರುವುದರಿಂದ ತಾವೇ ಏತಕ್ಕೆ ಒಂದು ಬಾಡಿ ಕಟ್ಟುವ ಯೂನಿಟ್ ತಯಾರು ಮಾಡಬಾರದು ? ಅದೇ ರೀತಿ ಟೈರ್ ರೀ ಬೆಲ್ಟಿಂಗ್ ಮಾಡುವ ಸಣ್ಣ ಸಣ್ಣ ಯೂನಿಟ್‌ಗಳನ್ನು ತಮ್ಮಲ್ಲಿಯೇ ತೆರೆದು ಅಲ್ಲಿಏತಕ್ಕೆ ಟೈರ್‌ಗಳನ್ನು ರೀ ಬೆಲ್ಟಿಂಗ್ ಮಾಡಬಾರದು ? ಮತ್ತೆ ಬ್ಯಾಟರಿ ಚಾರ್ಜ್ ಮಾಡುವ ಯೂನಿಟ್ ಅನ್ನು ತಾವು ಏತಕ್ಕೆ ತಮ್ಮ ಇಲಾಖೆಯಲ್ಲಿ ತೆರೆಯಬಾರದು ? ಈ ಬಗ್ಗೆ

ಮಾನ್ಯ ಮಂತ್ರಿಗಳು ಯೋಚನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಇನ್ನು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಬಿಡಿ ಭಾಗಗಳನ್ನು ಖರೀದಿ ಮಾಡುವುದರಲ್ಲಿ ಸ್ವಲ್ಪ ಮಟ್ಟಿಗೆ ಸೋರುವಿಕೆ ಇದೆ. ಈ ಸೋರುವಿಕೆ ಒಂದು ದೊಡ್ಡ ರಂಧ್ರವಾಗಿಬಿಟ್ಟಿದೆ. ಇದನ್ನು ತಾವು ತಡೆಗಟ್ಟಲು ಆಗುವುದಿಲ್ಲ ಎಂಬು ನಾನು ಮೊದಲೇ ಹೇಳಿದ್ದೇನೆ. ಆದ್ದರಿಂದ ನಾನು ಮೇಲೆ ಕೊಟ್ಟಂತಹ ಸಲಹೆಯನ್ನು ಪರಿಶೀಲನೆ ಮಾಡಿ ನೋಡಿ. ಮತ್ತು ತಾವು ಬಸ್ಸುಗಳ ಸೌಕರ್ಯವನ್ನು ಕಲ್ಪಿಸಿಕೊಡುವಾಗ ಎಲ್ಲಾ ಕಡೆ ಒಂದೇ ಸಮನೆ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಸಾರ್ವಜನಿಕರಿಗೆ ಒಳ್ಳೆಯ ಸೇವೆಯನ್ನು ಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಮತ್ತೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಫಸ್ಟ್ ಏಡ್ ಬಾಕ್ಸ್‌ಗಳು ಇರುತ್ತವೆ ಆ ಫಸ್ಟ್ ಏಡ್ ಬಾಕ್ಸ್‌ಗಳಲ್ಲಿ ಯಾವುದೇ ರೀತಿಯ ಔಷಧಿಗಳಾಗಲಿ ಇರುವುದಿಲ್ಲ. ಮತ್ತೆ ದೂರುಗಳ ಪೆಟ್ಟಿಗೆಯನ್ನು ಇಟ್ಟಿರುತ್ತೀರಿ. ತಾವು ಆ ಪೆಟ್ಟಿಗೆಯನ್ನು ಇಟ್ಟಿರುವ ಉದ್ದೇಶವಾದರೂ ಏನೆಂದರೆ ಸಾರ್ವಜನಿಕರು ಯಾವುದಾದರೂ ಸಲಹೆ ಅಥವಾ ದೂರುಗಳು ಕೊಟ್ಟರೆ ಆ ದೂರುಗಳು ನೇರವಾಗಿ ತಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ತಿಳಿಯಲಿ ಎನ್ನುವ ದೃಷ್ಟಿಯಿಂದ. ಆದರೆ ಅಲ್ಲಿ ಆ ಪೆಟ್ಟಿಗೆಗೆ ಬೀಗವೇ ಹಾಕಿರುವುದಿಲ್ಲ. ಇದರಿಂದ ತಮಗೆ ಆಗಲಿ ಅಥವಾ ಸಾರ್ವಜನಿಕರಿಗೆ ಆಗಲಿ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಆದ್ದರಿಂದ ದಯಮಾಡಿ ಇಂತಹ ಬಾಬುಗಳಿಗೆ ತಾವು ಸುಮ್ಮನೆ ಹಣವನ್ನು ಪೋಲು ಮಾಡುವುದು ಬೇಡ ಇನ್ನು ಕೆಲವು ಪ್ರಮುಖ ಕೇಂದ್ರಗಳಿಂದ ತಾವು ಬಸ್ಸು ಸೌಕರ್ಯವನ್ನು ನೇರವಾಗಿ ಕಲ್ಪಿಸಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಿಂದ ಮಂಗಳೂರಿಗೆ ನೇರವಾದ ಬಸ್ಸು ಸೌಕರ್ಯ ಇದೆ. ಆದರೆ ಅದೇ ಮಂಗಳೂರಿನಿಂದ ಬರುವಾಗ ಮತ್ತು ಬೆಂಗಳೂರಿನಿಂದ ಹೋಗುವಾಗ ಮಧ್ಯದಲ್ಲಿ ಬಿ.ಸಿ. ರೋಡ್ ಎಂದು ಇದೆ. ಅಲ್ಲಿಗೆ ನೇರವಾದಂಥ ಬಸ್ಸು ಸೌಕರ್ಯ ಇಲ್ಲ. ಅದು ಸಾರ್ವಜನಿಕರ ಪ್ರಮುಖ ಕೇಂದ್ರ. ಅಲ್ಲಿಗೆ ಸುತ್ತ ಮುತ್ತಲಿನ ಜನ ಬರುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿಗೆ ನೇರವಾದಂಥ ಬಸ್ಸು ಸೌಕರ್ಯವನ್ನು ಕಲ್ಪಿಸಿಕೊಡಬೇಕು. ಇತ್ತೀಚೆಗೆ ತಾವು ಬಿ.ಟಿ.ಎಸ್. ಬಸ್ಸ್‌ನಲ್ಲಿ ಹೊಸ ರೀತಿಯ ಮಿನಿ ಬಸ್ಸುಗಳನ್ನು ಹಾಕಿದ್ದೀರಿ. ಈ ಮಿನಿ ಬಸ್ಸುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರೋ ಅಷ್ಟೇ ಹಣವನ್ನು ದೊಡ್ಡ ಬಸ್ಸುಗಳಿಗೂ ಕೊಟ್ಟಿದ್ದೀರಿ ಎಂದು ತಿಳಿದು ಬಂದಿದೆ. ಆದ್ದರಿಂದ ಈ ಮಿನಿ ಬಸ್ಸುಗಳನ್ನು ಹಾಕುವ ಬದಲು ಈ ರಸ್ತೆಗಳಲ್ಲಿ ದೊಡ್ಡ ಬಸ್ಸುಗಳನ್ನೇ ಏತಕ್ಕೆ ಹಾಕಬಾರದಾಗಿತ್ತು ? ಇದರಿಂದ ಮಿನಿ ಬಸ್ಸುಗಳಿಗಿಂತ ಅರ್ಧದಷ್ಟು ಹೆಚ್ಚಾಗಿ ಜನ ಈ ದೊಡ್ಡ ಬಸ್ಸುಗಳಲ್ಲಿಯೇ ಸಂಚಾರ ಮಾಡಬಹುದು.

ಆದುದರಿಂದ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಇದರ ಬಗ್ಗೆ ಹೇಳಬೇಕು. ಆ ಮೇಲೆ ಕರ್ನಾಟಕ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಲ್ಲಿ ಸ್ವಲ್ಪ ಮಟ್ಟಿಗೆ ಅನ್ಯಾಯವಾಗುತ್ತಿದೆ. ಇಲ್ಲಿ ಮೊದಲು ಅರ್ಜಿ ಹಾಕಿದವರಿಗೆ ಪರ್ಮಿಟ್ ಸಿಗುತ್ತಿತ್ತು. ಆದರೆ ಇತ್ತೀಚೆಗೆ, ಮೊದಲು ಅರ್ಜಿ ಹಾಕಿದವರಿಗೆ ಬಿಟ್ಟು. ಆ ಮೇಲೆ ಅರ್ಜಿ ಹಾಕಿದವರಿಗೆ ಪರ್ಮಿಟ್ ಸಿಗುವಂಥ ವ್ಯವಸ್ಥೆ ಇದೆ. ಇವರು ಯಾವುದೇ ಒತ್ತಡ ತಂದರೂ ಈ ರೀತಿ ಪರ್ಮಿಟ್ ಕೊಡದಹಾಗೆ, ಮೊದಲು ಬಂದ ಅರ್ಜಿಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ, ಅದರಲ್ಲಿ ಕುಂದು ಏನಿದೆ, ಏಕೆ ಉಳಿದು ಹೋಗಿದೆ ಎಂಬುದನ್ನು ಸ್ಪಷ್ಟವಾಗಿ ಪರಿಶೀಲನೆ ಮಾಡಿ, ಇದರಲ್ಲಿ ಯಾರ ಕೈವಾಡ ಏನಾದರೂ ಇದ್ದರೆ, ಅಂತಹ ಕೈಗಳನ್ನು ಕತ್ತರಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ರಿಕ್ಷಾಗಳಿಗೆ ಕೊಡತಕ್ಕ ಪರ್ಮಿಟ್ ನಿಲ್ಲಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಪರ್ಮಿಟ್ ಕೇಳಿದರೆ, ವಿಶೇಷ ಆದ್ಯತೆಯ ಮೇಲೆ ಪರಿಗಣನೆ ಮಾಡಿ, ವಿದ್ಯಾವಂತ ನಿರುದ್ಯೋಗಿಗಳಿಗೆ ಪರ್ಮಿಟ್ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಸತಿ ಬಗ್ಗೆ ಹೇಳುವುದಾದರೆ, ಇವುಗಳಿಗೆ ಸಕಾಲದಲ್ಲಿ ಹಣ ಸಂದಾಯ ಆಗದೇ, ಹುಡ್ಕೋ ಮನೆಗಳು ಯಾವಾಗ ಆಗಬೇಕೋ, ಆ ಕಾಲಕ್ಕೆ ಆಗುವುದಿಲ್ಲ. ಒಂದುವೇಳೆ ಈ ಮನೆಗಳು ಆದರೂ ಒಂದೇ ಒಂದು ಮಳೆಗಾಲಕ್ಕೆ ಸಿಕ್ಕಿದರೆ ಅವು ನೆಲಸಮವಾಗುತ್ತವೆ. ಆದ್ದರಿಂದ ಈ ಹಣವನ್ನು ಎಲ್ಲಿಂದ ತರುವುದಿದ್ದರೂ ಸರಿ, ಸಕಾಲದಲ್ಲಿ ಹಣ ತರಿಸಿಕೊಂಡು, ಸಕಾಲದಲ್ಲಿ ವಿತರಣೆ ಮಾಡಬೇಕು. ಬಡವರಿಗೆ ಸಕಾಲದಲ್ಲಿ ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡಬೇಕಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವಿಶೇಷ ಸಲಹೆ ಏನೆಂದರೆ, ಕೆಲವು ಅಪಘಾತಗಳಿಗೆ ಮನೆಗಳು ಸಿಗುತ್ತವೆ. ಅಂದರೆ ಬೆಂಕಿ ಅಪಘಾತದಲ್ಲಿ ಮನೆಗಳು ಸುಟ್ಟು ಹೋಗಬಹುದು, ಪ್ರವಾಹದಲ್ಲಿ ಮನೆ ಬಿದ್ದು ಹೋಗಬಹುದು. ಇಂತಹ ಸಂದರ್ಭದಲ್ಲಿ ತಾವು

ತಹಶೀಲ್ದಾರ್ ಕಡೆಯಿಂದ ಕೊಡಿಸುವ ೩೫೦ ರೂಪಾಯಿ ಪರಿಹಾರ ಏನೇನು ಸಾಲದು. ಇದರಿಂದ ಯಾವುದೇ ಪರಿಹಾರ ಸಿಕ್ಕಿದಂತಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ನಿಮ್ಮ ಖಾತೆಯಲ್ಲಿ ಹಣವನ್ನು ಇದಕ್ಕಾಗಿಯೆಂದೇ ರಿಸರ್ವ್ ಇಟ್ಟುಕೊಂಡು, ಯಾವ ಮನೆ ಬೆಂಕಿ ಅಪಘಾತದಲ್ಲಿ ಸುಟ್ಟು ಹೋಗುತ್ತದೋ ಆ ಮನೆಯವನಿಗೆ ತಕ್ಷಣ ಒಂದು ಹಂಚಿನ ಮನೆಯನ್ನು ಕಟ್ಟಿಸಿಕೊಡುವುದಕ್ಕೆ, ತಾವು ಬಿ.ಡಿ.ಓ.ಗಳಿಗೆ ಆದೇಶ ಕೊಡಬೇಕು. ಇಂತಾದ್ದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು. ಗೃಹನಿರ್ಮಾಣ ಮಂಡಲಿ ಹೆಚ್ಚು ಹೆಚ್ಚು ಚುರುಕಾಗಿ, ಕೆಲಸ ಮಾಡುವುದಲ್ಲದೆ, ಹೆಚ್ಚು ಹೆಚ್ಚು ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟುವಂಥ ಪ್ರಯತ್ನ ಮಾಡಬೇಕು ಇನ್ನು ಆಹಾರಧಾನ್ಯದ ಬಗ್ಗೆ ಹೇಳುವುದಾದರೆ, ಸಕಾಲದಲ್ಲಿ ಆಹಾರಧಾನ್ಯಗಳನ್ನು ರೇಷನ್ ಅಂಗಡಿಗಳಿಗೆ ಪೂರೈಸಬೇಕು. ಕಲಬೆರಕೆಯಲ್ಲಿ ರೇಷನ್ ಅಂಗಡಿಯವರು ತೊಡಗಿದ್ದರೆ, ಅಂತಹವರ ಬಗ್ಗೆ ತೀವ್ರವಾಗಿ ಪರಿಶೀಲಿಸಿ, ಈ ವಿಚಾರದಲ್ಲಿ ಆದಷ್ಟು ಹಿಡಿತಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಆಹಾರ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಖಾತೆಗೆ, ಕಾಡು ಪ್ರೀತಿಸುವ ಜನರಿಂದ ಆಯ್ಕೆಯಾದವರೇ ಅರಣ್ಯ ಸಚಿವರಾಗಿದ್ದಾರೆಂದು ನಾನು ಭಾವಿಸಿದ್ದೇನೆ. ತನ್ನ ಪ್ರೀತಿಯ ಕಾಡನ್ನು, ತಾನೇ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದರೆ ಕಷ್ಟವಾಗುತ್ತದೆ ತಾವು ಪ್ರಮುಖವಾಗಿ, ತಮ್ಮ ಕೈಕೆಳಗೆ ಕೆಲಸ ಮಾಡುವಂಥ ಅಧಿಕಾರಿ ವರ್ಗ ಏನಿದೆ, ಕೆಳಮಟ್ಟದ ಅಧಿಕಾರಿಗಳು ಅವ್ಯವಹಾರದಲ್ಲಿ ತೊಡಗಿರುವುದರಿಂದ ನಮ್ಮ ಕಾಡುಗಳು ನಾಶವಾಗುತ್ತಿದೆ. ಮೇಲ್ಪಟ್ಟದ ಅಧಿಕಾರಿಗಳು ಕಾಡಿನ ವಿನಾಶಕ್ಕೆ ಕಾರಣರಾಗುತ್ತಾರೆಂದು ನಾನು ಭಾವಿಸುವುದಿಲ್ಲ. ಆದುದರಿಂದ ಇದನ್ನು ಸಂಪೂರ್ಣವಾಗಿ ತಡಗಟ್ಟದೆ ಹೋದರೆ, ಅನೇಕ ಅನಾಹುತಗಳಾಗುತ್ತವೆ. ಒಬ್ಬ ಬಡವ ಎರಡು ಹೊರೆ ಸೌದೆ ತಂದರೆ, ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ, ಅದರಂತೆ ಲಾರಿಗಳಲ್ಲಿ ಲೋಡುಗಟ್ಟಲೆ ಹೋಗುವುದರ ಬಗ್ಗೆಯೂ ತೀವ್ರ ಕ್ರಮ ತೆಗೆದುಕೊಳ್ಳಬೇಕು. ತಾವು ಆಗಿಂದಾಗ್ಗೆ ಅನಿರೀಕ್ಷಿತ ಭೇಟಿ ಕೊಟ್ಟು ಇದನ್ನು ಸಂಪೂರ್ಣವಾಗಿ ತಡೆಗಟ್ಟುವ ಪ್ರಯತ್ನ ಮಾಡಬೇಕು. ಆ ಮೇಲೆ ಇತ್ತೀಚೆಗೆ, ತಮ್ಮ ಇಲಾಖೆಯ ಅಧಿಕಾರ ವರ್ಗದವರು ಚಳುವಳಿ ಮಾಡುವುದು, ಅದರ ಕೆಲವು ಬೇಡಿಕೆಗಳನ್ನಿಟ್ಟಿರುವುದು ತಮ್ಮ ಮುಂದೆ ಇದೆ. ಅವರ ಬೇಡಿಕೆಗಳನ್ನು ಇದುವರೆಗೂ ಪೂರೈಸುವುದಕ್ಕೆ ಪ್ರಯತ್ನ ಮಾಡಿಲ್ಲ. ಇದರಿಂದ ತೀರಾ ಅಪಾಯದ ಪರಿಸ್ಥಿತಿ ಬರುತ್ತದೆ. ಅವರು ಚಳುವಳಿ ಮಾಡಿ, ಕೆಲಸ ಸ್ಥಗಿತವಾದರೆ, ಈ ಸಂದರ್ಭವನ್ನು ಉಪಯೋಗಿಸಿಕೊಂಡು, ನಮ್ಮ ಕಾಡಿನ ಕೋಟ್ಯಾಂತರ ರೂಪಾಯಿಗಳ ಮೌಲ್ಯ ನಾಶವಾಗುತ್ತದೆ, ನಷ್ಟವಾಗುತ್ತದೆ. ಕಳ್ಳಸಾಗಣೆಗೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಅಲ್ಲದೆ ಕಾಡಿನ ಯಾವುದೇ ಭಾಗದಲ್ಲಿ ಬೆಂಕಿ ಅನಾಹುತ ಆದರೂ, ಅದನ್ನು ಆರಿಸುವವರು ಇಲ್ಲದೆ, ಕಾಡಿಗೆ ಅಪಾಯ ಬರುತ್ತದೆ. ಆದುದರಿಂದ ಕೂಡಲೇ ಈ ನೌಕರರ ಬೇಡಿಕೆಗಳನ್ನು ಗಂಭೀರವಾಗಿ ಪರಿಶೀಲನೆ ಮಾಡಿ ಈಡೇರಿಸುವ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವರು ಹರತಾಳದ ಹಂತಕ್ಕೆ ಹೋಗಬಾರದು. ಅದೇ ರೀತಿ ಕೆ. ಎಸ್. ಆರ್. ಟಿ. ಸಿ. ಕಂಡಕ್ಟರುಗಳನ್ನು ಬದಲಾವಣೆ ಮಾಡುತ್ತಿದ್ದೀರಿ. ಇದರಿಂದ ಅವರಲ್ಲಿ ಒಂದು ರೀತಿಯ ಅತೃಪ್ತಿ ಮೂಡುತ್ತದೆ. ಈ ರೀತಿ ಬದಲಾವಣೆ ಮಾಡುವುದರಿಂದ ಓಪನ್ ಕನ್‌ಫಂಟ್ರೇಷನ್‌ಗೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಅಲ್ಲದೆ, ಇವರ ಯೂನಿಯನ್ ಏನಿದೆ ಅದರ ಬಗ್ಗೆಯೂ ತಾವು ಗಮನ ಕೊಡಬೇಕು. ಅವರ ಬೇಡಿಕೆಗಳು ಏನಿವೆ ಅವುಗಳನ್ನು ಈಡೇರಿಸುವ ದಿಸೆಯಲ್ಲಿ ತಾವು ಕಾರ್ಯಮಗ್ನರಾಗಬೇಕೆಂದು ಹೇಳುತ್ತೇನೆ. ಇವರ ಬೇಡಿಕೆಗಳಿಗೆ ತಾವು ಏನು ಒಪ್ಪಂದ ಮಾಡಿಕೊಳ್ಳುತ್ತೀರಿ, ಅದು ಆದಷ್ಟು ಶೀಘ್ರ ಸಮಯದಲ್ಲಿ ಒಪ್ಪಂದವಾಗಬೇಕು. ಅವರಲ್ಲಿ ಇರುವ ಅತೃಪ್ತಿಯನ್ನು ಹೋಗಲಾಡಿಸಬೇಕೆಂದು ತಮ್ಮಲ್ಲಿ ಕೇಳಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸಾರಿಗೆ ಮತ್ತು ಅರಣ್ಯ ಹಾಗೂ ಆಹಾರ ಇಲಾಖೆಯ ಮೇಲಿನ ಬೇಡಿಕೆಗಳನ್ನು ಸಮರ್ಥಿಸುತ್ತಾ, ತಾವು ಕೊಟ್ಟಿರುವ ೫ ನಿಮಿಷದಲ್ಲಿ ಸಾರಿಗೆ ಸಂಸ್ಥೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಗ್ಗೆ ನಾನು ಏಕೆ ಮಾತನಾಡುತ್ತೇನೆಂದರೆ, ನಾನು ಕಳೆದ ೭–೮ ವರ್ಷದಿಂದ ಒಂದು ಕಾರ್ಮಿಕ ಮಹಾ ಮಂಡಲಿಯ ಸಂಬಂಧವನ್ನು ಇಟ್ಟುಕೊಂಡಿದ್ದೇನೆ. ಆದ್ದರಿಂದ ವಿಶೇಷವಾದ, ಕೆಲವು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಸಿಂಧ್ಯಾರವರು ನಮ್ಮ ಮುಂದೆ ಈ ವರ

ಯನ್ನು ಇಟ್ಟಿದ್ದಾರೆ. ಈ ವರದಿಯಲ್ಲಿ ಕೆ. ಎಸ್. ಆರ್. ಟಿ. ಸಿ ಕಳೆದ ೨–೩ ದಶಕಗಳಲ್ಲಿ ಎಷ್ಟು ಬೃಹದಾಕಾರವಾಗಿ ಬೆಳೆದು ಬಂದಿದೆ. ಅದರ ಕಾರ್ಯಕ್ಷೇತ್ರ ಎಷ್ಟು ಎಂಬ ಬಗ್ಗೆ ಅಂಕಿಅಂಶಗಳನ್ನು ಇಟ್ಟಿದ್ದಾರೆ. ಒಂದು ವಿಚಾರವನ್ನು ಸಾಧಿಸಬೇಕಾಗಿತ್ತು, ಆದರೆ ಅದನ್ನು ಸಾಧಿಸಿಲ್ಲ. ಕೆ. ಎಸ್. ಆರ್. ಟಿ. ಸಿ. ವಿಭಾಗಗಳ ಬಗ್ಗೆ ಹೇಳುವಾಗ, ಸುಮಾರು ೧೫ ವರ್ಷಗಳ ಹಿಂದೆ ನಮ್ಮ ಸಾಧನೆ ಏನಿತ್ತೋ ಅದು ಈಗಲೂ ಅಷ್ಟೆ ಇದೆ. ೧೫ ವರ್ಷಗಳ ಹಿಂದೆ ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಲ್ಲಿ ೧೩ ವಿಭಾಗಗಳು ಏನಿತ್ತು, ಅದಕ್ಕಿಂತ ಮುಂದೆ ಹೋಗುವುದಕ್ಕಾಗಿಲ್ಲ. ೧೯ ವಿಭಾಗಗಳನ್ನು ಮಾಡಬೇಕಾಗಿತ್ತು, ಆದರೆ ೧೩ ವಿಭಾಗಗಳೇ ಇವೆ. ಇವತ್ತು ಕೆ. ಎಸ್. ಆರ್. ಟಿ. ಸಿ. ಸಂಸ್ಥೆ ಅತ್ಯುತ್ತಮ ಕೆಲಸ ಮಾಡುವಂಥ ಮಾರ್ಗದಲ್ಲಿ ಒಂದು ಹೆಜ್ಜೆ ಇಟ್ಟಿದೆ. ಈ ಸಾರಿಗೆ ಸಂಸ್ಥೆಯಲ್ಲಿ, ಮಾನ್ಯ ಸಿಂಧ್ಯಾರವರು, ಕಳೆದ ಕೆಲವಾರು ತಿಂಗಳಿಂದ ಯಾವ ರೀತಿಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದೇ ರೀತಿ ತಮ್ಮ ಪ್ರಯತ್ನವನ್ನು ಮುಂದುವರೆಸಿಕೊಂಡು ಹೋದರೆ, ಇದರ ಬಗ್ಗೆ ಇರತಕ್ಕ ಕೆಟ್ಟ ಹೆಸರು ಹೋಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಈ ಒಂದು ಕೆ. ಎಸ್. ಆರ್. ಟಿ. ಸಿ. ವರದಿಯಲ್ಲಿ ಹೇಳಿದ್ದಾರೆ. ಅಂತರ ರಾಜ್ಯ ಮಾರ್ಗಗಳು ಎಷ್ಟು, ವೇಗಧೂತ ಮಾರ್ಗಗಳು ಎಷ್ಟು, ಅಲ್ಲಲ್ಲಿ ನಿಂತು ಹೋಗತಕ್ಕ ಮಾರ್ಗಗಳು ಎಷ್ಟು ಎಂಬ ವರದಿ ನಮ್ಮ ಮುಂದೆ ಇದೆ. ಸನ್ಮಾನ್ಯ ಸಿಂಧ್ಯಾರವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕೆ. ಎಸ್. ಆರ್. ಟಿ. ಸಿ. ಸಂಸ್ಥೆಯ ಬಸ್ಸುಗಳ ಸ್ವಚ್ಛತೆ ಕೆಲಸವನ್ನು ಕಾಪಾಡಿಕೊಂಡು ಬರಬೇಕು.

೬–೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಒಂದು ಖಾಸಗೀ ಬಸ್ಸಿಗೂ ಮತ್ತು ಕೆಎಸ್‌ಆರ್‌ಟಿಸಿ ಬಸ್ಸಿಗೂ ಹೋಲಿಸಿ ನೋಡಿದಾಗ ಈ ಖಾಸಗೀ ಬಸ್ಸು ಎಷ್ಟು ಕ್ಲೀನ್ ಆಗಿರುತ್ತದೆ ಎನ್ನುವುದನ್ನು ನೋಡಿದರೆ ಆ ಬಸ್ಸಿನಲ್ಲಿರುವಷ್ಟು ಕ್ಲೀನ್ ಈ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಇರುವುದಿಲ್ಲ. ತಾವು ಕಳೆದ ಸಾಲಿನಲ್ಲಿ ೨–೩ ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆ ಕೆಲಸವನ್ನು ಬಹಳ ಪ್ರಾಮಾಣಿಕತೆಯಿಂದ ಮಾಡಿದಿರಿ. ಅದು ಚೆನ್ನಾಗಿ ನಡೆದಿದೆ. ಈ ಸಲ ಈ ಬಸ್ ನಿಲ್ದಾಣಗಳ ಸ್ವಚ್ಛತೆಯ ಕೆಲಸವನ್ನು ಇನ್ನೂ ಹೆಚ್ಚು ಹೆಚ್ಚು ಕೈಗೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಶಾದದ ಸಂಗತಿ ಹೇಳಬೇಕಾಗಿದೆ. ಹಾಗೆಯೇ ಪ್ರತಿಯೊಂದು ಬಸ್ಸನ್ನೂ ಕೂಡ ಸ್ವಚ್ಛವಾಗಿ ಇಟ್ಟುಕೊಳ್ಳಬೇಕಾದರೆ ನಿಮ್ಮ ಕರ್ತವ್ಯ. ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಅನೇಕ ವರ್ಷಗಳಿಂದ ನನಗೂ ಮತ್ತು ಕಾರ್ಮಿಕರಿಗೂ ಸಂಬಂಧ ಇರುವುದರಿಂದ ಅಲ್ಲದೇ ನಾನು ಕಾರ್ಮಿಕ ನಾಯಕನೂ ಆಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಕಾರ್ಮಿಕರಲ್ಲಿ ಒಂದು ಸೌಜನ್ಯತೆ ಬರುವ ಹಾಗೆ ತಾವು ಮಾಡಬೇಕು. ಹೇಗೆಂದರೆ ಈ ವಾಹನ ಚಾಲಕರಿಗೆ ಯಾವರೀತಿಯಾಗಿ ತರಬೇತಿ ಕೊಡುತ್ತಿದ್ದೀರೋ ಅದೇರೀತಿಯಾಗಿ ಈ ಕಾರ್ಮಿಕರಿಗೂ ಸೌಜನ್ಯದ ತರಬೇತಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಕೆಎಸ್‌ಆರ್‌ಟಿಸಿಯ ಕಂಡಕ್ಟರ್ ವರ್ತನೆ ಬಗ್ಗೆ ಹೇಳಬೇಕಾದರೆ ಸಾರ್ವಜನಿಕರಲ್ಲಿ ಒಂದು ಕೆಟ್ಟ ಅಭಿಪ್ರಾಯ ಇದೆ. ಅವರ ವರ್ತನೆ ಬದಲಾಗದೇ ಹೋದರೆ ಸಾರ್ವಜನಿಕರಿಗೆ ಬಹಳ ಕಷ್ಟವಾಗುತ್ತದೆ. ಕಂಡಕ್ಟರ್‌ಗಳು ಸಾರ್ವಜನಿಕರಲ್ಲಿ ನಡೆದುಕೊಳ್ಳುವ ವರ್ತನೆ ಮುಖ್ಯವಾಗಿ ಬದಲಾಗಬೇಕು. ಆ ಒಂದು ದೊಡ್ಡ ಜವಾಬ್ದಾರಿ ನಿಮ್ಮ ಮೇಲೆ ಬಿದ್ದಿದೆ, ಹಾಗೆ ಮಾಡಿದರೆ ನೀವು ಸಾರ್ವಜನಿಕರಿಗೆ ತುಂಬಾ ಉಪಕಾರ ಮಾಡಿದಂತಾಗುತ್ತದೆ. ನನ್ನ ಕ್ಷೇತ್ರದಲ್ಲಿ ಅಂದರೆ ಬಿಜಾಪುರ ವಿಭಾಗಕ್ಕೆ ೧೦ ವರ್ಷದಿಂದಲೂ ಆ ವಿಭಾಗಕ್ಕೆ ಹೆಚ್ಚು ಬಸ್ಸುಗಳನ್ನು ಹಾಕಿರಲಿಲ್ಲ, ಈ ವರ್ಷ ಹೆಚ್ಚು ಬಸ್ಸುಗಳನ್ನು ಆ ವಿಭಾಗಕ್ಕೆ ಹಾಕಿದ್ದೀರಿ ಅದಕ್ಕಾಗಿ ನಾನು ನಿಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದರಲ್ಲಿ ಬಹಳ ಹಣ ಸೋರಿ ನಷ್ಟವಾಗುತ್ತಿತ್ತು. ಇದರ ಬಗ್ಗೆ ಮಾನ್ಯ ಸಾರಿಗೆ ಸಚಿವರು ೨–೩ ವರ್ಷದಿಂದಲೂ ಬಹಳ ಚಿಂತನೆ ಮಾಡುತ್ತಿದ್ದರು. ಇದನ್ನು ಸರಿಪಡಿಸಿ ಲಾಭ ಮಾಡುವ ಜವಾಬ್ದಾರಿ ಅವರ ಹೆಗಲ ಮೇಲೆ ಬಿದ್ದುದರಿಂದ ಇದನ್ನು ಲಾಭ ಮಾಡಬೇಕೆಂದು ಬಹಳ ಪ್ರಯತ್ನ ಮಾಡಿದರು. ಬಹಳ ವರ್ಷಗಳಿಂದಲೂ ಈ ಕೆಎಸ್‌ಆರ್‌ಟಿಸಿ ಹಾನಿಗೊಳಗಾಗಿತ್ತು. ಕೆಎಸ್‌ಆರ್‌ಟಿಸಿಯಲ್ಲಿ ಏನಾಗಿತ್ತು ಎಂದರೆ ಇದು ನಮ್ಮ ದುರ್ದೈವ ಸುಮಾರು ೧೦–೧೫ ವರ್ಷದಿಂದಲೂ ಈ ಬಗ್ಗೆ ಒಂದು ಪರಿಪಾಠವಾಗಿತ್ತು. ಅದೇನೆಂದರೆ ಈ ಕೆಎಸ್‌ಆರ್‌ಟಿಸಿ ಬಸ್ಸುಗಳು ಉತ್ತರ ಕರ್ನಾಟಕದಲ್ಲಿ ಏನು

ಓಡಾಡುತ್ತಿತ್ತು ಅವೆಲ್ಲವೂ ಲಾಭದಾಯಕವಾಗಿ ಕೆಲಸ ಮಾಡುತ್ತಿದ್ದುವು, ಹಾಗೆಯೇ ದಕ್ಷಿಣ ಕರ್ನಾಟಕದಲ್ಲಿ ಓಡಾಡುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸುಗಳು ಕೋಟ್ಯಾಂತರ ರೂಪಾಯಿಗಳಷ್ಟು ಹಾನಿಗೊಳಗಾಗಿತ್ತು. ಅಲ್ಲದೆ ಕೆಲವರು ಇದರಲ್ಲಿ ಲೂಟಿ ಮಾಡುತ್ತಿದ್ದರು. ಅವರು ಲಾಭ ಮಾಡಿಕೊಳ್ಳುತ್ತಿದ್ದರು. ನಮ್ಮ ಉತ್ತರ ಕರ್ನಾಟಕದ ೪ ಮಾರ್ಗಗಳಲ್ಲಿ ಇದು ಕೋಟ್ಯಾಂತರ ರೂಪಾಯಿ ಆದಾಯ ತರುತ್ತಿದೆ. ಅದೇ ಹೈದ್ರಾಬಾದ್ ಕರ್ನಾಟಕ ಮತ್ತು ಮೈಸೂರು ವಿಭಾಗದಲ್ಲಿ ಓಡಾಡುವ ಬಸ್ಸುಗಳಲ್ಲಿ ಬಹಳ ಹಾನಿಯನ್ನು ತೋರಿಸುತ್ತಾರೆ. ಈ ಹಾನಿ ಏತಕ್ಕೆ ಆಗುತ್ತದೆ? ಇದರ ಬಗ್ಗೆ ಸಿವಿಲ್ ಎಸ್ ಅಂತ ಇದೆ. ಅದನ್ನು ತಡೆಹಿಡಿಯುವುದು ಅಗತ್ಯ. ಏತಕ್ಕೆಂದರೆ ಇದರ ಬಗ್ಗೆ ಸಿವಿಲ್ ಎಸ್ ಅಂತ ಏನು ಇದೆ ಅದು ಸರಿಯಾಗಿ ಕೆಲಸ ಮಾಡುವುದಿಲ್ಲ. ಇದರಲ್ಲಿರುವ ಭ್ರಷ್ಟಾಚಾರವನ್ನು ತಾವು ಸಂಧಾರಿಸದೇ ಹೋದರೆ ಕೆಎಸ್‌ಆರ್‌ಟಿಸಿಯಲ್ಲಿ ನಡೆಯುವ ಅವ್ಯವಹಾರಗಳನ್ನು ನೀವು ಎಂದೂ ಸುಧಾರಿಸುವುದಕ್ಕಾಗುವುದಿಲ್ಲ. ಆದಂದರಿಂದ ಮಾನ್ಯ ಮಂತ್ರಿಗಳು ಈ ಸಿವಿಲ್ ಎಸ್ ಬಗ್ಗೆ ಹೆಚ್ಚಿನ ಗಮನ ಇಡಬೇಕೆಂದು ಹೇಳುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಆಗಿಂದಾಗ್ಗೆ ಇದರ ಬಗ್ಗೆ ಸರಪ್ರೈಸ್ ವಿಜಿಟ್ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಈ ಅನಿರೀಕ್ಷಿತ ಭೇಟಿ ಇನ್ನೂ ಹೆಚ್ಚಾದರೆ ಈ ಕೆಎಸ್‌ಆರ್‌ಟಿಸಿಯಲ್ಲಿ ಕಂಡಕ್ಟರ್ಸ್ ಯಾವರೀತಿಯಾಗಿ ಸಾರ್ವಜನಿಕರಲ್ಲಿ ವರ್ತನೆ ಮಾಡುತ್ತಾರೆನ್ನುವುದು ಗೊತ್ತಾಗುತ್ತದೆ. ಅವರು ವಯಸ್ಸಿನಲ್ಲಿ ಚಿಕ್ಕವರಿದ್ದರೂ ಅವರು ಈ ಖಾತೆಯನ್ನು ತೆಗೆದುಕೊಂಡ ಅತ್ಯಲ್ಪ ಅವಧಿಯಲ್ಲೇ ಈ ಕೆಎಸ್‌ಆರ್‌ಟಿಸಿಯ ಆಡಳಿತವನ್ನು ಒಳಗೂ ಹೊರಗೂ ಚೆನ್ನಾಗಿ ನೋಡಿ ಅದರಲ್ಲಿರುವ ಅವ್ಯವಹಾರಗಳನ್ನು ತಡೆಗಟ್ಟಲು ಕೆಲವೇ ತಿಂಗಳಲ್ಲಿ ಸಾಧನೆ ಮಾಡಿ ಇದನ್ನು ಸ್ವಲ್ಪಮಟ್ಟಿಗೆ ನಿವಾರಣೆ ಮಾಡಿದ್ದಾರೆ.

ಇನ್ನು ಕೊನೆಯದಾಗಿ ಹೇಳುವುದಾದರೆ ಈ ಬಗ್ಗೆ ಅವರು ವಿಭಾಗ ಸಲಹಾ ಮಂಡಲಿ ಮಾಡಿದ್ದಾರೆ. ಈ ವಿಭಾಗ ಸಲಹಾ ಮಂಡಲಿಯವರ ಹೆಸರುಗಳನ್ನು ಆಯಾಯ ಬಸ್‌ಸ್ಟ್ಯಾಂಡ್‌ನಲ್ಲಿ ಬರೆದಿದ್ದಾರೆ. ಅವರು ಇದನ್ನು ಬರೆದಿರುವ ಜಾಗದ ಹತ್ತಿರವೇ ಈ ಬಸ್‌ಸ್ಟ್ಯಾಂಡ್‌ಗಳಲ್ಲಿ ಕಿಸೆ ಹೊಡೆಯುವವರ ಫೋಟೋ ಏನು ಇತ್ತು ಅದನ್ನು ಹಾಕಿದ್ದಾರೆ. ಸಾರ್ವಜನಿಕರು ಅಲ್ಲಿ ಹೋಗಿ ನೋಡಿದರೆ ಈ ಸಲಹಾ ಮಂಡಲಿಯಲ್ಲಿರುವವರೇ ಈ ಕಿಸೆ ಹೊಡೆಯುವವರು ಎನ್ನುವ ಹಾಗೆ ಅರ್ಥ ಬರುತ್ತದೆ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸಲಹಾ ಮಂಡಳಿ ಸಮಿತಿಯ ಸದಸ್ಯರು ಇರತಕ್ಕಂಥಾ ಬೋರ್ಡನ್ನು ಬೇರೆ ಕಡೆ ಇಡಿ, ಕಿಸೆ ಹೊಡೆಯುವವರ ಫೋಟೋ ಏನು ಇದೆ ಇದನ್ನು ಸ್ವಲ್ಪ ದೂರ ಇಡಿ.

ಇನ್ನೊಂದು ವಿನಂತಿ ಏನೆಂದರೆ ಈ ಅಡ್ವೈಸರಿ ಬೋರ್ಡ್ ಏನು ಇದೆ ಈ ಅಡ್ವೈಸರಿ ಬೋರ್ಡ್‌ಗೆ ಇನ್ನೂ ಸ್ವಲ್ಪ ಹೆಚ್ಚಿನ ಅಧಿಕಾರ ಕೊಡಿ. ಇದುವರೆಗೆ ಯಾರೂ ಅದಕ್ಕೆ ಹೆಚ್ಚಿನ ಅಧಿಕಾರ ಕೊಟ್ಟಿಲ್ಲ. ಅದಕ್ಕೆ ಹೆಚ್ಚಿನ ಅಧಿಕಾರ ಕೊಟ್ಟರೆ ಇನ್ನೂ ಸಕ್ರಿಯವಾಗಿ ಕೆಲಸ ಮಾಡಬಹುದು, ಆದುದರಿಂದ ಅದಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಈ ಬಸ್ಸಿನ ದರಗಳ ಬಗ್ಗೆ ಹೇಳಿದರು. ಇದಕ್ಕೆ ಒಂದು ಸಮಿತಿಯೂ ಆಯಿತು. ಅದರ ಬಗ್ಗೆ ಉಲ್ಲೇಖಿಸಿದ್ದಾರೆ. ಇದರಲ್ಲಿ ಸ್ಟೇಜ್ ಬಗ್ಗೆ ಇರತಕ್ಕಂಥಾ ದರವನ್ನು ನವೀಕರಣ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದರ ದರ ಜಾಸ್ತಿ ಮಾಡಿ ೪ ತಿಂಗಳಾಯಿತು. ಇನ್ನೂ ಕಡಿಮೆ ಮಾಡಲಿಲ್ಲ. ಇದರಲ್ಲಿ ಸ್ಟೇಜ್ ದರವನ್ನೂ ಕೊಟ್ಟಿಲ್ಲ. ಆದಷ್ಟು ಬೇಗ ಈ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗುಲ್ಬರ್ಗ ಜಿಲ್ಲೆಯಲ್ಲಿ ಬಸ್ಸುಗಳ ರಾಷ್ಟ್ರೀಕರಣ ಮಾಡಿದ್ದೀರಿ. ಇದರ ಬಗ್ಗೆ ತಾವು ಒಂದು ಧೈರ್ಯ ಹೆಜ್ಜೆಯನ್ನು ಇಟ್ಟಿದ್ದೀರಿ. ಅದೇರೀತಿಯಾಗಿ ಇನ್ನುಳಿದ ಮಾರ್ಗಗಳಲ್ಲೂ ಬಸ್ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ರಾಷ್ಟ್ರೀಕರಣ ಮಾಡುವಾಗ ಅನೇಕ ಎಡರುತೊಡರುಗಳು ಬಂದವು, ಆದರೂ ಅವುಗಳನ್ನೆಲ್ಲಾ ಎದುರಿಸಿ ರಾಷ್ಟ್ರೀಕರಣ ಮಾಡಿದ್ದೀರಿ. ಹಾಗೆಯೇ ಉಳಿದವುಗಳನ್ನೂ ಮಾಡಿ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಉಮಾಬಬ್ಬನವರು ಕಾರ್ಮಿಕರ ಬಗ್ಗೆ ಹೇಳಿದರು. ಅನೇಕ ವರ್ಷಗಳಿಂದ ಈ ಕೆಎಸ್‌ಆರ್‌ಟಿಸಿಯಲ್ಲಿರತಕ್ಕಂಥಾ ಯಾವ ಒಂದು ಕಾರ್ಮಿಕ ಸಂಘ ಇದೆಯೋ ಅದಕ್ಕೆ ನಿಜವಾಗಿಯೂ ಮಾನ್ಯತೆ ಮಾಡಬೇಕು, ಅಲ್ಲದೇ ಎಲ್ಲರ ಬೆಂಬಲವನ್ನೂ ಪಡೆಯುತಕ್ಕಂಥಾ ಈ ಒಂದು

ಸಂಘವಾಗಿದೆ. ಇದನ್ನು ಮಾನ್ಯತೆ ಮಾಡುವುದರ ಬಗ್ಗೆ ನಿರ್ಧಾರವಾಗಬೇಕಾಗಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಕಾರ್ಮಿಕರಿಗೂ ಮತ್ತು ಈ ಫೆಡರೇಷನ್‌ಗೂ, ನನಗೂ ಸಂಬಂಧ ಇದೆ. ಈ ಒಂದು ಕೆಎಸ್‌ಆರ್‌ಟಿಸಿ ಅನೇಕ ವರ್ಷಗಳಿಂದ ಇರತಕ್ಕಂಥಾದ್ದು. ಇದರ ಬಗ್ಗೆ ಮಾನ್ಯತೆ ಕೊಡುವುದಕ್ಕೆ ನಿರ್ಧಾರ ತೆಗೆದುಕೊಳ್ಳಬೇಕಾದರೆ ಅದಕ್ಕೇನೂ ಹೆಚ್ಚು ಸಮಯ ಬೇಕಾಗಿಲ್ಲ. ಈ ಮಹಾಮಂಡಲಿಗೆ ಮಾನ್ಯತೆ ಕೊಟ್ಟು ಆದಷ್ಟು ಜಾಗ್ರತೆಯಲ್ಲಿ ಚುನಾವಣೆ ನಡೆಸಿ ಈ ಮಹಾಮಂಡಲಿ ಮಾನ್ಯತೆಯ ಬಗ್ಗೆ ಬೇಗನೆ ನಿರ್ಧಾರ ತೆಗೆದುಕೊಳ್ಳಬೇಕು. ಈ ಮಹಾಮಂಡಲಿಗೆ ಯಾರು ಮೊದಲು ರೆಪ್ರೆಸೆಂಟೇಷನ್ ಮಾಡಿದರೋ ಅವರು ಅದಕ್ಕೆ ನಾಯಕರಾಗಿರಬೇಕು. ೧೫ ವರ್ಷದಿಂದಲೂ ಯಾರು ಈ ಮಹಾಮಂಡಲಿಯಲ್ಲಿದ್ದು ಸಹ ಕಾರ್ಮಿಕರ ಬೇಡಿಕೆಯನ್ನು ಈಡೇರಿಸದೇ ಹೋದರೂ ಅಂಥವರು ತಮ್ಮ ಭಾಷಣವನ್ನು ನಿಲ್ಲಿಸಿ, ಕೆಲಸ ಮಾಡತಕ್ಕವರಿಗೆ ತಮ್ಮ ಸ್ಥಾನವನ್ನು ಬಿಟ್ಟು ಕೊಡಬೇಕೆಂದು ಹೇಳುತ್ತೇನೆ ಈಗ ಕಾರ್ಮಿಕರಲ್ಲಿರುವ ಅಸಂಘಟಿತತೆಯನ್ನು ತಪ್ಪಿಸುವುದಕ್ಕೆ ಚುನಾವಣೆಯನ್ನು ನಡೆಸಬೇಕು. ಯಾವುದು ನಿಜವಾಗಿ ಕಾರ್ಮಿಕರ ಸಂಘ ಇದೆಯೋ ಅ ಸಂಘಕ್ಕೆ ಅವರೂ ಸಹ ಬರಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಹೇಳಬೇಕಾದರೆ ಈಗ ಕೆಎಸ್‌ಆರ್‌ಟಿಸಿಯಲ್ಲಿ ಮಾನ್ಯ ಸಚಿವರು ಬಂದ ಮೇಲೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುದಲ್ಲದೇ ಹೊಸ ಹೊಸ ಉಪಕರಣಗಳನ್ನು ಸಹ ಮಾಡಿದ್ದಾರೆ ಇದು ಇನ್ನೂ ಚೆನ್ನಾಗಿ ನಡೆಯಬೇಕಾದರೆ ನನ್ನ ಒಂದು ಸಲಹೆ ಏನೆಂದರೆ ಪ್ರತಿ ಜಿಲ್ಲೆಯ ಶಾಸಕರ ಜೊತೆಯಲ್ಲಿ ಆಯಾಯಾ ಮಾರ್ಗದ ಬಗ್ಗೆ ಚರ್ಚೆ ಮಾಡಿ, ಅವರು ಅದಕ್ಕೆ ಏನು ಸಲಹೆ ಕೊಡುತ್ತಾರೋ ಅದನ್ನು ಜಾರಿಗೆ ತರುವಂತೆ ಮಾಡಿದರೆ ಇನ್ನೂ ಉತ್ತಮವಾಗುತ್ತದೆ. ಆ ಸಲಹೆಗಳು ತೆಗೆದುಕೊಂಡದ್ದನ್ನು ಕೈಬಿಡಬಾರದು. ಜೊತೆಗೆ ೩ ತಿಂಗಳಿಗೊಂದು ಸಾರಿ ಆಯಾಯ ಜಿಲ್ಲೆಯ ಶಾಸಕರನ್ನು ಕರೆದು ಈ ಕೆಎಸ್‌ಆರ್‌ಟಿಸಿ ಬಗ್ಗೆ ಈಗ ಏನೇನು ಸುಧಾರಣೆಯಾಗಿದೆ, ಯಾವುದು ಉಳಿದಿದೆ ಇವುಗಳ ಬಗ್ಗೆ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಿದರೆ ಅದರಲ್ಲಿರುವ ತಪ್ಪುಗಳನ್ನೂ ಸಹ ತಿದ್ದಿಕೊಳ್ಳಬಹುದು. ಇದರಿಂದ ಆಡಳಿತವರ್ಗಕ್ಕೂ ಅನುಕೂಲವಾಗುತ್ತದೆ. ನಾನು ಇದರ ಬಗ್ಗೆ ಕೊಟ್ಟಂಥಾ ಸಲಹೆಸೂಚನೆಗಳನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಹೇಳಿ, ಈಪೊತ್ತಿನ ದಿವಸ ಈ ಸದನದ ಮುಂದೆ ತಂದಿರತಕ್ಕಂಥಾ ಬೇಡಿಕೆಗಳನ್ನು ನಾನು ಬೆಂಬಲಿಸಿ, ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂಥಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ನಾನು ಈ ವಸತಿ ಇಲಾಖೆಯ ಮುಂಗಡ ಪತ್ರದ ಬಗ್ಗೆ ಮೊಟ್ಟಮೊದಲಾಗಿ ಭಾಷಣ ಮಾಡುತ್ತಿದ್ದೇನೆ. ಈಗ ಹುಡ್ಕೋ ಮುಖಾಂತರ ಏನು ಮನೆಗಳನ್ನು ಕಟ್ಟಿಸುತ್ತಿದ್ದಾರೋ ಅದರ ಕೆಲಸ, ಅದರ ವೇಗ ತೃಪ್ತಿಕರವಾಗಿಲ್ಲ. ಈ ಬಗ್ಗೆ ಹೇಳಬೇಕಾದರೆ ೧೯೭೮–೭೯ ಮತ್ತು ೧೯೮೧–೮೨ರಲ್ಲಿ ಈ ಮನೆಗಳನ್ನು ಯಾರಿಗೆ ಕೊಡುತ್ತೇವೆಂದು ಹೇಳಿದ್ದರೋ ಆ ಜನಗಳಿಗೆ ಇನ್ನೂ ಹಂಚಿಲ್ಲ. ಅಲ್ಲದೆ ಆ ಮನೆಗಳು ಇನ್ನೂ ಪೂರ್ಣಗೊಂಡಿಲ್ಲ. ಅನಂತರ ವರ್ಷದಲ್ಲಿ ಈ ಹುಡ್ಕೋ ಯೋಜನೆಯ ಮುಖಾಂತರ ತೆಗೆದುಕೊಳ್ಳುವಂಥ ಮನೆಗಳ ಕೆಲಸಗಳೂ ಸಹ ಪೂರ್ಣಗೊಂಡಿಲ್ಲ ಈ ಮನೆಗಳನ್ನು ಪೂರ್ಣಮಾಡುವ ಕೆಲಸ ಬಹಳ ಅಗತ್ಯವಾಗಿ ಆಗಬೇಕಾಗಿತ್ತು, ಅದು ಆಗಿಲ್ಲ. ಇದುವರೆಗೂ ಈ ಬಗ್ಗೆ ತಾವು ಏನೂ ಕಾರ್ಯಕ್ರಮ ಕೈಗೊಳ್ಳದೇ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ನಮ್ಮ ತಾಲ್ಲೂಕಿನಲ್ಲಿ ಮಂಜೂರಾದ ಮನೆಗಳನ್ನು ಕಟ್ಟುವುದಕ್ಕೆ ಇನ್ನೂ ನಕ್ಷೆ ಬರಲಿಲ್ಲ. ೫–೬ ತಿಂಗಳಿಂದಲೂ ಇದು ವಿಳಂಬವಾಗಿದೆ. ಏತಕ್ಕೆ ವಿಳಂಬವಾಗಿದೆ ಎನ್ನುವುದರ ಬಗ್ಗೆ ಸರ್ಕಾರದವರು ಗಮನಹರಿಸಬೇಕು ಎಂದು ಹೇಳುತ್ತೇನೆ. ಈ ವಸತಿ ಸೌಕರ್ಯದ ಬಗ್ಗೆ ಸರ್ಕಾರದವರು ಗಮನಹರಿಸಿ ಆದಷ್ಟು ಶೀಘ್ರವಾಗಿ ಕಾರ್ಯಕ್ರಮ ಕೈ ಗೊಳ್ಳಬೇಕೆಂದು ಹೇಳುತ್ತೇನೆ.

ಮೂರನೆಯದಾಗಿ ಟ್ರಾನ್ಸ್‌ಪೋರ್ಟ್ ಇಲಾಖೆ ವಿಚಾರದಲ್ಲಿ ಹೇಳುವುದಾದರೆ ಕಳೆದ ೨ ವರ್ಷದಿಂದಲೂ ಇದರಲ್ಲಿ ಲಾಭ ತರುತ್ತೇವೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡುತ್ತಲೇ ಬಂದಿದ್ದಾರೆ. ತಮಗೆ ಹೇಳಬೇಕಾದರೆ ೧೯೮೪–೮೫ರಲ್ಲಿ ೭೬.೯೩ ಕೋಟಿ ರೂಪಾಯಿ ನಷ್ಟವಾಗಿದೆ. ೧೯೮೫–೮೬ ಇನ್ನೂ ಮುಗಿದಿಲ್ಲ. ಆದುದರಿಂದ ಈ ವರ್ಷ ಮುಗಿಯುವುದರೊಳಗೆ ಇನ್ನೆಷ್ಟು ನಷ್ಟ ಬರುತ್ತದೋ ಎನ್ನುವುದರ ಬಗ್ಗೆ ಅನುಮಾನ ಇರುವುದರಿಂದ ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಹೇಳಬೇಕು ಎಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಈ ಬಸ್ಸಿನ ದರ ಏರಿಸಿರುವುದರ ಬಗ್ಗೆ ಹೇಳಬೇಕಾದರೆ ತಮಿಳುನಾಡಿನಲ್ಲಿ ಓಡಾಡುತ್ತಿರತಕ್ಕಂಥಾ ಬಸ್ಸುಗಳಿಗೆ ಕಂಪೇರ್ ಮಾಡಿದರೆ ಇಲ್ಲಿ ದರ ಜಾಸ್ತಿ. ಅಲ್ಲಿ ಬಸ್ ದರ ಕಡಿಮೆ ಇದ್ದರೂ ಸಹ ಲಾಭದಾಯಕವಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಮಾತ್ರ ಏತಕ್ಕೆ ಸಾಧ್ಯವಾಗುತ್ತಿಲ್ಲ ? ಇಲ್ಲಿ ಕರ್ನಾಟಕ ರಾಜ್ಯದ ರಸ್ತೆ ಸಾರಿಗೆಯು ಸಂಸ್ಥೆಯು ತಮಿಳ್‌ನಾಡಿನಲ್ಲಿರುವ ದರದ ಮೂರರಷ್ಟು ಏರಿಸಿದ್ದಾರೆ. ಅಲ್ಲಿ ದರ ಬಹಳ ಕಡಿಮೆ ಇದೆ. ಅದಕ್ಕೂ ಕಡಿಮೆ ಇದೆ. ತಮಿಳುನಾಡು ರಾಜ್ಯದಲ್ಲಿ ಇಷ್ಟು ಕಡಿಮೆ ದರದಲ್ಲಿ ಬಸ್ಸುಗಳನ್ನು ಓಡಿಸಿ ಲಾಭ ಮಾಡಲಿಕ್ಕೆ ಸಾಧ್ಯವಾಗುವುದಾದರೆ ಕರ್ನಾಟಕದಲ್ಲಿ ಏಕೆ ಆಗುತ್ತಾ ಇಲ್ಲ. ಸಾಧನೆಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಗಣನೀಯಸಾಧನೆ ಮಾಡಿದೆ ಎಂದು ಇದೆ. ತಮಿಳುನಾಡಿನ ಸಾಧನೆಯನ್ನು ಪರೀಶಿಲನೆಮಾಡಿ, ಅಲ್ಲಿ ಲಾಭ ಆಗುವುದಾದರೆ ಇಲ್ಲಿ ಕೂಡ ಲಾಭ ಮಾಡುವುದರ ಬಗ್ಗೆ ಪರಿಶೀಲಿಸಿ ನೋಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ಇಷ್ಟು ಹೇಳಿ ತಾವು ಹೇಳಿದ ೫ ನಿಮಿಷಕ್ಕಿಂತ ನಾನು ಹೆಚ್ಚಿಗೆ ಪ್ರಯಾಣ ಮಾಡುವುದಿಲ್ಲ.

ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ ಆಹಾರ ಇಲಾಖೆಯಲ್ಲಿ, ಕ್ಷಾಮ ಬಂದ ಕಾರಣ ಲೆವಿ ಸಂಗ್ರಹಣ ನೀತಿಯ ಗುರಿ ಸಾಧನೆಯಾಗಿಲ್ಲ ಎಂದು ಹೇಳಿದ್ದಾರೆ. ಅದು ಇರಬಹುದು. ಆದರೆ ಕ್ಷಾಮ ಇಲ್ಲದ ಕಡೆಗಳಲ್ಲಿ ಲೆವಿಯನ್ನು ಸಣ್ಣ ಮಿಲ್ಲುಗಳಿಂದ ಕಡ್ಡಾಯವಾಗಿ ವಸೂಲು ಮಾಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಮಿಲ್ ಅಂದರೆ ೧೫-೨೦ ಕ್ವಿಂಟಾಲ್ ಅಕ್ಕಿ ಮಾಡುವಂಥಾದ್ದು ಸಣ್ಣ ಮಿಲ್, ಅದು ೪ನೇ ನಂಬರ್. ಅದನ್ನು ಕೆಲವರು ರೈತರೇ ಇಟ್ಟುಕೊಂಡಿದ್ದಾರೆ. ಈಗ ಆ ರೈತರಿಂದಲೇ ಲೆವಿ ವಸೂಲು ಮಾಡುವಂಥ ಕಾಯಕ ಪ್ರಾರಂಭವಾಗಿದೆ. ೪ನೇ ನಂಬರ್ ಮಿಲ್‌ಗೆ ಲೈಸನ್ಸ್ ತೆಗೆಯಬೇಕು ಎಂಬ ಬೇಡಿಕೆ ಇದೆ. ಆದುದರಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಲೆವಿ ನೀತಿಯನ್ನು ಚಿಕ್ಕ ಮಿಲ್ಲುಗಳಿಂದ ವಿನಾಯಿತಿಗೊಳಿಸಬೇಕು. ಆಮೇಲೆ ಹಸಿರುಕಾರ್ಡು ಏನು ಕೊಟಿದ್ದಾರೆ ಅದರ ವಿಚಾರದಲ್ಲಿ ಸಾಕಷ್ಟು ಅಕ್ರಮವಾಗಿದೆ ಎಂದು ಮಾನ್ಯ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ. ಅದಕ್ಕೆ ಗ್ರಾಮಸಭೆಮಾಡಿ ತೀರ್ಮಾನ ಮಾಡಿದರೆ ಸಮರ್ಪಕ ವಾಗುತ್ತದೆ, ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ವಾರ್ಷಿಕ ವರದಿಯ ೮ನೇ ಪುಟದಲ್ಲಿ

"ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.—

ರಾಜ್ಯಸರ್ಕಾರವು ದಿನಾಂಕ ೧-೧-೮೬ ರಿಂದ ಸಮಗ್ರ ಆದಿವಾಸಿಗಳ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯು ಭಾರತ ಸರ್ಕಾರದ್ದಾಗಿದ್ದು, ಗುಡ್ಡಗಾಡಿನಲ್ಲಿ ವಾಸಿಸುವ ಗ್ರಾಮೀಣ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಲಾಗುತ್ತಿದೆ. ಚಿಕ್ಕಮಗಳೂರು, ಕೊಡಗು, ದಕ್ಷಿಣಕನ್ನಡ, ಮತ್ತು ಮೈಸೂರು ಜಿಲ್ಲೆಯ ೨೩ ತಾಲ್ಲೂಕುಗಳು ಈ ಯೋಜನೆಯ ಅಡಿಯಲ್ಲಿ ಬರುತ್ತವೆ.

ಎಂದು ಹೇಳಿದ್ದಾರೆ. ಇದರ ಪ್ರಕಾರ ಅಕ್ಕಿಯನ್ನು ಒಂದು ಕೆ.ಜಿ.ಗೆ ೨ ರೂಪಾಯಿ ಅಲ್ಲ ೧-೮೫ರಂತೆ ಕೊಡುತ್ತಿದೆ ಎಂದು ಉಲ್ಲೇಖ ಮಾಡಿದ್ದರೆ ಚೆನ್ನಾಗಿತ್ತು. ಕೇಂದ್ರಸರ್ಕಾರದಿಂದ ೧-೮೫ಕ್ಕೆ ಅಕ್ಕಿ ದೊರಕುತ್ತಾ ಇದೆ ಎಂದು ಉಲ್ಲೇಖ ಇದರಲ್ಲಿ ಬರಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಆಮೇಲೆ ಪುಟ ೯ರಲ್ಲಿ "ಜಾಗೃತ ಘಟಕವು ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ತೆಗೆದುಕೊಂಡ ಕ್ರಮಗಳು. ಜನವರಿ ೧೯೮೫ ರಿಂದ ಡಿಸಂಬರ್ ೧೯೮೫ರವರೆಗೆ ಎಂದು ಕೊಟ್ಟಿದ್ದಾರೆ. ವಸ್ತುಗಳು, ವಶಪಡಿಸಿಕೊಂಡ ಅಗತ್ಯ ವಸ್ತುಗಳು, ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ಬೆಲೆಯನ್ನು ಕೊಟ್ಟಿದ್ದಾರೆ. ಆಹಾರಧಾನ್ಯಗಳು ವಶಪಡಿಸಿಕೊಂಡಿರುವುದು ರೂ. ೧,೪೮,೬೩,೬೮೬-೦೦, ಮುಟ್ಟುಗೋಲು ಹಾಕಿಕೊಂಡಿರುವುದು ರೂ. ೬,೩೪,೦೭೧-೦೦. ಖಾದ್ಯತೈಲ ವಸಪಡಿಸಿ ಕೊಂಡಿರುವುದು ರೂ. ೬೨,೦೩,೭೧೧-೦೦. ಮುಟ್ಟುಗೋಲು ಹಾಕಿಕೊಂಡಿರುವುದು ರೂ. ೧,೩೩,೫೦೩-೦೦. ಸಿಮೆಂಟ್ ವಶಪಡಿಸಿಕೊಂಡಿರುವುದು ರೂ. ೧೪,೯೩,೬೦೮-೦೦, ಮುಟ್ಟುಗೋಲು ಹಾಕಿಕೊಂಡಿರುವುದು ರೂ. ೬೮,೯೮೬-೦೦. ಇದೇ ರೀತಿ ಸೀಮೆಎಣ್ಣೆ, ಮತ್ತಿತರ ವಸ್ತುಗಳ ವಿವರ ಇದೆ. ವಶಪಡಿಸಿಕೊಂಡ ವಸ್ತುಗಳು ಎಷ್ಟಿದೆ, ಎಷ್ಟು ಕಡಿಮೆ ಪಾಲು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಇನ್ನು ಅರಣ್ಯ ವಿಚಾರವಾಗಿ ಹೇಳುವಾಗ, ಅರಣ್ಯನಾಶ ಆಗಬಾರದು ಎಂದು ಎಲ್ಲರೂ ಹೇಳಿದರೂ ಕೂಡ ಅನೇಕ ಕಡೆಗಳಲ್ಲಿ ಇವತ್ತಿಗೂ ಆಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತ ನಿರುದ್ಯೋಗಿಗಳೂ ಕೂಡ ಇದರಲ್ಲಿ ಸೇರಿರುತ್ತಾರೆ. ಅಕ್ರಮ ಸಾಗಾಟ ಆಗುತ್ತಿದೆ. ಒಣ ಸೌದೆ ಪಡೆಯುವ, ಜಾನುವಾರು ಮೇಯಿಸುವ ಬಡವರಿಗೆ ಇದರಿಂದಾಗಿ ಅಡ್ಡಿ ಆಗುತ್ತದೆ. ಕರಾವಳಿಯಲ್ಲಿ ಒಂದು ಸೌದೆ ಡಿಪೊ ಇಲ್ಲ. ಸಾಮಾನ್ಯ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಆಲೋಚನೆ ಮಾಡಬೇಕು. ಕಳೆದ ಸಲ ಶಾಸಕರೊಡನೆ ಸಮಾಲೋಚನೆ ನಡೆಸಿದರೂ ಆ ಕುರಿತು ಏನೂ ಆಗಿಲ್ಲ. ಇದರ ಕುರಿತು ಏನಾದರೂ ಚಿಂತನೆ ಆಗಬೇಕು, ಸಾಮಾನ್ಯ ಜನರಿಗೆ ತೊಂದರೆಯಾಗದ ಹಾಗೆ ಮಾಡಬೇಕು. ಇನ್ನು ಅರಣ್ಯ ಅತಿಕ್ರಮಣ ಎನ್ನುವಂಥಾದ್ದು ಆಗಬಾರದು. ಅತಿಕ್ರಮಣ ಮಾಡಿದರೆ ಉಚ್ಚಾಟನೆ ಆಗಬೇಕು. ಅರಣ್ಯಕ್ಕೆ ಕಾದಿರಿಸುವ ಮೊದಲೇ ಆ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡ ಅನೇಕ ಪ್ರಸಂಗಗಳಿವೆ. ನನ್ನ ಕ್ಷೇತ್ರದಲ್ಲಿ ಒಂದು ಪ್ರಸಂಗ ಇದೆ. ಅದು ೮-೯ ಹರಿಜನರು ಅತಿಕ್ರಮಣ ಮಾಡಿಕೊಂಡ ಪ್ರಸಂಗ. ದರಖಾಸ್ತು ಕೂಡ ಆಗಿತ್ತು. ನಂತರ ಅರಣ್ಯ ಇಲಾಖೆಯವರು ಅಫಾರೆಸ್ಟೇಷನ್‌ಗೆ ಬೇಕು ಎಂದು ಹೇಳಿದರು. ಅನಂತರ ಈ ಬಗ್ಗೆ ರೆವಿನ್ಯೂ ಇಲಾಖೆಗೆ ಹೇಳಿದಾಗ ಬೇರೆ ಜಾಗ ಕೊಡುತ್ತೇವೆ ಎಂದು ಹೇಳುತ್ತಾರೆ. ಮೊದಲು ಜನರು ಅತಿಕ್ರಮಣ ಮಾಡಿದರು, ನಂತರ ಅರಣ್ಯ ಇಲಾಖೆಯವರು ಅತಿಕ್ರಮಣ ಮಾಡಿದರು. ಪ್ರಥಮವಾಗಿ ಅತಿಕ್ರಮಣ ಮಾಡಿದ್ದು ಭೂಹೀನ ಹರಿಜನರು. ಎರಡನೇ ಬಾರಿಗೆ ಅರಣ್ಯ ಇಲಾಖೆಯವರು ಅತಿಕ್ರಮಣ ಮಾಡಿದರು. ಎರಡನೇ ಬಾರಿಗೆ ಅತಿಕ್ರಮಣ ಮಾಡಿರುವುದನ್ನು ರೆಗ್ಯುಲರೈಸ್ ಮಾಡತಕ್ಕ ಪದ್ಧತಿ ಸಮರ್ಪಕವಾಗಿಲ್ಲ. ದಯವಿಟ್ಟು ಜನಗಳಿಗೆ ಅದನ್ನು ಕೊಡಿಸಬೇಕು. ಆ ಜನಗಳನ್ನು ಬಿಟ್ಟು ಬೇರೆ ಅತಿಕ್ರಮಣ ಮಾಡುವವರನ್ನು ತಡೆಹಿಡಿಯಬಹುದು.

ಇನ್ನು ರಾಷ್ಟ್ರೀಯ ಹೆದ್ದಾರಿಯ ಎರಡು ಬದಿಯಲ್ಲಿ ವೃಕ್ಷಗಳನ್ನು ಬೆಳೆಸುವ ಯೋಜನೆ ನಮ್ಮಲ್ಲಿ ಚೆನ್ನಾಗಿ ಆಗುತ್ತದೆ. ಅದರ ಜೊತೆಗೆ ಫಲವೃಕ್ಷಗಳನ್ನು ಎಲ್ಲೆಲ್ಲಿ ಸಾಧ್ಯವಾಗುತ್ತದೆ, ಅಲ್ಲೆಲ್ಲಾ ಬೆಳೆಸುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಗೇರು ನಿಗಮದ ವಿಚಾರವಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ರಾಜ್ಯದಲ್ಲಿ ಗೇರು ನಿಗಮ ಇದೆ. ಯಾವುದೇ ನಿಗಮವನ್ನಾಗಲಿ, ಅಥವಾ ಸಂಸ್ಥೆಗಳನ್ನಾಗಲಿ ಮಾಡುವಾಗ ಅದಕ್ಕೆ ಸ್ವಲ್ಪ ಅನುಭವಿಗಳನ್ನು ಹಾಕಬೇಕು ಎನ್ನುವುದು ನನ್ನ ಅಭಿಪ್ರಾಯ. ಅನುಭವಿಗಳನ್ನು ಹಾಕದೇ ಹೋದರೆ ಸಾಮಾನ್ಯವಾಗಿ ನಷ್ಟದಲ್ಲಿರುತ್ತವೆ. ಸಮರ್ಪಕವಾಗಿ ಕೆಲಸ ಮಾಡುವುದಿಲ್ಲ. ಗೇರು ನಿಗಮದ ಅಧ್ಯಕ್ಷರು ಮತ್ತಿತರರ ವಿಚಾರ ನಾನು ಹೇಳುವುದಿಲ್ಲ. ಒಬ್ಬ ಡೈರೆಕ್ಟರ್ ವಿಚಾರ ಹೇಳುತ್ತೇನೆ. ಒಬ್ಬರು ಅರಣ್ಯ ಮುಖ್ಯ ಪಾಲಕರಾಗಿ ಸಿ.ಸಿ.ಎಫ್.ನಲ್ಲಿದ್ದರು. ಅವರನ್ನು ತೆಗೆದನಂತರ ಒಬ್ಬ ಮಹಿಳೆಯ ನಾಮಕರಣ ಆಯಿತು. ಗೇರು ನಿಗಮದಲ್ಲಿ ತಜ್ಞತೆ ಪಡೆದವರನ್ನು ಹಾಕಬೇಕೇ ಹೊರತು ಫೇವರಿಟಿಸಂ ಮಾಡುವಂಥಾದ್ದು ಆಗಕೂಡದು. ಮಹಿಳೆಯರಿಗೆ ಇತರೆ ಕಲ್ಯಾಣದ ಇಲಾಖೆಗಳು ಇವೆ ಅಂಥಾದ್ದರಲ್ಲಿ ಹಾಕಿದರೆ ಚೆನ್ನಾಗಿರುತ್ತದೆ. ಇಲ್ಲಿ ಹಾಕಿದರೆ ಚೆನ್ನಾಗಿರುವುದಿಲ್ಲ. ಇದನ್ನು ಜನರು ನೋಡಿ ನಗುವಂಥ ಪರಿಸ್ಥಿತಿ ಆಗಿದೆ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರದ ಕಡೆಯಿಂದ ಸಾಕಷ್ಟು ಬೇಡಿಕೆಗಳನ್ನು ಮಂಡಿಸಿದ್ದಾರೆ. ನಾನು ಎಲ್ಲಾ ಬೇಡಿಕೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಇಲ್ಲ. ವಿಶೇಷವಾಗಿ ನಾನು ಹೌಸಿಂಗ್ ಬಗ್ಗೆ ಕೆಲವು ಮಾತುಗಳನ್ನು ಆಡಲಿಕ್ಕೆ ಅಪೇಕ್ಷೆ ಪಡುತ್ತಾ ಇದ್ದೇನೆ. ಹೋದಸಲ ಕೂಡ ನಾನು ಇದರ ಬಗ್ಗೆ ಸಲಹಾ ಸೂಚನೆಗಳನ್ನು ಅವರಿಗೆ ಕೊಟ್ಟಿದ್ದೆ. ಮಾನ್ಯ ಸಿಂಧ್ಯರವರು ಪ್ರಥಮಬಾರಿಗೆ ವಸತಿಖಾತೆಯನ್ನು ವಹಿಸಿಕೊಂಡಾಗ ಮುಂದಿನ ದಿವಸಗಳಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡಬಹುದು ಎಂಬ ಅನಿಸಿಕೆ ನನಗೆ ಇತ್ತು, ಆದರೆ ಅವರಿಗೆ ಸ್ವಲ್ಪ ಏನಾದರೂ ಎಡರುತೊಡರುಗಳು ಬರುತ್ತಾ ಇರಬಹುದು. ಕರ್ನಾಟಕ ರಾಜ್ಯದಲ್ಲಿ ಶ್ರೀಮಾನ್ ದೇವರಾಜಅರಸುರವರು ಮುಖ್ಯ ಮಂತ್ರಿಯಾಗಿದ್ದಾಗ ಪ್ರಪ್ರಥಮವಾಗಿ ಹಳ್ಳಿ ಪ್ರದೇಶದಲ್ಲಿರತಕ್ಕ ಜನರಿಗೆ ಸಣ್ಣ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯ ೧೯೭೨ರಲ್ಲಿ ಪ್ರಾರಂಭವಾಯಿತು. ಈ ಬಗ್ಗೆ ಅವರು ಸಾಕಷ್ಟು ಆಸಕ್ತಿವಹಿಸಿ ಕೆಲಸ ಮಾಡಿದರು ಎಂದು ನನಗನ್ನಿಸುತ್ತದೆ. ಬೇರೆ ರಾಜ್ಯಗಳಿಗಿಂತಲೂ ಹೆಚ್ಚಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಕಾರ್ಯಕ್ರಮ ಅಸ್ತಿತ್ವಕ್ಕೆ ಬಂದಿತು. ಜನತಾ

ಮನೆಗಳನ್ನು ಕಟ್ಟಿಸತಕ್ಕಂಥ ಈ ಒಂದು ಸ್ಕೀಮಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡ ಕರ್ನಾಟಕದಲ್ಲಿ ಸಿಕ್ಕಿದೆ. ತಮ್ಮ ವರದಿ ಪ್ರಕಾರ ೧೯೭೩–೭೪ ರಿಂದ ೧೯೮೪ರವರೆಗೆ ನಾನ್ ಹುಡ್ಕೋ ಸ್ಕೀಂ ಇತ್ತು, ೭೯೨೬ ಮನೆಗಳನ್ನು ಕಟ್ಟಿಸಿ ೨೧೭೮ಲಕ್ಷ ರೂಪಾಯಿಗಳನ್ನು ಇದರ ಮೇಲೆ ಖರ್ಚು ಮಾಡಲಾಗಿತ್ತು. ಅಲ್ಲಿಯ ವರೆಗೆ ನಾನ್ ಹುಡ್ಕೋ ಸ್ಕೀಂ ಇತ್ತು. ಆ ಸ್ಕೀಮಿಗೆ ಕೇಂದ್ರದಿಂದ ಹಣ ಬರುತ್ತಾ ಇರಲಿಲ್ಲ. ನಂತರ ಹುಡ್ಕೋದಿಂದ ಹಣ ಬರಲಿಕ್ಕೆ ಪ್ರಾರಂಭವಾಯಿತು. ಇದರ ಬಗ್ಗೆ ತಮ್ಮ ವರದಿಯಲ್ಲಿ ಎಲ್ಲ ವಿವರ ವನ್ನು ಕೊಟ್ಟಿದ್ದೀರಿ. ಎಷ್ಟು ಸ್ಥಳಗಳಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದನ್ನೆಲ್ಲಾ ನಾನು ಓದಲಿಕ್ಕೆ ಪ್ರಯತ್ನ ಮಾಡಿದರೆ ಇದರಲ್ಲಿ ಹೆಚ್ಚು ಕಂಪಾರಿಟೀವ್ ಆಗುತ್ತದೆ. ೧೯೭೮–೮೧ರಲ್ಲಿ ೮೦,೦೦೦ ಮನೆ ಗಳಲ್ಲಿ ೪೯,೦೦೦ ಮನೆಗಳನ್ನು ೯.೮೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪೂರ್ಣ ಮಾಡಿದ್ದೀರಿ. ೧೯೭೯–೮೦ರಲ್ಲಿ ೭೮.೦೦೦ ಮನೆಗಳನ್ನು ಬಿಡುಗಡೆ ಮಾಡಿ ೭೭,೦೦೦ ಮನೆಗಳನ್ನು ಮುಗಿಸಲು ೧,೯೬೬ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆ, ೧೯೮೦–೮೧ರಲ್ಲಿ ೨೦,೦೦೦ ಮನೆಗಳನ್ನು ಬಿಡುಗಡೆ ಮಾಡಿ ೪೯೮ಲಕ್ಷರೂಪಾಯಿಯನ್ನು ಖರ್ಚು ಮಾಡಿ ಪೂರ್ಣ ಮಾಡಲಾಯಿತು. ೧೯೮೩–೮೪ರಲ್ಲಿ ೪೫,೦೦೦ ಮನೆಗಳನ್ನು ಬಿಡುಗಡೆ ಮಾಡಿ ೩೯,೦೦೦ ಮನೆಗಳನ್ನು ಪೂರ್ಣ ಮಾಡಿದ್ದೀರಿ, ೧೯೮೪–೮೫ ರಲ್ಲಿ ಆರನೇ ಸಿರೀಸ್‌ನಲ್ಲಿ ಮೊದಲನೇ ಹಂತದಲ್ಲಿ ೩೮,೩೬೧ ಮನೆಗಳನ್ನು ಸ್ಯಾಂಕ್ಷನ್ ಮಾಡಿ ೨೬,೦೦೦ ಮನೆಗಳನ್ನು ಮುಗಿಸಿದ್ದೀರಿ. ಉಳಿದ ಮನೆಗಳನ್ನು ಪೂರ್ಣ ಮಾಡಿಲ್ಲ. ಇನ್ನೂ ೧೨ ಸಾವಿರ ಮನೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ೧೯೮೪–೮೫ರಲ್ಲಿ ೧೦ ಸಾವಿರ ಮನೆಗಳನ್ನು ಸೆಕೆಂಡ್ ಸ್ಟೇಜ್‌ನಲ್ಲಿ ಬಿಡುಗಡೆ ಮಾಡಿ ಅದರಲ್ಲಿ ೬,೪೩ ಮನೆಗಳನ್ನು ಮುಗಿಸಲು ೨೦೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ೭ನೇ ಸಿರೀಸ್‌ನಲ್ಲಿ ೫೫೨೨೫ ಮನೆಗಳನ್ನು ಬಿಡುಗಡೆ ಮಾಡಿ ೪೦೩೪ ಮನೆಗಳನ್ನು ಕಟ್ಟಿಸಿದ್ದೀರಿ, ೧೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಹುಡ್ಕೋ ಅಸಿಸ್ಟೆನ್ಸ್ ಸ್ಕೀಮ್‌ನಲ್ಲಿ ಲೋನ್ ಕಾಂಪೋನೆಂಟ್ ಎಷ್ಟು ಸಿಗುತ್ತದೆ? ಹುಡ್ಕೋ ಸ್ಕೀಮಿಗೆ ಸಹಾಯಧನ ಬರುತ್ತದೆ. ನಾನು ೧೯೮೪–೮೫ರಲ್ಲಿ ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡುತ್ತಿಲ್ಲವೆಂದು ಹೇಳಿದ್ದೆ. ನೀವು ಅದಕ್ಕೆ ಕೊಟ್ಟಿರು ವುದು ೧೧.೪ ಲಕ್ಷ ರೂಪಾಯಿ, ಈಗ ನೀವು ಅದಕ್ಕೆ ಒದಗಿಸುವ ಹಣ ೧೦೦೦ ಲಕ್ಷ ರೂಪಾಯಿ. ಅದಕ್ಕೆ ೧೦ಕೋಟಿ ರೂಪಾಯಿ ಒದಗಿಸಿದರೂ ಕಡಿಮೆಯೇ. ಕಳೆದ ವರ್ಷ ಇದರ ಬಗ್ಗೆ ಚರ್ಚೆ ಆಗುವಾಗ ನಾನು ಇಲ್ಲಿ ಇರಲಿಲ್ಲ ಗುಲ್ಬರ್ಗಕ್ಕೆ ಹೋಗಿದ್ದೆ. ಕ್ಲಾರಿಫಿಕೇಷನ್ ಕೇಳುವ ಸಮಯದಲ್ಲಿ ಮುಂದಿನ ದಿನಗಳಲ್ಲಿ ಜನತಾ ಮನೆಗಳನ್ನು ಹೆಚ್ಚು ಕಟ್ಟಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿ ದರು. ಆದರೆ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಈ ಸಾಮಾನ್ಯ ಜನರಿಗೆ ಮನೆ ಕಟ್ಟಿಸಿಕೊಡತಕ್ಕಂತಹ ಸ್ಕೀಮ್ ಏನಿದೆ, ಅದರ ಬಗ್ಗೆ ವಿಧಾನ ಸಭೆಯ ಒಳಗಡೆ ಬಹಳ ಚರ್ಚೆಗೆ ಬರುತ್ತಿರುತ್ತದೆ. ಹಣಕಾಸು ಇಲಾಖೆಯವರು ಇದಕ್ಕೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಈಗ ಮಾನ್ಯ ವೀರಪ್ಪಮೊಯಿಲಿ ಯವರು ಇದ್ದಿದ್ದರೆ ಚೆನ್ನಾಗಿತ್ತು. ಅವರು ಈಗ ಇಲ್ಲಿ ಇಲ್ಲ. ಹಿಂದೆ ನಮಗೆ ಹುಡ್ಕೋ ಸ್ಕೀಮ್‌ನಿಂದ ಲೋನ್ ಕೊಟ್ಟಿರಲಿಲ್ಲ. ಆಗ ನಾವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡಿ ಕಂಟಂಜೆನ್ಸಿ ಫುಡ್‌ನಿಂದ ೩ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿಸಿದ್ದೆವು. ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾದ್ದು ಸರ್ಕಾರದ ಕೆಲಸ, ಕೇವಲ ಧೋತಿ ಸೀರೆ ಕೊಡುತ್ತೇವೆಂದು ಹೇಳುವುದಲ್ಲ, ಬಡವರಿಗೆ ಪರ್ಮನೆಂಟ್ ಆಗಿ ನಿವಾಸ, ಶೆಲ್ಟರ್ ಬೇಕು. ಇದು ಬಹಳ ಮಹತ್ವ ವಾದದ್ದು, ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಅದನ್ನು ಕೊಟ್ಟಿಲ್ಲವೆಂದು ನನ್ನ ಆಪಾದನೆ. ಜನತಾ ಮನೆಗಳನ್ನು ಕಟ್ಟಿಸುವ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿಲ್ಲವೆಂದು ನಾನು ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ. ೧೯೭೮–೭೯ರಲ್ಲಿ ಪ್ರಾರಂಭ ಮಾಡಿದಂತಹ ಹುಡ್ಕೋ ಸ್ಕೀಮ್ ೮೬ರಲ್ಲಿ ಯಾವ ಸ್ಟೇಜಿಗೆ ಬಂದು ನಿಂತಿದೆಯೆಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆದರಲ್ಲಿ ಬೇಕಾದಷ್ಟು ಮನೆಗಳು ಇನ್‌ಕಂಪ್ಲೀಟ್ ಆಗಿದೆ. ೧೯೭೮–೮೬ರವರೆಗೆ ಹುಡ್ಕೋ ಸ್ಕೀಮಿನಲ್ಲಿ ೭೨೦೦ ಲಕ್ಷ ರೂಪಾಯಿ ಗಳನ್ನು, ೪೪೪೫೫ ಮನೆಗಳನ್ನು ಕಟ್ಟಲು ಬಿಡುಗಡೆ ಮಾಡಿದೆ. ಅದರಲ್ಲಿ ಕಂಪ್ಲೀಟ್ ಆಗಿರುವ ಮನೆಗಳು ೨೬೧,೬೬೫ ಇನ್ನೂ ೮೨.೮೨೦ ಮನೆಗಳನ್ನು ಕಟ್ಟಿಸಬೇಕಾಗಿದೆ. ೧೯೮೫–೮೬ರಲ್ಲಿ ೫೫೨೨೫ ಮನೆ ಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ಆದರಲ್ಲಿ ೫೩,೫೬೮ ಮನೆಗಳು ಇನ್ನೂ ಬಾಕಿ ಇದೆ. ೧೬೫೬ ಮನೆಗಳನ್ನು ಮಾತ್ರ ಕಟ್ಟಿಸಿದ್ದೀರಿ. ಅದನ್ನೆಲ್ಲಾ ಪೂರ್ತಿ ಮಾಡಿಲ್ಲ. ಇದು ನಿಮ್ಮ ಸರ್ಕಾರದ ಸಾಧನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೨.೪೦ ಕೋಟಿ ಜನರಿದ್ದಾರೆ ಅವರಲ್ಲಿ ಯಾರು ಬಡತನದ ರೇಖೆಯಿಂದ ಕೆಳಗಡೆ ಇದ್ದಾರೆಯೆಂಬುದನ್ನು ಐಡೆಂಟಿಫೈ ಮಾಡಿದ್ದೀರಿ. ಅದರ ಅಂಕಿ ಅಂಶ ನಿಮ್ಮಲ್ಲಿ

ಇದೆ. ಎಲ್ಲ ಕಡೆ ಎಷ್ಟೆಷ್ಟು ಮಾಡಬೇಕೋ ಅಷ್ಟನ್ನು ಮಾಡಬೇಕಾಗುತ್ತದೆ ೨೩೦೦ ಕೋಟಿ ರೂಪಾಯಿ ಆದಾಯ ಬರುತ್ತದೆ. ಹಳ್ಳಿ ಪ್ರದೇಶದಲ್ಲಿ ಜನತಾ ಮನೆಗಳನ್ನು ಕಟ್ಟಿಸುವುದಕ್ಕೆ ಬಹಳಷ್ಟು ಆಸಕ್ತಿ ವಹಿಸಿ ಅಧ್ಯಯನ ಮಾಡಬೇಕಾಗುತ್ತದೆ. ಮೆಥಾಡಿಕಲ್ ಆಗಿ ಸ್ಟಡಿ ಮಾಡಬೇಕಾಗುತ್ತದೆ. ಮಾನ್ಯ ದೇವರಾಜ ಅರಸ್‌ರವರು ಇದ್ದಾಗ ಪ್ರಾರಂಭವಾಗಿ ೧೯೮೩ರವರೆಗೆ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದೆ. ಈಗಲೂ ಕೂಡ ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಇನ್ನು ಮುಂದೆ ಯಾದರೂ ಕೂಡ ಇದರ ಬಗ್ಗೆ ಹೆಚ್ಚಿನ ಗಮನವನ್ನು ತಾವು ಕೊಡಬೇಕಾಗುತ್ತದೆ. ಇಲ್ಲಿಯವರೆಗೆ ಗಮನ ಕೊಟ್ಟಿಲ್ಲ ಅದಕ್ಕೆ ಬಹಳ ಕಡಿಮೆ ಹಣವನ್ನು ಒದಗಿಸಿದ್ದೀರಿ. ಇನ್ನು ಚಿಂತನ ಚಿಲುಮೆ ಎಂದು ಮಾಡಿದ್ದೀರಿ. ೭ನೇ ಯೋಜನೆಯಲ್ಲಿ ೩.೫ ಲಕ್ಷ ಮನೆಗಳು ಬೇಕೆಂದು ೧೩೫ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದ್ದೀರಿ. ಅದನ್ನೂ ಕೂಡ ಈ ಪ್ಲಾನ್‌ನಲ್ಲಿ ಅಳವಡಿಸಿಕೊಂಡು ಹೋಗಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ. ಜನತಾ ಮನೆಗಳನ್ನು ನಾನ್ ಹಡ್ಕೋ ಸ್ಕೀಮ್‌ನಲ್ಲಿ ಮಾಡಬಹುದೆಂದು ಮೊದಲು ಇತ್ತು. ೧೯೭೩ರಲ್ಲಿ ಪ್ರಾರಂಭವಾಗಿ ೧೯೭೮ರವರೆಗೆ ಇದು ಚೆನ್ನಾಗಿ ನಡೆಯಿತು. ೧೯೮೧ ರಲ್ಲಿ ಬ್ಯಾಂಕ್ ಅಸಿಸ್ಟೆನ್ಸ್ ಸ್ಕೀಮ್‌ನಿಂದ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಯೋಜನೆ ಪ್ರಾರಂಭವಾಯಿತು. ನಮ್ಮಿಂದ ಹೆಚ್ಚು ಹಣವನ್ನು ಒದಗಿಸಲಿಕ್ಕೆ ಆಗುವುದಿಲ್ಲವೆಂದು ಬ್ಯಾಂಕ್‌ನವರು ಅಸಿಸ್ಟೆನ್ಸ್ ಮಾಡುವಂತೆ ಮಾಡಿದ್ದೇವೆ. ೧೯೮೦ ರಿಂದ ೧೯೮೩ರವರೆಗೆ ನಾವು ಏನು ಪ್ರಾರಂಭ ಮಾಡಿ ಚೆನ್ನಾಗಿ ಕೆಲಸ ಮಾಡಿದೆವು, ಅದನ್ನು ತಾವು ೧೯೮೪ರಲ್ಲಿ ಅಧಿಕಾರಕ್ಕೆ ಬಂದು ಕೈಬಿಟ್ಟಿದ್ದೀರಿ. ಬೇಕಾದರೆ ಬ್ಯಾಂಕ್ ಆಫೀಸ್‌ನವರ ಹತ್ತಿರ ಮಾತನಾಡಿ. ನೀವು ಅವರನ್ನು ಕರೆದು ಮಾತನಾಡಿಲ್ಲ. ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ಹರಿಜನರಿಗೆ ಲಾಭವಾಗುವಂತಹ ರೀತಿಯಲ್ಲಿ ನಾವು ಇದ್ದಾಗ ಬ್ಯಾಂಕಿನವರನ್ನು ಮೀಟಿಂಗ್‌ಗೆ ಕರೆದು, ಅದಕ್ಕೆ ಸಾಕಷ್ಟು ಹಣ ಒದಗಿಸುವಂತೆ ಕೇಳಿಕೊಂಡಿದ್ದೆವು. ಅವರೂ ಕೂಡ ಸಾಕಷ್ಟು ಹಣವನ್ನು ಕೊಟ್ಟಿದ್ದರು. ೧೯೮೦ ರಿಂದ ೧೯೮೨ರವರೆಗೆ ೪೩,೦೦೦ ಮನೆಗಳನ್ನು ಕಟ್ಟಿಸಲು ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ಹಣವನ್ನು ಕೊಟ್ಟಿದ್ದೇವೆ. ಮೊನ್ನೆ ಕೇಂದ್ರ ಆಯವ್ಯಯದ ಬಗ್ಗೆ ಮಾತ ನಾಡುತ್ತಾ ಶ್ರೀ ವಿ.ಪಿ ಸಿಂಗ್ ಹೇಳಿದ್ದಾರೆ. ಇವತ್ತಿನ ದಿವಸ ಜನತಾ ಮನೆಗಳನ್ನು ಕಟ್ಟಿಸಲು ೧೦೦೦ ಕೋಟಿ ರೂಪಾಯಿಗಿಂತಲೂ ಹೆಚ್ಚು ಅಂದರೆ ೧೨೫ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಬೇಕು ಹರಿಜನಗಿರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡಲು, ಬಡವರಿಗೆ ಮನೆಗಳನ್ನು ಕಟ್ಟಿಸಿ ಕೊಡಲು ಇಂದಿರಾ ಅವಾಸ್ ಯೋಜನೆಯೆಂದು, ಇಂದಿರಾಜಿಯ ಹೆಸರಿನಲ್ಲಿ ಮಾಡಿದ್ದಾರೆ, ಇಂದಿರಾಜಿಯು ೨೦ ಅಂಶದ ಕಾರ್ಯಕ್ರಮದಲ್ಲಿ ಇದನ್ನು ಅಂತರ್ಗತವಾಗಿ ಸೇರಿಸಿ ದೇಶದಲ್ಲಿ ಜನತಾ ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾ ದ್ದಾಗಲೀ ಇಲ್ಲವೇ ಬಡವರಿಗೆ ಸೈಟನ್ನು ಕೊಡಿಸತಕ್ಕಂಥಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದರು ಇಂದಿರಾ ವಿಕಾಸ್ ಯೋಜನೆಯನ್ನು ಅವರ ಹೆಸರಿನಲ್ಲಿ ಸೆಂಟ್ರಲ್ ಬಡ್ಜೆಟ್ಟಿನಲ್ಲಿ ಮಾನ್ಯ ಸಿಂಗ್‌ರವರು ಉಲ್ಲೇಖ ಮಾಡಿದ್ದಾರೆ. ಹಾಗೂ ಇದಕ್ಕೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ ಆದುದರಿಂದ ಇವತ್ತು, ಸರ್ಕಾರದ ವತಿಯಿಂದ ಎಲ್ಲಾ ಕಡೆಗೂ ಮನೆಗಳನ್ನು ಕಟ್ಟಿಸಲು ಹಣವನ್ನು ಬಿಡುಗಡೆ ಮಾಡಬೇಕು ಎಷ್ಟು ಹಣ ಹುಡ್ಕೋದಿಂದ ಬರುತ್ತದೋ ಅಷ್ಟು ಹಣವನ್ನು ಸೆಂಟ್ರಲ್ ಬಡ್ಜೆಟ್ಟನಲ್ಲಿ ಇಂಪ್ಲಿಮೆಂಟ್ ಮಾಡುತ್ತಾರೆ ಅದರಲ್ಲೂ ಸಾಕಷ್ಟು ಹಣ ಸಿಗುತ್ತದೆ. ಈಗ ಬ್ಯಾಂಕ್ ಅಸಿಸ್ಟೆನ್ಸ್ ಸ್ಕೀಮ್ ಇಲ್ಲ ೧೯೮೩-೮೪ರಲ್ಲಿ ಎಕ್ಸ್‌ಪೆರಿಮೆಂಟಲ್ ನೋಕಾಸ್ಟ್ ಸ್ಕೀಮ್ ಅಂದರೆ ಎರಡು ಸಾವಿರ ಕೊಟ್ಟು ಮೆಟೀರಿಯಲ್ ಕಾಸ್ಟ್ ಕೊಡತಕ್ಕಂತಹ ಪ್ರಾವಿಷನ್ ಇದೆ ೧೯೮೩-೮೪ರಲ್ಲಿ ೧೩,೦೦೦ ಮನೆಗಳನ್ನು ಬಿಡುಗಡೆ ಮಾಡಿ, ೧೨,೦೦೦ ಮನೆಗಳನ್ನು ಕಂಪ್ಲೀಟ್ ಮಾಡಿದ್ದೀರಿ. ೧೯೮೪-೮೫ರಲ್ಲಿ ಎಕ್ಸ್‌ಪೆರಿಮೆಂಟಲ್ ನೋ ಕಾಸ್ಟ್ ಹೌಸಿಂಗ್ ಸ್ಕೀಮ್‌ನಲ್ಲಿ ೨೦,೦೦೦ ಮನೆಗಳನ್ನು ಸ್ಯಾಂಕ್ಷನ್ ಮಾಡಿ ೧೪,೦೦೦ ಮನೆಗಳನ್ನು ಪೂರ್ತಿ ಮಾಡಿದ್ದೀರಿ, ಇನ್ನೂ ಆರು ಸಾವಿರ ಮನೆಗಳನ್ನು ಪೂರ್ತಿ ಮಾಡಬೇಕಾಗಿದೆ. ೧೯೮೫-೮೬ರಲ್ಲಿ ೨೬,೨೮೫ ಮನೆಗಳನ್ನು ಸ್ಯಾಂಕ್ಷನ್ ಮಾಡಿ ೧,೬೨೩ ಮನೆಗಳನ್ನು ಕಂಪ್ಲೀಟ್ ಮಾಡಿದ್ದೀರಿ. ಇಲ್ಲೂ ಸಹ ಫೈಲ್ ಆಗಿದ್ದೀರಿ. ಇದರ ಬಗ್ಗೆ ನಿಗಾ ಏಕೆ ಇಡುತ್ತಿಲ್ಲ? ಇದರಿಂದ ಸಹಾಯವಾಗುತ್ತದೆ, ಈ ಕಾರ್ಯಕ್ರಮದ ಬಗ್ಗೆ ಚಿಂತನೆ ಮಾಡಬೇಕಾಗುತ್ತದ

೭-೩೦ ಪಿ. ಎಂ.

ಪಟ್ಟಣ ಪ್ರದೇಶದಲ್ಲಿರುವಂತಹ ಬಡ ಜನರ ಬಗ್ಗೆ ಭಾಗ್ಯ ಮಂದಿರ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಆದರ ಬಗ್ಗೆ ನಾನು ಹೋದ ಸಲವೂ ಹೇಳಿದ್ದೆ. ಭಾಗ್ಯ ಮಂದಿರ ಯೋಜನೆಯ ಬಗ್ಗೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಗಮನ ಕೊಟ್ಟಿಲ್ಲ ಅಂತ ಹೇಳಿದ್ದೆ. ಅದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ಮುಂದಿನ ಸಾರಿಯಿಂದ ಅದರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಲಾಗುವುದು ಎಂಬುದಾಗಿ ವಾಗ್ದಾನವನ್ನು ಕೊಟ್ಟಿದ್ದರು. ೧೯೮೬-೮೭ರಲ್ಲಿ ತಾವು ಕೇವಲ ೧,೦೦೦ ಮನೆಗಳನ್ನು ಕೊಟ್ಟಿದ್ದೀರಿ. ಭಾಗ್ಯ ಮಂದಿರ ಯೋಜನೆ ಬಗ್ಗೆ ಹೇಳುವುದಾದರೆ, ೧೯೭೯-೮೦ರಲ್ಲಿ ೭,೫೨೦ ಮನೆಗಳನ್ನು ತೆಗೆದುಕೊಂಡಿದ್ದೆವು. ೧೯೮೦-೮೧ರಲ್ಲಿ ೫,೫೫೫ ಮನೆಗಳನ್ನು ತೆಗೆದುಕೊಂಡಿದ್ದೆವು. ೧೯೮೧-೮೨ರಲ್ಲಿ ೬,೦೦೦ ಮನೆಗಳನ್ನು ತೆಗೆದುಕೊಂಡಿದ್ದೆವು. ೧೯೮೨-೮೩ರಲ್ಲಿ ೭,೦೦೦ ಮನೆಗಳನ್ನು ತೆಗೆದುಕೊಂಡಿದ್ದೆವು. ೧೯೮೩-೮೪ರಲ್ಲಿ ೧,೦೦೦ ಮನೆಗಳನ್ನು ತೆಗೆದು ಕೊಂಡಿದ್ದಾರೆ. ೧೯೮೪-೮೫ರಲ್ಲಿ ೪,೬೦೦ ಮನೆಗಳನ್ನು ತೆಗೆದುಕೊಂಡಿದ್ದಾರೆ. ೧೯೮೬-೮೭ರಲ್ಲಿ ಕೇವಲ ೧,೦೦೦ ಮನೆಗಳನ್ನು ತೆಗೆದು ಕೊಂಡಿದ್ದೀರಿ. ಈ ಸಾಲಿನಲ್ಲಿ ಅದಕ್ಕಾಗಿ ತಾವು ೩೧ ಲಕ್ಷ ರೂಪಾಯಿಗಳನ್ನು ಪ್ರವೈಡ್ ಮಾಡಿದ್ದೀರಿ. ಭಾಗ್ಯ ಮಂದಿರ ಯೋಜನೆ ಇರುವಂತಹದ್ದೇ ಪಟ್ಟಣ ಪ್ರದೇಶದಲ್ಲಿರುವ ಬಡ ಜನರ ಅನುಕೂಲಕ್ಕಾಗಿ. ಗ್ರಾಮಾಂತರ ಪ್ರದೇಶದಲ್ಲಿರುವಂತಹ ಬಡ ಜನರ ಅನುಕೂಲಕ್ಕಾಗಿ ಜನತಾ ಮನೆಗಳನ್ನು ಕೊಡು ವಂತಹದ್ದು. ಆದರೆ ಭಾಗ್ಯ ಮಂದಿರ ಯೋಜನೆ ಇವತ್ತು ಅನುಷ್ಠಾನಕ್ಕೆ ಬರುತ್ತಿಲ್ಲ. ಇವೆಲ್ಲ ಕಾರ್ಯ ಕ್ರಮಗಳು ಏನು ಇವೆ ಅವುಗಳು ಜನತೆಗೆ ಗೊತ್ತಿಲ್ಲ. ಈ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ಜನರಿಗೆ ಎಜುಕೇಟ್ ಮಾಡತಕ್ಕಂಥದ್ದು ಅತಿ ಅವಶ್ಯಕ. ಬಿ.ಡಿ.ಒ.ರವರು ಅಲಾಟ್ ಮಾಡತಕ್ಕಂಥ ಮನೆಗಳು ಏನು ಇವೆ. ಅವುಗಳೂ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಆದರ ಬಗ್ಗೆ ತಾವು ಬೇರೆ ಅವಕಾಶ ಕಲ್ಪಿಸಿ ಕೊಟ್ಟರೆ ಹೆಚ್ಚಿನ ರೀತಿಯಲ್ಲಿ ಪ್ರಸ್ತಾಪ ಮಾಡತಕ್ಕಂತಹ ವಿಷಯಗಳು ಇವೆ. ಇವತ್ತು ಜನತಾ ಮನೆಗಳು ಯಾವ ರೀತಿ ಹಂಚಿಕೆಯಾಗುತ್ತಿವೆ? ಬಿ.ಡಿ.ಒ.ರವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ? ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಎಂಬ ವಿಚಾರಗಳೆಲ್ಲವನ್ನೂ ಹೇಳಬಹುದು. ಆದರೆ ಸಮಯದ ಅಭಾವದಿಂದ ಆ ಎಲ್ಲ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ನಂತರ ಹುಡ್ಕೋ ಯೋಜನೆ ಬಗ್ಗೆ ಹೇಳುವುದಾದರೆ, ಬ್ಯಾಂಕಿನಿಂದ ಸಹಾಯವನ್ನು ತೆಗೆದುಕೊಂಡು ಕಟ್ಟಿಸುವಂತಹ ಮನೆಗಳಾಗಲಿ, ಲೋ-ಕಾಸ್ಟ್ ಎಕ್ಸ್‌ಪೆರಿಮೆಂಟಲ್ ಯೋಜನೆಯ ಮನೆಗಳಾಗಲಿ, ಭಾಗ್ಯ ಮಂದಿರದ ಯೋಜನೆಯ ಮನೆಗಳಿಗಾಗಲಿ ಹೆಚ್ಚಿನ ಹಣವನ್ನು ತಾವು ಬಿಡುಗಡೆ ಮಾಡಿಲ್ಲ, ಸರ್ಕಾರ ಬಡವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿಲ್ಲ. ಕೇವಲ ಅಗ್ಗದ ಪ್ರಚಾರಕ್ಕಾಗಿ ಸೀರೆ ಧೋತಿ ಕೊಡತಕ್ಕಂತಹದ್ದರಲ್ಲೇ ಇದ್ದೀರಿ, ಎಂಬುದಾಗಿ ನಿಮ್ಮ ಮೇಲೆ ಅಪಾದನೆ ಮಾಡಬೇಕಾಗಿದೆ, ನಿವೇಶನ ಇಲ್ಲದ ಜನರಿಗೆ ನಿವೇಶನವನ್ನು ಕೊಡುವ ವಿಚಾರದಲ್ಲಿ ತಾವು ಅಂತಹವರನ್ನು ಗುರುತಿಸಿರುವ ಪ್ರಕಾರ ೧೪,೩೮,೦೦೦ ಜನರಿದ್ದಾರೆ ಎಂಬುದಾಗಿ ಗುರುತು ಮಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಬಡವರಿಗೆ ನಿವೇಶನವನ್ನು ಕೊಡುವ ಸಲುವಾಗಿ ತಾಲ್ಲೂಕು ಬೋರ್ಡ್ ಹಣವನ್ನು ಕೊಡಬೇಕಲ್ಲ, ಅದಕ್ಕಾಗಿ ಎಷ್ಟೆಷ್ಟು ಹಣವನ್ನು ೧೯೮೩-೮೪, ೧೯೮೪-೮೫ ಹಾಗೂ ೧೯೮೫-೮೬ ಈ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ್ದಾರೆಂಬುದನ್ನು ಕೇಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಈ ಬಗ್ಗೆ ನಾನು ಹೋದ ಸಲವೂ ಹೇಳಿದ್ದೇನೆ. ಸರ್ಕಾರಿ ಭೂಮಿಯಲ್ಲೇ ೩೭,೦೦೦ ಸೈಟುಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ ಆದರೆ ೫೬ ಲ್ಯಾಂಡ್ ಅಕ್ವಿಜಿಸನ್ ಕೇಸುಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳಲಿಲ್ಲ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಅದಕ್ಕೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ. ಈಗ ಸರ್ಕಾರ ಗುರುತು ಮಾಡಿರುವ ಪ್ರಕಾರ ಇಡೀ ರಾಜ್ಯದಲ್ಲಿ ೧೪.೩೮ ಲಕ್ಷ ಜನರಿಗೆ ನಿವೇಶನಗಳನ್ನು ನೀಡಬೇಕಾಗುತ್ತದೆ, ಅದರಲ್ಲಿ ಇಲ್ಲಿಯವರೆಗೆ, ೧೩.೦೯ ಲಕ್ಷ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದಾಗಿ ಹೇಳುತ್ತಿದ್ದಾರೆ. ಇನ್ನೂ ಡಿಮ್ಯಾಂಡ್ ಸರ್ವೆಯನ್ನು ಹೊಸದಾಗಿ ಕಂಡೆಕ್ಟ್ ಮಾಡಿಲ್ಲ. ೧೯೮೧ರ ಜನಗಣತಿಯ ಆಧಾರದ ಮೇಲೆ ಅಂಕಿ ಸಂಖ್ಯೆಗಳನ್ನು ಹೇಳುತ್ತಿದ್ದೀರಿ. ಇದರ ಬಗ್ಗೆಯೂ ಸರ್ಕಾರ ಹೆಚ್ಚಿನ ರೀತಿಯ ಗಮನ ಕೊಟ್ಟಿಲ್ಲ. ನಿವೇಶನ ಇಲ್ಲದವರಿಗೆ ನಿವೇಶನ ಕೊಡು ವಂತಹ ಕೆಲಸ ಮಹತ್ತರವಾದುದು. ಲ್ಯಾಂಡ್ ಅಕ್ವಿಜಿಸನ್ ಬಗ್ಗೆ ಇರತಕ್ಕ ಕಾನೂನಿಗೆ ತಿದ್ದುಪಡಿಯಾ

ಬೇಕು. ಕೋರ್ಟಿನಲ್ಲಿ ಲ್ಯಾಂಡ್ ಅಕ್ವಿಜಿಸನ್ ಕೇಸುಗಳು ಎಷ್ಟು ಇವೆ? ಆದೇ ರೀತಿ ಅಸಿಸ್ಟೆಂಟ್ ಕಮಿಶನರ್ ಹತ್ತಿರ ಎಷ್ಟೆಷ್ಟು ಕೇಸುಗಳು ಇವೆ ಎಂಬುದನ್ನು ತಿಳಿದುಕೊಂಡು ಅವುಗಳನ್ನು ಕೂಡಲೇ ಇತ್ಯರ್ಥ ಮಾಡುವಬಗ್ಗೆ ಸರ್ಕಾರ ಗಮನ ಕೊಡಬೇಕು. ಈ ಎಲ್ಲ ಕೆಲಸಗಳು ಆಗಬೇಕಾದರೆ, ಜಿಲ್ಲಾಧಿಕಾರಿಗಳ ಜೊತೆ ಮಲ್ಲಿ ಸೀರೀಸ್ ಆಫ್ ಮೀಟಿಂಗ್ಸ್ ಆಗಬೇಕು. ಯಾರ್ಯಾರಿಗೆ ಜನತಾ ಮನೆಗಳನ್ನು ಹಂಚಲಾಗಿದೆ? ಎಷ್ಟೆಷ್ಟು ಜನರಿಗೆ ಸೈಟು ಇಲ್ಲದವರಿಗೆ ಸೈಟುಗಳನ್ನು ಕೊಡಲಾಗಿದೆ? ಎಂಬುದನ್ನು ನೋಡಬೇಕಾಗುತ್ತದೆ. ಅದೇ ರೀತಿ ಪಟ್ಟಣ ಪ್ರದೇಶದಲ್ಲಿರುವಂತಹ ಬಡಜನರ ಬಗ್ಗೆಯೂ ಸಹಾಯ ಮಾಡುವ ಬಗ್ಗೆ ಸಮಾಲೋಚನೆ ಮಾಡಬೇಕಾಗುತ್ತದೆ. ತಮಗೆಲ್ಲಾ ಗೊತ್ತಿರಬಹುದು. ೧೯೮೨-೮೩ರಲ್ಲಿ ೧,೩೮,೦೦೦ ನಿವೇಶನಗಳನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ಕಡೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಈ ಒಂದು ಕೆಲಸ ಯುದ್ಧೋಪಾದಿಯಲ್ಲಿ ಆಗಬೇಕೆಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ೨೦ ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಎಲ್ಲ ಕಡೆ ನಿವೇಶನಗಳನ್ನು ಹಂಚಬೇಕು ಎಂಬುದು ನಮ್ಮ ಸರ್ಕಾರದ ಧ್ಯೇಯವಾಗಿತ್ತು, ಆದರಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಬಡ ಜನರಿಗೆ ಸಹಾಯ ಮಾಡಬೇಕೆಂಬುದು ನಮ್ಮ ಪಕ್ಷದ ನೀತಿಯಾಗಿತ್ತು. ಪುರಸಭೆಗಳಲ್ಲಿರುವಂತಹ ಬಡ ಜನರಿಗೆ ನಿವೇಶನಗಳನ್ನು ಹಂಚುವ ಕೆಲಸದಲ್ಲಿ ೭೫ ಪರ್ಸೆಂಟ್ ಸಬ್ಸಿಡಿ ಬರುತ್ತದೆ. ಆದ್ದರಿಂದ ಪುರಸಭೆ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಇರುವಂತಹ ಬಡವರಿಗೆ ಆದರಲ್ಲೂ ನಿವೇಶನ ಇಲ್ಲದವರಿಗೆ ನಿವೇಶನಗಳನ್ನು ಕೊಟ್ಟು ಸಹಾಯ ಮಾಡಬೇಕಾಗುತ್ತದೆ. ಆ ಬಗ್ಗೆ ತಾವು ಇನ್ನೂ ಕೂಡ ಸಾಕಷ್ಟು ನಿವೇಶನಗಳನ್ನು ಕೊಡಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿಲ್ಲ. ಆ ಕೆಲಸ ಕೂಡ ಆಗುತ್ತಿಲ್ಲ, ಹೆಚ್ಚಿನ ರೀತಿಯಲ್ಲಿ ಪ್ರಚಾರ ಕೂಡ ಇಲ್ಲ. ಇಂತಹ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರಚಾರಕ್ಕೆ ಕೊಡಬೇಕಾಗುತ್ತದೆ.

ಇನ್ನು ಕರ್ನಾಟಕ ಗೃಹ ಮಂಡಲಿಯ ವಿಚಾರದಲ್ಲಿ ಹೇಳುವುದಾದರೆ ಆ ಮಂಡಲಿ ೧೯೮೩ ರಿಂದ ಯಾವ ರೀತಿಯ ಕೆಲಸವನ್ನು ಮಾಡಿದ್ದಾರೆಂಬುದನ್ನು ಹೇಳಲಿಲ್ಲ. ಹೋದ ಸಲವೂ ಹೇಳಿದ್ದೆ. ೧೯೭೦-೮೧ರವರೆಗೆ ಡಿಮ್ಯಾಂಡ್ ಸರ್ವೇ ಕಂಡಕ್ಟ್ ಮಾಡಿದ್ದಾಗಿದೆ. ಎಲ್ಲ ಕಡೆ ಎಷ್ಟೆಷ್ಟು ಪ್ರಜಾ ಸಂಖ್ಯೆ ಇದೆ ಎಂಬುದರ ವಿವರಗಳೂ ಇವೆ. ಅದರಲ್ಲಿ ಕ್ಲಾಸ್ (೧)ರ ಶ್ರೇಣಿಯಲ್ಲಿರತಕ್ಕ ಪಟ್ಟಣಗಳು ೧೭ ಇವೆ. ಈ ೧೭ ಪಟ್ಟಣಗಳಲ್ಲಿ ೧ ಲಕ್ಷಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆ ಇದೆ. ನಂತರ ಕ್ಲಾಸ್ (೨)ರ ಶ್ರೇಣಿಯಲ್ಲಿರತಕ್ಕ ಪಟ್ಟಣಗಳು ೧೭ ಇವೆ. ಈ ೧೭ ಪಟ್ಟಣಗಳಲ್ಲಿ ೫೦,೦೦೦ಕ್ಕಿಂತ ಹೆಚ್ಚು ೧ ಲಕ್ಷಕ್ಕಿಂತ ಕಡಿಮೆ ಪ್ರಜಾ ಸಂಖ್ಯೆ ಇದೆ. ಕ್ಲಾಸ್ (೩)ರ ಶ್ರೇಣಿಯಲ್ಲಿರತಕ್ಕ ೬೪ ಪಟ್ಟಣಗಳಲ್ಲಿ ೨೪,೦೦೦ ಪ್ರಜಾ ಸಂಖ್ಯೆಯಿಂದ ೪೯ ಸಾವಿರ ಪ್ರಜಾ ಸಂಖ್ಯೆ ಇದೆ. ನಂತರ ಕ್ಲಾಸ್ (೪) ಶ್ರೇಣಿಯಲ್ಲಿರತಕ್ಕ ಪಟ್ಟಣಗಳು ೧೦೦ ಇವೆ. ಈ ೧೦೦ ಪಟ್ಟಣಗಳಲ್ಲಿ ೧೦,೦೦೦ ದಿಂದ ೧೯,೦೦೦ ಪ್ರಜಾ ಸಂಖ್ಯೆ ಇದೆ. ಕ್ಲಾಸ್ (೫) ಶ್ರೇಣಿಯಲ್ಲಿರತಕ್ಕ ಪಟ್ಟಣಗಳು ೪೨ ಇವೆ. ಈ ೪೨ ಪಟ್ಟಣಗಳಲ್ಲಿ ೫,೦೦೦ ದಿಂದ ೯,೦೦೦ ಒಳಗಡೆ ಪ್ರಜಾ ಸಂಖ್ಯೆ ಇದೆ. ಇವತ್ತು ೧೭ ಪಟ್ಟಣಗಳಲ್ಲಿರುವ ಪ್ರಜಾ ಸಂಖ್ಯೆ ಕರ್ನಾಟಕ ರಾಜ್ಯದಲ್ಲಿರುವ ಅರ್ಧದಷ್ಟು ಪ್ರಜಾ ಸಂಖ್ಯೆ ಇದೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಲಾರ್ಜಲಿ ಡಿವೋಟೆಡ್ ಟು ಹೌಸಸ್ ಅಂಡ್ ಸೈಟ್ಸ್ ಎಂಬಂದಾಗಿ ಮೆನ್ಶನ್ ಮಾಡಿದ್ದಾರೆ. ಎಲ್ಲ ಕಡೆ ಮನೆಗಳನ್ನು ಕೊಡುವಂತಹದ್ದು ಹಾಗೂ ನಿವೇಶನಗಳನ್ನು ಕೊಡುವಂತಹದ್ದು ಬಹಳ ದೊಡ್ಡ ಗಂಭೀರವಾದ ಸಮಸ್ಯೆ ಇದೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಬಗ್ಗೆ ನಮೂದು ಮಾಡಿದ್ದಾರೆ. ಅದರಂತೆ ಮಹಾರಾಷ್ಟ್ರದಲ್ಲಿ ಮಾಡುತ್ತಿದ್ದಾರೆ. ಮಧ್ಯಪ್ರದೇಶದಲ್ಲಿ ಮಾಡುತ್ತಿದ್ದಾರೆ. ಹರಿಯಾಣದಲ್ಲಿ ಇದಕ್ಕಾಗಿ ಡೆವಲಪ್‌ಮೆಂಟ್ ಏಜೆನ್ಸಿಯೊಂದು ಇದೆ ಎಲ್ಲ ಕಡೆ ಲ್ಯಾಂಡನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸಿದ್ದಾರೆ ಹರಿಯಾಣದಲ್ಲಿ ಖಾಸಗಿ ಏಜೆನ್ಸಿಗೂ ಉತ್ತೇಜನ ಕೊಡತಕ್ಕಂತಹ ವ್ಯವಸ್ಥೆ ಕೂಡ ಮಾಡುತ್ತಿದ್ದಾರೆ. ಕರ್ನಾಟಕ ಗೃಹ ಮಂಡಲಿಯಲ್ಲಿ ಇವತ್ತು ಗುರುತು ಮಾಡಿರುವ ಪ್ರಕಾರ ಅಂದರೆ ೧೯೮೧ರ ಸೆನ್ಸಸ್ ಪ್ರಕಾರ ಮನೆಗಳನ್ನು ಪಟ್ಟಣ ಪ್ರದೇಶಗಳಲ್ಲಿ ಕೊಡಬೇಕಾಗಿದೆ. ಅದರಂತೆ ಅವರು ಕೆಲಸ ಮಾಡಬೇಕಾದರೆ ಪ್ರತಿ ವರ್ಷ ೫೦,೦೦೦ ಮನೆಗಳನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಪ್ರತಿವರ್ಷ ೯೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಅಷ್ಟು ಹಣವನ್ನು ಕೊಡುವುದಕ್ಕಾಗುವುದಿಲ್ಲ. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಪ್ರಾರಂಭದಿಂದ ಎಷ್ಟು ಮನೆಗಳನ್ನು ಕಟ್ಟಿದ್ದಾರೆಂಬುದು ತಮಗೆಲ್ಲಾ ಗೊತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹೇಗೆ ಕೆಲಸ

ಮಾಡುತ್ತಿದೆಯೋ ಅದರಂತೆ ಇದೂ ಕೆಲಸ ಮಾಡಬೇಕು. ಎಲ್ಲಿ ೧ ಲಕ್ಷಕ್ಕಿಂತ ಹೆಚ್ಚಿನ ಪ್ರಜಾ ಸಂಖ್ಯೆ ಇದೆ, ಆ ಒಂದು ಪಟ್ಟಣ ಹೆಪಜಾರ್ಡ್ ಆಗಿ ಬೆಳೆಯಬಾರದು, ವ್ಯವಸ್ಥಿತವಾದ ಪಟ್ಟಣ ಪ್ರದೇಶವಾಗಿ ಬೆಳೆಯಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಶ್ರೀಮಾನ್ ದೇವರಾಜ್ ಅರಸ್‌ರವರು ಇದ್ದಂತಹ ಕಾಲದಲ್ಲಿ ಅಂದರೆ ೧೯೭೬ರಲ್ಲಿ ೧೬ ಪಟ್ಟಣ ಪ್ರದೇಶಗಳಿಗೆ ಸಿ.ಐ.ಟಿ.ಬಿ ಗಳನ್ನು ಮಾಡಿದರು. ಇವತ್ತು ಆ ಒಂದು ಕೆಲಸವನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮಾಡಬೇಕಾಗುತ್ತದೆ. ನಮ್ಮ ಕಾಲದಲ್ಲಿ ಹುಡ್ಕೋದ ರೀಜಿನಲ್ ಆಫೀಸನ್ನು ನಮ್ಮ ರಾಜ್ಯದಲ್ಲಿ ತೆಗೆಯುವುದಕ್ಕೆ ಪ್ರಯತ್ನ ಮಾಡಿದ್ದೆವು. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಆಡಿಟ್ ಎಲ್ಲಿಯವರೆಗೆ ಚೆನ್ನಾಗಿರುವುದಿಲ್ಲ, ಅಲ್ಲಿಯವರೆಗೆ ಅವರ ಪ್ರಾಪರ್ಟಿ ರಿಜಿಸ್ಟ್ರೇಷನ್ ಚೆನ್ನಾಗಿರುವುದಿಲ್ಲ, ರೆವಿನ್ಯೂ ಕಲೆಕ್ಷನ್‌ನ್ನು ಎಲ್ಲಿಯವರೆಗೆ ಮಾಡುವುದಿಲ್ಲ, ಅಲ್ಲಿಯವರೆಗೆ ಹುಡ್ಕೋದವರು ತಮ್ಮ ಸಹಾಯವನ್ನು ಕೊಡುವುದಿಲ್ಲ. ನಮ್ಮ ಕಾಲದಲ್ಲಿ ೬೪ ಯೋಜನೆಗಳನ್ನು ತಯಾರು ಮಾಡಿ ಮಂಜೂರಾತಿಗಾಗಿ ಹುಡ್ಕೋದವರಿಗೆ ಕಳುಹಿಸಿದ್ದೆವು. ಆವಾಗ ಶ್ರೀಮಾನ್ ಬಿಜ್ಲಾನಿಯವರು ಹುಡ್ಕೋದ ಅಧ್ಯಕ್ಷರಾಗಿದ್ದರು. ಅದು ಏನಾಯಿತು ಎಂಬುದರ ಬಗ್ಗೆ ವಿವರವೇ ಇಲ್ಲವಾಗಿದೆ. ಜನಸಂಖ್ಯೆಗನುಗುಣವಾಗಿ ಎಲ್ಲ ಕಡೆ ಮನೆಗಳನ್ನು ಕೊಡುವುದು ಬಹಳ ಅವಶ್ಯಕವಾಗಿದೆ. ಅದಕ್ಕಾಗಿ ಬೇರೆ ಕಡೆ ಯಾವ ರೀತಿ ಮಾಡಿದ್ದಾರೆಂಬುದನ್ನು ತಾವು ಹೋಗಿ ನೋಡಿಕೊಂಡು ಬರುವುದು ಒಳ್ಳೆಯದು. ದೆಹಲಿ ಡೆವಲಪ್‌ಮೆಂಟ್ ಅಥಾರಿಟಿ ಎಂಬುದಾಗಿ ಇದೆ. ಅಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿ ಕಲ್ಕತ್ತದಲ್ಲಿ ಸೆಟ್‌ಲೈಟ್ ಟೌನ್ ಅನ್ನು ಬಿ.ಸಿ. ರಾಯ್‌ರವರ ಕಾಲದಲ್ಲಿ ಮಾಡಿದ್ದಾರೆ. ಬಹಳ ಚೆನ್ನಾಗಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಇಲ್ಲೂ ಮಾಡಬೇಕು, ಅದರ ಬಗ್ಗೆ ನಿಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲೂ ಪ್ರಸ್ತಾಪ ಮಾಡಿಲ್ಲ. ಕರ್ನಾಟಕ ಹೌಸಿಂಗ್ ಬೋರ್ಡ್ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೧೯೭೧ನೇ ಜನಗಣತಿಯ ಪ್ರಕಾರ ಬೆಂಗಳೂರು ನಗರ ೧೧,೩೮,೧೫೦ ೧೯೮೧ ಜನಗಣತಿಯ ಪ್ರಕಾರ ೧೬,೨೨,೬೪೦ ಮನೆಗಳು ಆಗಿವೆ. ೧೦ ವರ್ಷಗಳ ಅವಧಿಯಲ್ಲಿ ಇಷ್ಟು ಮನೆಗಳು ಹೆಚ್ಚಾಗಿವೆ. ಎಷ್ಟೋ ಜನ ಬರುತ್ತಿದ್ದಾರೆ. ೧೯೪೦ರಲ್ಲಿ ಬೆಂಗಳೂರು ನಗರದ ಜನಸಂಖ್ಯೆ ೩ ಲಕ್ಷ ಇದ್ದರೆ ೧೯೬೮ರಲ್ಲಿ ಜನಗಣತಿಯ ಪ್ರಕಾರ ೩೦ ಲಕ್ಷ ಜನಸಂಖ್ಯೆ ಇದೆ. ೧೪ ಪರ್ಸೆಂಟ್ ಹೆಚ್ಚಾಗಿದೆ. ೨೦೦೦ ಇಸವಿಯ ಹೊತ್ತಿಗೆ ೭೦ ಲಕ್ಷಕ್ಕಿಂಥ ಜಾಸ್ತಿ ಜನಸಂಖ್ಯೆ ಬೆಳೆಯುವ ಸಾಧ್ಯತೆ ಇದೆ. ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಇಲ್ಲ. ರಾಜ್ಯದ ಬೇರೆ ಬೇರೆ ಸಣ್ಣಪುಟ್ಟ ಪಟ್ಟಣ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಕೆಲಸವನ್ನು ಮಾಡಬೇಕಾಗಿದೆಯೆಂದು ನಾನು ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇದು ಬಹಳ ದೊಡ್ಡ ಮಹತ್ವದ ಕಾರ್ಯ. ಪಟ್ಟಣ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಬೇಕು. ಹಳ್ಳಿಗಳಲ್ಲಿರತಕ್ಕ ಬಡವರ ಬಗ್ಗೆ ಕೂಡ ಶಾಶ್ವತವಾದ ಸಹಾಯವನ್ನು ಮಾಡಬೇಕೆನ್ನುವ ಒಂದು ಮನೋಭಾವನೆ ಇರಬೇಕು. ೧೯೭೩ನೇ ಇಸವಿಯಲ್ಲಿ ಜನತಾ ಮನೆಗಳನ್ನು ಕಟ್ಟಿಸತಕ್ಕ ಪ್ರಾಮಾಣಿಕ ಪ್ರಯತ್ನ ಯಾವ ರೀತಿ ಆಗಿತ್ತು, ಅದನ್ನು ಸರ್ಕಾರ ಮುಂದುವರಿಸಬೇಕಾಗುತ್ತದೆ. ಇವತ್ತು ಸರ್ಕಾರ ಜನರಿಗೆ ಸಹಾಯ ಮಾಡುತ್ತದೆಂದು ಹೇಳಿದರೆ ಏನೂ ಅನುಕೂಲವಾಗುವುದಿಲ್ಲ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಇದಕ್ಕೆ ಮಂತ್ರಿಗಳಿಂದ ನಾಳೆ ಉತ್ತರ.

ಗಮನ ಸೆಳೆಯುವ ಸೂಚನೆ

ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ (ಕೇಂದ್ರ), ಬಳ್ಳಾರಿ, ಇವರ ಕೆಲವು ಬೇಡಿಕೆಗಳ ಬಗ್ಗೆ.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘವು (ಕೇಂದ್ರ), ಬಳ್ಳಾರಿ (ಕರ್ನಾಟಕ ರಾಜ್ಯದಿಂದ ಮನ್ನಣೆ ಪಡೆದ ಸಂಸ್ಥೆ), ಒಟ್ಟು ೨೫ ಬೇಡಿಕೆಗಳನ್ನು ಸಲ್ಲಿಸಿದೆ. ಇವುಗಳನ್ನು ಯಾರೊಬ್ಬರೂ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಇದುವರೆಗೂ ಕೊಟ್ಟಿಲ್ಲ.

ಇತ್ತೀಚಿನ ಹತ್ತು ತಿಂಗಳ ಅವಧಿಯಲ್ಲಿ ಮೊಟ್ಟಮೊದಲಿಗೆ ಈ ಬೇಡಿಕೆಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ ಮತ್ತು ಈ ಬೇಡಿಕೆಗಳ ಮೇಲೆ ಹಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

೨೫ ಬೇಡಿಕೆಗಳ ಪೈಕಿ ೧೫ ಬೇಡಿಕೆಗಳನ್ನು ಪರಿಗಣಿಸಲಾಗಿದೆ. ಅವುಗಳಲ್ಲಿ ಕೆಲವು ಗಮನಾರ್ಹ ತೀರ್ಮಾನಗಳು ಈ ಕೆಳಕಂಡಂತಿವೆ.

೧ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ (ಕೇಂದ್ರ), ಬಳ್ಳಾರಿ, ಅದರ ಮನ್ನಣೆ.

೨ ಪೌರಾಡಳಿತ ನಿರ್ದೇಶನಾಲಯದ ಸ್ಥಾಪನೆ.

೩ ಎರವಲು ಸೇವೆಯನ್ನು ಹಿಂತೆಗೆದುಕೊಳ್ಳುವಿಕೆ.

೪ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಹೆಚ್ಚುವರಿ ಮುಂಬಡ್ತಿಯು ಮಂಜೂರಾತಿ.

೫ ವಾಹನ ಬತ್ಯೆಯು ಪರಿಷ್ಕರಣೆ.

೬ ಮೋಟಾರ್ ಸೈಕಲ್ ಹಾಗೂ ಮೋಟಾರ್ ಕಾರ್ ಮುಂಗಡಗಳ ಮಂಜೂರಾತಿ.

೭ ಗ್ರೂಪ್ 'ಡಿ' ನೌಕರರ ಮಕ್ಕಳಿಗೆ ಉಚಿತ ಶಿಕ್ಷಣ.

೮ ದಿನಾಂಕ ೧–೧–೧೯೮೨ ಪಿಂಚಣಿ ಸೌಲಭ್ಯಗಳ ಪರಿಷ್ಕರಣೆ.

೯ ಅಧಿಕೃತ ಸಂಘದ ಪದಾಧಿಕಾರಿಗಳಿಗೆ ವಿಶೇಷ ಸಾಂದರ್ಭಿಕ ರಜೆಯು ಮಂಜೂರಾತಿ.

ಈ ಕೆಳಗಿನ ಬೇಡಿಕೆಗಳನ್ನು ಇನ್ನೂ ಮುಂದಿನ ಪರಿಶೀಲನೆಗಾಗಿ ತಡೆಹಿಡಿಯಲಾಗಿದೆ.

ಅ ವೇತನ ಶ್ರೇಣಿಯಲ್ಲಿ ವ್ಯತ್ಯಾಸ ಸರ್ಕಾರದಿಂದ ರಚಿಸ್ಪಟ್ಟ ತೃತೀಯ ವೇತನ ಆಯೋಗಕ್ಕೆ ಬೇಡಿಕೆಯನ್ನು ಸಲ್ಲಿಸಬಹುದು. ಈಗಾಗಲೇ ಆಯೋಗದ ಕಾರ್ಯವ್ಯಾಪ್ತಿಗೆ ಈ ಅಂಶವು ಒಳಪಟ್ಟಿದೆ.

ಆ ಕೆ.ಜಿ.ಐ.ಡಿ. ಯನ್ನು ಮುನಿಸಿಪಲ್ ನೌಕರರಿಗೆ ವಿಸ್ತರಿಸುವ ಬಗ್ಗೆ ಆರ್ಥಿಕ ಇಲಾಖೆಯು ತತ್ವಶಃ ಒಪ್ಪಿರುವುದಿಲ್ಲ. ಆದಾಗ್ಯೂ ಈ ವಿಷಯವು ಪರಿಶೀಲನೆಯಲ್ಲಿದೆ.

ಉಳಿದ ಬೇಡಿಕೆಗಳು ಕೆ. ಸಿ. ಎಸ್. ಆರ್.ನ ಅನ್ವಹಿಸುವಿಕೆಗೆ ಸಂಬಂಧ ಪಟ್ಟಿದೆ. ಇವುಗಳನ್ನು ಸವಿವರವಾಗಿ ಈಗಾಗಲೇ ಪರಿಶೀಲಿಸಲಾಗಿದೆ.

ಸಂಘವು ಇದುವರೆಗೂ ಮುಂದಿಟ್ಟ ೨೫ ಬೇಡಿಕೆಗಳ ಪೈಕಿ ಈಗ ೧೦ ಬೇಡಿಕೆಗಳನ್ನು ಮಾತ್ರ ಈಡೇರಿಸಲು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದರಿಂದ ವ್ಯಕ್ತವಾಗುವ ಸಂಗತಿ ಏನೆಂದರೆ ಉಳಿದ ೧೫ ಬೇಡಿಕೆಗಳನ್ನು ಈಡೇರಿಸಲಾಗಿದೆ ಎಂಬ ಸಂಗತಿಯನ್ನು ಸಂಘದವರು ಒಪ್ಪಿಕೊಂಡಿರುತ್ತಾರೆ.

ಉಳಿದ ೧೦ ಬೇಡಿಕೆಗಳು ಈ ಕೆಳಕಂಡಂತಿದೆ.

೧	ಕೆ.ಸಿ.ಎಸ್.ಆರ್. ಅನ್ವಯಿಸುವಿಕೆ	—	ಸರ್ಕಾರದ ಪರಿಶೀಲನೆಯಲ್ಲಿದೆ
೨	ಕುಟುಂಬ ಕಲ್ಯಾಣ ನಿಧಿಯನ್ನು ಹೆಚ್ಚಿಸರಿವುದು	—	ಸರ್ಕಾರದ ಪರಿಶೀಲನೆಯಲ್ಲಿದೆ
೩	ರಜಾ ನಿಗದೀಕರಣ ಸೌಲಭ್ಯ	—	ಸರ್ಕಾರದ ಪರಿಶೀಲನೆಯಲ್ಲಿದೆ
೪	ಹಬ್ಬದ ಮುಂಗಡ ಹೆಚ್ಚಿಸುವಿಕೆ	—	ಸರ್ಕಾರದ ಪರಿಶೀಲನೆಯಲ್ಲಿದೆ

೫	ಎರವಲು ಸೇವೆ ಅಧಿಕಾರಿಗಳನ್ನು ವಾಪಸ್ ಕಳಿಸುವುದು	—	ತಮ್ಮ ಮಾತೃ ಇಲಾಖೆಗಳಿಗೆ ಅಂಥವರನ್ನು ಹಿಂದಕ್ಕೆ ಕಳುಹಿಸಲು ಈಗಾಗಲೇ ತೀರ್ಮಾನ ಕೈಗೊಳ್ಳಲಾಗಿದೆ.
೬	ಪೌರಾಡಳಿತ ನಿರ್ದೇಶನಾಲಯದಲ್ಲಿ ಮುನಿಸಿಪಲ್ ನೌಕರರಿಗೆ ಕೆಲವು ಹುದ್ದೆಗಳನ್ನು ನೀಡಿವೆ.	—	ಸಕಾಲದಲ್ಲಿ ಕ್ರಮ ಕೈಗೊಳ್ಳಲಾಗುವುದು ಆದಾಗ್ಯೂ ಮುನಿಸಿಪಾಲ್ ಸೇವೆಗೆ ಸಂಬಂಧಪಟ್ಟ ಶ್ರೀ ಎಸ್. ಸೂರ್ಯನಾರಾಯಣರವರನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ನೇಮಿಸಲಾಗಿದೆ.
೭	ರಜಾ ಪ್ರವಾಸ ಸೌಲಭ್ಯ	—	ಕೆ. ಸಿ. ಎಸ್. ಆರ್. ನ್ನು ವಿಸ್ತರಿಸುವಾಗ ಈ ಸೌಲಭ್ಯವು ಒಳಗೊಳ್ಳುತ್ತದೆ.
೮	ತಾತ್ಕಾಲಿಕ ಪರಿಹಾರ	—	ಸರ್ಕಾರದ ಪರಿಶೀಲನೆಯಲ್ಲಿದೆ
೯	ವಾರದಲ್ಲಿ ೫ ದಿವಸಗಳು	—	ಈ ಬೇಡಿಕೆಯನ್ನು ಪರಿಶೀಲಿಸಲಾಗಿದೆ ಮತ್ತು ಸುತ್ತೋಲೆಯನ್ನು ಹೊರಡಿಸಲಾಗಿದೆ.
೧೦	ಆಕ್ಟ್ರಾಯ್ ಮುತಸದ್ದಿ, ಬಿಲ್ ಬಿಲ್ ಕಲೆಕ್ಟರ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ಸ್‌ಗಳ ವೇತನ ಶ್ರೇಣಿಯಲ್ಲಿನ ವ್ಯತ್ಯಾಸ	—	ಸರ್ಕಾರದ ಪರಿಶೀಲನೆಯಲ್ಲಿದೆ

ಮೇಲಿನ ಅಂಶಗಳಲ್ಲಿ ನೋಡಿದಾಗ ಒಂದೇ ಒಂದು ಬೇಡಿಕೆಯನ್ನು ಮಾತ್ರ ಪರಿಷ್ಕರಿಸಲಾಗಿದೆ ಮತ್ತು ಉಳಿದವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಪೌರ ಸೇವಾ ನೌಕರರಂಗಳು ಮುಂದಿಟ್ಟಿರುವ ಹಲವಾರು ಬೇಡಿಕೆಗಳ ಬಗ್ಗೆ ಸರ್ಕಾರವು ಅವರ ಸಹಾನುಭೂತಿಯನ್ನು ಹೊಂದಿದೆ. ಕಳೆದ ೧೦ ತಿಂಗಳಲ್ಲಿ ನಾನು ೩ ಸಭೆಗಳನ್ನು ಕರೆದು ಚರ್ಚಿಸಿದ್ದೇನೆ. ಇದ್ದರಿಂದ ಇವರ ಬೇಡಿಕೆಗಳನ್ನು ಶೀಘ್ರಗತಿಯಲ್ಲಿ ಮತ್ತು ಮೈತ್ರಿಯುತವಾಗಿ ಇತ್ಯರ್ಥಗೊಳಿಸಲು ಸರ್ಕಾರಕ್ಕೆ ತೀವ್ರ ಆಕಾಂಕ್ಷೆ ಇದೆ ಎಂಬುದನ್ನು ಇದು ತೋರಿಸುತ್ತದೆ. ಮುನಿಸಿಪಲ್‌ನ ನೌಕರರು ತಮ್ಮ ಮುಷ್ಕರವನ್ನು ತತಕ್ಷಣವೇ ನಿಲ್ಲಿಸಲು ಮತ್ತು ಪೌರರಿಗೆ ಆಗುವ ತೊಂದರೆಗಳನ್ನು ತಪ್ಪಿಸಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ (ಕೇಂದ್ರ) ಬಳ್ಳಾರಿಯ ಪದಾಧಿಕಾರಿಗಳೊಂದಿಗೆ ಉಳಿದ ಬೇಡಿಕೆಗಳ ಬಗ್ಗೆ ಶೀಘ್ರದಲ್ಲಿಯೇ ಚರ್ಚಿಸುತ್ತೇನೆ ಮತ್ತು ಸಹಾನುಭೂತಿಯಿಂದ ಸಮಸ್ಯೆಗಳನ್ನು ಬಗೆಹರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ. ೬ನೇ ತಾರೀಖು ಟೆಲೆಕ್ಸ್ ಮೆಸೇಜ್ ಕಳುಹಿಸಿದ್ದೇವೆ. ಅವರು ಮುಷ್ಕರ ಶುರು ಮಾಡಿದ್ದು ೫ನೇ ತಾರೀಖು ಎಂದು ಹೇಳಿದ್ದಾರೆ. ನನ್ನ ಆದೇಶದ ಮೇರೆಗೆ ಡೈರೆಕ್ಟರವರ ಹೆಸರಿನಲ್ಲಿ ಟೆಲೆಕ್ಸ್ ಮೆಸೇಜ್ ಹೋಗಿದೆ.

"The Hon. Miniter for Urban Development, Law and Parliamentary Minister has also stated on the floor of the House that the demands of the municipal employees would be considered expeditiously. Out of the 25 demands which had been pending for 15 to 20 years, already 15 demands have been fulfilled leaving a balance of 10 demands one of which is the application of KCSR. Even this demand is under

the active consideration. Immediately after the present sessions of the both Houses of Legislature are over the Minister has agreed to convene the meeting of the President and other office bearers. In view of these facts Government desires that the office bearers at the local level may be invited for the meeting under your Chairmanship."

ಈ ರೀತಿಯಾಗಿ ಕಳುಹಿಸಿದ್ದೇವೆ. ಇದು ಆದಮೇಲೂ ಮುಷ್ಕರ ನಡೆಸುತ್ತಿದ್ದಾರೆ. ಕೇವಲ ೧೦ ತಿಂಗಳುಗಳಲ್ಲಿ ೧೫–೨೦ ಇಷ್ಟು ಎಲ್ಲಾ ಬೇಡಿಕೆಗಳನ್ನು ಪೂರ್ಣವಾಗಿ ಅಲ್ಲದಿದ್ದರೂ ಅವರಿಗೆ ಅನುಕೂಲ ವಾಗುವ ರೀತಿಯಲ್ಲಿ ಇತ್ಯರ್ಥ ಮಾಡಿದ್ದೇವೆ. ಅತ್ಯಂತ ಮುಖ್ಯವಾದ ಬೇಡಿಕೆ ಏನೆಂದರೆ ಮುನಿಸಿ ಪಲ್ ನೌಕರರಿಗೆ ಕೆ. ಸಿ. ಎಸ್. ಆರ್. ಅಪ್ಲೈ ಮಾಡಬೇಕೆಂದು ಕೇಳುತ್ತಿದ್ದಾರೆ. ಅದನ್ನು ಅಪ್ಲೈ ಮಾಡಿದರೆ ಅವರ ಮುಕ್ಕಾಲು ಬೇಡಿಕೆಗಳನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ. ಕೆ. ಸಿ. ಎಸ್. ಆರ್. ಅನ್ನು ಒಪ್ಪಿಕೊಳ್ಳುವ ನೇರವಾದ ತೀರ್ಮಾನವನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಬೇರೆ ಇಲಾಖೆ ಯವರ ಕನ್‌ಸೆಂಟ್ ತೆಗೆದುಕೊಂಡು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ನನ್ನ ಇಲಾಖೆಯು ಆಕ್ಷೇಪಣೆಗಳನ್ನು ಪರಿಗಣಿಸಲು ಸಭೆ ಮುಗಿದ ನಂತರ ನಮ್ಮ ಇಲಾಖೆಯ ಅಧಿಕಾರಿಗಳ ಮತ್ತು ಎಚ್.ಯು.ಡಿ. ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ನನ್ನ ಹತ್ತು ತಿಂಗಳ ಕಾಲದಲ್ಲಿ ಯಾವರೀತಿ ಅನುಕೂಲ ಮಾಡಬೇಕೆನ್ನುವುದನ್ನು ಪರಿಶೀಲನೆ ಮಾಡಿ ಅನುಕೂಲವಾದಂತಹ ನಿರ್ಣಯ ಗಳನ್ನು ತೆಗೆದುಕೊಂಡಿದ್ದೇನೆ. ಉಳಿದಿರತಕ್ಕ ಬೇಡಿಕೆಗಳನ್ನು ನಾನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ೮–೯ ತಿಂಗಳುಗಳಲ್ಲಿ ನಾನು ಅವರನ್ನು ಮೂರು ಸಲ ಭೇಟಿ ಮಾಡಿದ್ದೇನೆ. ಪೌರರಿಗೆ ತೊಂದರೆಯಾಗಬಾರದು, ೨೩–೨೪ ನೇ ತಾರೀಖಿಗೆ ಬನ್ನಿ ಎಂದು ಹೇಳಿದ್ದೇನೆ. ಎರಡೂ ಸಭೆಗಳು ನಡೆಯುತ್ತಿರುವುದರಿಂದ ಸಮಯ ಇಲ್ಲ ದಿದ್ದರೂ ಸಹ ಬನ್ನಿ ಎಂದು ಹೇಳಿದ್ದೇನೆ.

ಇದು ಆದ ಮೇಲೆ ಅವರು ಮುಷ್ಕರವನ್ನು ಮುಂದುವರೆಸಿದ್ದಾರೆ. ಶಾಂತಿಯುತವಾಗಿ ಮುಷ್ಕರ ವನ್ನು ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಕೆಲವು ಕಡೆ ಎಲ್ಲ ಕಡೆ ಅಲ್ಲ, ಒಂದೆರಡು ಕಡೆ ಮುಷ್ಕರವನ್ನು ನಡೆಸತಕ್ಕಂಥ ಜನರು ಊರಿನ ಗಲೀಜನ್ನು ತಂದು ರಸ್ತೆಯಲ್ಲಿ ಹಾಕತಕ್ಕಂತಹ ಕ್ರಮವನ್ನು ತೆಗೆದುಕೊಂಡಿದ್ದಾರೆ, ಸತ್ತ ಹಂದಿಯನ್ನು ರಸ್ತೆಗೆ ಹಾಕುವಂಥ ಕೆಲಸವನ್ನು ಮಾಡಿದ್ದಾರೆ. ಸತ್ತ ನಾಯಿಯನ್ನು ರಸ್ತೆಗೆ ತಂದು ಹಾಕುವಂಥ ಕೆಲಸವನ್ನು ಮಾಡಿದ್ದಾರೆ, ಅಲ್ಲಿನ ಜನಗಳಿಗೆ ಅಸಹ್ಯ ಬರತಕ್ಕಂಥ ರೀತಿಯಲ್ಲಿ ಈ ಒಂದು ಕೆಲಸವನ್ನು ಒಂದೆರಡು ಕಡೆ ಮಾಡಿದ್ದಾರೆ. ಕೆಲವು ಕಡೆ ನೀರು ಸರಬರಾಜನ್ನು ತಡೆಯುವುದಕ್ಕೂ ಪ್ರಯತ್ನ ಮಾಡಿದ್ದಾರೆ ನಾನು ಅವರಲ್ಲಿ ಮನವಿ ಮಾಡಿಕೊಳ್ಳುವು ದೇನೆಂದರೆ ನಗರ ಪ್ರದೇಶದ ಜನರ ವಿರುದ್ಧವಾಗಿ ಹೋಗಬೇಡಿ. ನಿಮಗೆ ಅನ್ನ ಕೊಡತಕ್ಕಂತಹ ಜನರು ಅವರು, ಅವರ ವಿರುದ್ಧವಾಗಿ ಹೋಗಬೇಡಿ ನಿಮ್ಮ ಎಲ್ಲ ಬೇಡಿಕೆಗಳನ್ನು ನಾನು ಈಗಾಗಲೇ ಒಪ್ಪಿಕೊಂಡ ಮೇಲೆ ಉಳಿದಿರತಕ್ಕ ಬೇಡಿಕೆಗೆ ತೊಂದರೆ ಏನೂ ಬರುವುದಿಲ್ಲ, ಬೇರೆ ಇಲಾಖೆಗಳ ಜೊತೆ ಚರ್ಚೆ ಮಾಡಿ, ಅವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನನ್ನ ಕಡೆಯಿಂದ ಪ್ರಯತ್ನ ಮಾಡುತ್ತೇನೆಂದು ನಾನು ಈಗಾಗಲೆ ಹೇಳಿದ್ದೇನೆ. ಆದ್ದರಿಂದ ಇಂತಹ ಸಮಯ ದಲ್ಲಿ ಅವರ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕು, ಬೇರೆಯವರಿಗೆ ತೊಂದರೆಕೊಡಕೂಡದು. ತಾವು ಮುಷ್ಕರವನ್ನು ಮಾಡುವುದಾದರೂ ಕೂಡ ಅದರಿಂದ ನಾಗರೀಕರಿಗೆ ತೊಂದರೆಯಾಗಬಾರದು ಎಂದು ಹೇಳಿದ್ದೇವೆ ಆದುದರಿಂದ ಅವರು ದಯಮಾಡಿ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಪ್ರಯೋಜನ ಏನು?

ಶ್ರೀ ಎ. ಲಕ್ಷ್ಮೀಸಾಗರ್.—ಯಾರು ಪ್ರಶ್ನೆ ಕೇಳಿದ್ದಾರೆ ಅವರಿಗೆ ಹೇಳುತ್ತಿದ್ದೇನೆ. ಇನ್ನು ೧೦ ದಿವಸಗಳು ಮೀರಿದರೆ ಏನೂ ಆಗುವುದಿಲ್ಲ. ನನ್ನಲ್ಲಿ ನಂಬಿಕೆ ಇಡಬೇಕು. ಅವರ ನ್ಯಾಯಯುತವಾದ ಬೇಡಿಕೆಗಳನ್ನು ನಾನು ಈಗಾಗಲೇ ಈಡೇರಿಸಿದ್ದು, ಉಳಿದ ಕೆಲವೊಂದು ಬೇಡಿಕೆಯನ್ನೂ ಸಹ ಸಹಾನು ಭೂತಿಯಿಂದ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ತಿಂಗಳ ೨೩–೨೪ನೇ ತಾರೀಖು ಬರಲಿ ಕುಳಿತು ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸೋಣ. ಅದನ್ನು ಬಿಟ್ಟು ಅವರು ಜನರಿಗೆ ತೊಂದರೆ

ಯನ್ನು ಕೊಟ್ಟು ಕಸವನ್ನು ತಂದು ಹಾಕುವುದು ಬೇರೆ ರೀತಿಯಲ್ಲಿ ಊರಿನ ಜನರಿಗೆ ತೊಂದರೆ ಮಾಡತಕ್ಕಂತಹವರ ಮೇಲೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನಾನು ಎಚ್ಚರಿಕೆ ಎಂಬ ಧಾಟಿಯಲ್ಲಿ ಹೇಳುತ್ತಿಲ್ಲ. ಅವನ್ನೆಲ್ಲಾ ಅವರು ಮಾಡುವುದಕ್ಕೆ ಹೋಗಬಾರದು, ಎನ್ನತಕ್ಕಂತ ಹದ್ದಕ್ಕೆ ಹೇಳುತ್ತಿದ್ದೇನೆ. ಈ ಪ್ರಶ್ನೆಯನ್ನು ತಂದಿರತಕ್ಕಂತಹ ಮಾನ್ಯ ಸದಸ್ಯರೂ ಕೂಡ ತಮ್ಮ ಪ್ರಭಾವವನ್ನು, ತಮ್ಮ ಶಕ್ತಿಯನ್ನು ತಮ್ಮ ಮನಸ್ಸಿನ ಚೈತನ್ಯ ಸ್ವರೂಪವನ್ನು ಅವರ ಮೇಲೆ ಬೀರಿ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳುವಂತೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಈ ೧೦ ತಿಂಗಳಲ್ಲಿ ಅವರಿಗೆ ಪ್ರಮೋಷನ್ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮೊದಲು ಪ್ರಮೋಷನ್ ಇರಲಿಲ್ಲ. ಬೇರೆ ಬೇರೆ ಇಲಾಖೆಗಳವರೆಲ್ಲಾ ಪುರಸಭೆಗಳಲ್ಲಿ ಬಂದು ಸೇರಿಸಿಕೊಂಡು, ಬಿ.ಡಿ.ಎ.ಯಿಂದ ಬಂದಿದ್ದಾರೆ. ಕಂದಾಯ ಇಲಾಖೆಯಿಂದ ಬಂದಿದ್ದಾರೆ. ಫಿಟ್ಟರ್ ಒಬ್ಬ ಚೀಫ್ ಆಫೀಸರ್ ಆಗಿಬಿಟ್ಟಿದ್ದಾನೆ ವರ್ಗ ಮಾಡಿದರೆ ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬರುತ್ತಾರೆ. ಯಾರಾರೋ ಬರುವುದು ದುಡ್ಡು ತೆಗೆದುಕೊಂಡು ಹೊರಟು ಹೋಗಿರುತ್ತಾರೆ. ಹೇಳುವವರೂ ಇಲ್ಲ ಕೇಳುವವರೂ ಇಲ್ಲ. ಬೇರೆ ಬೇರೆ ಇಲಾಖೆಯಿಂದ ಯಾರು ಬಂದಿದ್ದಾರೆ ಅವರನ್ನು ಅವರವರ ಇಲಾಖೆಗೆ ಕಳುಹಿಸುವುದಕ್ಕೆ ಏರ್ಪಾಡು ಮಾಡಿದ್ದೇನೆ. ಅವರಿಗೆ ತರಬೇತಿಯನ್ನೂ ಕೂಡ ಕೊಟ್ಟಿದ್ದೇವೆ. ಪುರಸಭೆಗಳ ತೆರಿಗೆಗಳ ವಸೂಲಾತಿ ಶೇಕಡ ೫೦ರಷ್ಟು ೭ರಷ್ಟು ವಸೂಲಾಗುತ್ತಿತ್ತು. ಒಟ್ಟು ೫ ಕೋಟಿಗಿಂತ ಹೆಚ್ಚು ತೆರಿಗೆ ವಸೂಲಾಗುತ್ತಲೇ ಇರಲಿಲ್ಲ ಇಲ್ಲಿಯವರೆವಿಗೆ. ಇಲಾಖೆಗೆ ಬರಬೇಕಾಗಿರುವಂತಹ ತೆರಿಗೆ ೫೦ ಕೋಟಿ ರೂಪಾಯಿಗಳು. ಇಲ್ಲಿಯವರೆವಿಗೆ ಮೊಟ್ಟಮೊದಲ ಬಾರಿಗೆ ಈ ವರ್ಷದಲ್ಲಿ ಫೆಬ್ರುವರಿ ತಿಂಗಳವರೆಗೆ ಸುಮಾರು ಹದಿನೆಂಟೂವರೆ ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಅವರಿಗೆ ಬಂದಿರುವ ಹಣ ಅದು. ಸರ್ಕಾರಕ್ಕೆ ಬಂದಂತಹ ಹಣ ಅಲ್ಲ ಅದು. ಶೇಕಡ ೫೫ರಷ್ಟು ತೆರಿಗೆ ವಸೂಲಾಗಿದೆ. ಆದರಿಂದ ಅವರಿಗೇ ಅನುಕೂಲವಾಗುತ್ತದೆ, ಪೆನ್‌ಷನ್ ಕೊಡುತ್ತಿರಲಿಲ್ಲ. ಪೆನ್‌ಷನ್ ಕಾಂಟ್ರಿಬ್ಯೂಷನ್ ಕೊಟ್ಟರೆ ತಾನೇ ಅವರಿಗೆ ಪೆನ್‌ಷನ್ ಬರುವುದು ? ಅದನ್ನೂ ಕೂಡ ಸಕ್ರಮಗೊಳಿಸಿದ್ದೇನೆ. ನಿರ್ದೇಶನಾಲಯದಲ್ಲಿ ಅವರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಹೇಳಿದರು. ಅದರಂತೆ ಅಲ್ಲಿ ಒಬ್ಬರಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದೇನೆ. ಇನ್ನೂ ಹೆಚ್ಚು ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವರ ಬೇಡಿಕೆಯ ಬಗ್ಗೆ ನನ್ನ ಸಹಾನುಭೂತಿ ಇದೆ. ಆದರ ವಿರುದ್ಧ ಅವರು ಹೋಗುವುದು ಬೇಡ ಎನ್ನತಕ್ಕಂತಹ ಮಾತನ್ನು ತಮ್ಮ ಮೂಲಕ ಅವರಿಗೆ ತಿಳಿಸುತ್ತಿದ್ದೇನೆ. ಅವರು ದಯಮಾಡಿ ತಮ್ಮ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಚರ್ಚೆಗೆ ಬರಲಿ. ಕುಳಿತುಕೊಂಡು ಪರಸ್ಪರ ಚರ್ಚೆ ಮಾಡಿ ಇತ್ಯರ್ಥಪಡಿಸಿಕೊಳ್ಳೋಣ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—೨೧೮ ಪುರಸಭೆಗಳು ಹಾಗೂ ನಗರ ಪ್ರದೇಶದಲ್ಲಿ ಕಳೆದ ೭ ದಿವಸಗಳಿಂದಲೂ ಮುಷ್ಕರವನ್ನು ಅವರು ಮಾಡುತ್ತಿದ್ದಾರೆ. ಅವರ ಮೂಲ ಬೇಡಿಕೆ ಏನೆಂದರೆ, ಪೌರ ಕಾರ್ಮಿಕರಿಗೂ, ಸರ್ಕಾರಿ ನೌಕರರಿಗೂ ಇರತಕ್ಕಂತಹ ತಾರತಮ್ಯವನ್ನು ತಪ್ಪಿಸಿ ನಮಗೂ ಕೆ.ಸಿ.ಎಸ್.ಆರ್. ನಿಯಮವನ್ನು ಅನ್ವಯ ಮಾಡಿ ಎಂಬುದಾಗಿ ಕೇಳುತ್ತಿದ್ದಾರೆ, ಇವರಲ್ಲಿ ಶೇಕಡ ೮೫ರಷ್ಟು ಜನ ಹರಿಜನ-ಗಿರಿಜನ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇದುವರೆವಿಗೂ ಸರ್ಕಾರಿ ನೌಕರರಿಗೆ ಸಾಕಷ್ಟು ಸಹಾನುಭೂತಿಯನ್ನು ತೋರಿಸಿದ್ದೀರಿ. ಕೆಲವು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ಯಾವ ಮನುಷ್ಯ ಊರಿನ ರಸ್ತೆಯನ್ನು ಪರಿಸರವನ್ನು ಚೊಕ್ಕಟವಾಗಿಡುವಂತಹ ಕೆಲಸ ಮಾಡುತ್ತಾನೋ ಅಂಥವನಿಗೆ ನೀವು ಅನುಕೂಲ ಮಾಡಿಕೊಡಬೇಕು. ಬೇರೆ ಯಾರೂ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅವರೇನಾದರೂ ಹಟ ಮಾಡಿದ್ದೇ ಆದರೆ ನಿಮಗೆ ಬಹಳ ತೊಂದರೆ ಬರುತ್ತದೆ. ಅವರು ಹೊಸದಾದ ಬೇಡಿಕೆಯನ್ನೇನೂ ಕೇಳಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕೆ.ಸಿ.ಎಸ್.ಆರ್. ಅನ್ವಯವಾಗಿರತಕ್ಕಂತಹ ಸರ್ಕಾರಿ ನೌಕರರಿಗೆ ಹಬ್ಬದ ಮುಂಗಡವಾಗಿ ೫೦೦ ರೂಗಳನ್ನು ಕೊಡುತ್ತಾರೆ. ಆದರೆ ಪುರಸಭಾ ನೌಕರರಿಗೆ ೧೦೦ ರೂಗಳನ್ನು ಕೊಡುತ್ತಿದ್ದಾರೆ. ವಾಷಿಂಗ್ ಅಲೋಯನ್ಸ್ ಎಂಬುದಾಗಿ ನಾಲ್ಕನೆ ದರ್ಜೆ ಸರ್ಕಾರಿ ನೌಕರರಿಗೆ ೧೦ ರೂ. ಕೊಡುತ್ತಿದ್ದಾರೆ. ಇವರಿಗೆ ಕೇವಲ ೭ ರೂಗಳನ್ನು ಕೊಡುತ್ತಿದ್ದಾರೆ. ಇಲಾಖಾ ಪರೀಕ್ಷೆಯನ್ನು ಪಾಸ್ ಮಾಡಿದರೆ ಸರ್ಕಾರಿ ನೌಕರರಿಗೆ ಪ್ರಮೋಷನ್ ಅವಕಾಶ ಇದೆ. ಆದರೆ ಇವರಿಗೆ ಆ ಒಂದು ಅವಕಾಶ ಇಲ್ಲ. ಸರ್ಕಾರಿ

ನೌಕರರು ಕೆಲಸ ಮಾಡುವಾಗ ಸತ್ತರೆ, ಅವರಿಗೆ ೨೦,೦೦೦ ರೂಗಳ ಪರಿಹಾರ ಸಿಕ್ಕುತ್ತದೆ. ಅದೇ ರೀತಿ ಪೌರ ಕಾರ್ಮಿಕರು ಸೇವೆಯಲ್ಲಿದ್ದಾಗ ಸತ್ತರೆ ಸಿಕ್ಕುವಂತಹದ್ದು ಕೇವಲ ೧೧,೦೦೦ ರೂಗಳು ಸರ್ಕಾರಿ ನೌಕರರಿಗೆ ಎಲ್.ಟಿ.ಸಿ. ಸೌಲಭ್ಯ ಇದೆ. ಆದರೆ ಇವರಿಗೆ ಆ ಸೌಲಭ್ಯ ಇಲ್ಲ. ಈ ರೀತಿಯ ನ್ಯೂನತೆ ಪಟ್ಟಿಗಳು ಬಹಳ ಇವೆ. ಅದಕ್ಕಾಗಿಯೇ ಅವರು ಕೆ.ಸಿ.ಎಸ್.ಆರ್. ಅನ್ನು ಅನ್ವಯ ಮಾಡಿ ಎಂಬುದಾಗಿ ಕೇಳುತ್ತಿರುವುದು. ಸರ್ಕಾರಿ ನೌಕರರು ಕರ್ನಾಟಕ ರಾಜ್ಯದಲ್ಲಿ ವಿಧಾನಸೌಧದಲ್ಲಿ ಹಾಗೂ ಹೊರಗಡೆ ಕೆಲಸ ಮಾಡುತ್ತಿದ್ದಾರೆ. ಅದಕ್ಕಿಂತ ಹೆಚ್ಚಿನ ಶ್ರಮ ವಹಿಸಿ ಕೆಲಸ ಮಾಡುವಂತಹ ಈ ಜನಗಳಿಗೆ ಆ ಒಂದು ಸೌಲಭ್ಯಗಳನ್ನು ಕೊಡದಿದ್ದರೆ, ಅದೊಂದು ಮಹಾ ಪಾಪವಾಗುತ್ತದೆ. ಅವರು ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ. ಹಿಂದೆ ೮-೬-೮೪ರಂದು ಸತ್ಯಾಗ್ರಹ ಮಾಡುವುದಕ್ಕೆ ಹೊರಟಾಗ ೨ ತಿಂಗಳಲ್ಲಿ ಎಲ್ಲ ಬೇಡಿಕೆಗಳನ್ನು ಬಗೆಹರಿಸುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟರು. ಆದರೆ ಇದುವರೆವಿಗೂ ಏನೂ ಆಗಲಿಲ್ಲ. ತಾವು ದಯಮಾಡಿ ಅವರ ಸಂಯಮವನ್ನು ಪರೀಕ್ಷೆ ಮಾಡಬೇಡಿ. ಹರಿಜನ-ಗಿರಿಜನ ನೌಕರರಿಗೆ ಅನುಕೂಲವಾಗತಕ್ಕಂತಹ ವಿಚಾರದಲ್ಲಿ ಸರ್ಕಾರ ಬಲಿಯಾಗುವುದು ಬೇಡ. ಅವರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಅವರ ಬಗ್ಗೆ ತಮಗೆ ಅನುಕಂಪ ಇರಲಿ. ದಯಮಾಡಿ ತಕ್ಷಣವೇ ಕೆ.ಸಿ.ಎಸ್.ಆರ್ ರೂಲ್ಸನ್ನು ಅವರಿಗೂ ಅನ್ವಯ ಮಾಡಬೇಕು, ೪-೬ ದಿವಸಗಳಲ್ಲಿ ಇವರು ಕೆಲಸ ಮಾಡದೆ ಮುಷ್ಕರವನ್ನು ಮಾಡುತ್ತಿರುವುದರಿಂದ ತೊಂದರೆಯಾಗಿದೆ, ಅವರ ಜೊತೆ ಎಲ್ಲರೂ ಸೇರಿದರೆ ಇನ್ನೂ ಬಹಳ ತೊಂದರೆಯಾಗುತ್ತದೆ. ಇವರು ಮಾಡುವಂತಹ ಕೆಲಸವನ್ನು ಬೇರೆ ಯಾರೂ ಮಾಡುವುದಕ್ಕಾಗುವುದಿಲ್ಲ ಅಂತಹ ಒಂದು ಕೆಲಸವನ್ನು ಇವರು ಮಾಡುತ್ತಿದ್ದಾರೆ. ಮಾನವೀಯತೆ ದೃಷ್ಟಿಯಿಂದ ತಕ್ಷಣವೇ ಅವರ ಬೇಡಿಕೆಯನ್ನು ಈಡೇರಿಸಿಕೊಂಡು ನಾಳೆಯಿಂದ ಕೆಲಸಕ್ಕೆ ಬರುವಂತೆ ವ್ಯವಸ್ಥೆ ಮಾಡಿಕೊಟ್ಟು, ಅವ್ಯವಸ್ಥೆಯಾಗುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

೭-೦೦ ಪಿ. ಎಂ.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದ ವಾದ ಏನಿದೆ, ಅದು ಬಹಳ ಬುದ್ಧಿವಂತಿಕೆಯಿಂದ ಕೂಡಿದ ವಾದ ನಂಬಿಕೊಳ್ಳತಕ್ಕಂಥಾದ್ದು. ತಾವು ಬಂದು ಹತ್ತು ತಿಂಗಳಾಯಿತು, ಈ ಅವಧಿಯಲ್ಲಿ ಏನೇನು ಮಾಡಿದ್ದೇನೆ ಎಂದು ಅವರು ಹೇಳಿದರು. ಆದರೆ ಈ ಒಂದು ಬೇಡಿಕೆ ಏನಿದೆ, ಹತ್ತು ತಿಂಗಳಿಗಿಂತ ಇರುವಂತಾದ್ದು. ಶ್ರೀಮಾನ್ ಚಂದ್ರಶೇಖರ್ ಅವರ ಕಾಲದಲ್ಲೇ ಇದ್ದದ್ದು. ಕೆ. ಸಿ. ಎಸ್. ಆರ್. ನ್ನು ತಮಗೂ ಕೂಡ ಅನ್ವಯಿಸಬೇಕೆಂದು ಅವರು ಕೇಳುತ್ತಿದ್ದಾರೆ. ಇದನ್ನು ಒಪ್ಪಿಕೊಂಡರೆ ಸರ್ಕಾರಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಈಗ ಕರ್ನಾಟಕ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಯಾವಾಗ ಡಿ. ಎ. ಕೊಡುತ್ತಾರೆ, ತಕ್ಷಣ ಪುರಸಭೆಗಳ ಅಧಿಕಾರಿಗಳಿಗೂ, ನೌಕರರಿಗೂ ಕೊಡಬೇಕೆಂದು ತೀರ್ಮಾನವಾಗಿದೆ ಇವರಿಗೆ ಏನು ಭಯ ಎಂದರೆ, ಮುನಿಸಿಪಾಲಿಟಿಯವರಲ್ಲಿ ದುಡ್ಡು ಇರುತ್ತದೋ, ಇಲ್ಲವೋ. ಒಪ್ಪಿಕೊಂಡರೆ ಕಮಿಟ್‌ಮೆಂಟ್ ಆಗುತ್ತದೆ. ಎನ್ನುವ ಭಯ ಇವರಿಗೆ ಇರುವ ಹಾಗೆ ಇದೆ. ನಾನು ಹೇಳುವುದೇನೆಂದರೆ, ಇವರು ಕೇಳುತ್ತಿರುವ ಬೇಡಿಕೆ ನ್ಯಾಯಸಮ್ಮತವಾದದ್ದೇ ಆಗಿದೆ. ಇದು ಪರಿಶೀಲನೆಯಲ್ಲಿದೆ, ಪರಿಶೀಲಿಸಿ ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳುತ್ತೀರಿ ಪಾಪ, ಅವರಿಗೆ ನಿಜವಾಗಿ ಕೂಡ ಅನ್ಯಾಯವಾಗಿದೆ. ಅವರು ಮುಷ್ಕರ ಪ್ರಾರಂಭ ಮಾಡಿ ಐದು ದಿವಸ ಆಗಿದೆ. ಇವತ್ತು ದಿವಸಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ತಾವು ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕು, ಇಲ್ಲದಿದ್ದರೆ ಅವರ ಸ್ಟ್ರೈಕ್ ಮುಂದುವರೆಯುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಚಿವರಾದ ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ ಈ ಸಮಸ್ಯೆಯನ್ನು ತೆರೆದ ಮನಸ್ಸಿನಿಂದ ಬಗೆಹರಿಸಬೇಕು. ತಮಗೆ ಅವರ ಬಗ್ಗೆ ಅನುಕಂಪ ಇದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಅನುಕಂಪ ಇದ್ದ ಮಾತ್ರಕ್ಕೆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಆಗುವುದಿಲ್ಲ. ಪ್ರಾಮಾಣಿಕವಾಗಿ ನಿಷ್ಠೆಯಿಂದ ಕೆಲಸ ಮಾಡತಕ್ಕಂಥ ಈ ನೌಕರರು ತಮ್ಮ ಕೆಲಸಕ್ಕೆ ಪ್ರತಿಫಲ ಕೇಳಿದರೆ ಜೈಲಿಗೆ ಹಾಕುತ್ತೇವೆ ಎಂದು ಬೆದರಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಜೈಲಿಗೆ ಹಾಕುತ್ತೇನೆ ಎಂದು ಹೇಳಿದ್ದೇನಾ ? ಸುಮ್ಮನೆ ನಾನು ಹೇಳದೇ ಇದ್ದುದನ್ನು ಮಾನ್ಯ ಸದಸ್ಯರು ಹೇಳುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ನಾನಂತೂ ಅವರ ಬೆನ್ನು ತಟ್ಟುತ್ತೇನೆ. ನಿಮ್ಮ ಚಳುವಳಿಯನ್ನು ಮುಂದುವರಿಸಿ ಎಂದು. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುವುದೇನೆಂದರೆ, ಪರಿಶೀಲನೆ ಮಾಡುತ್ತೇವೆ, ನೋಡುತ್ತೇವೆ ಎಂದು ಹೇಳುವುದು ಬಿಟ್ಟು ಇನ್ನು ಎರಡು–ಮೂರು ದಿವಸಗಳಲ್ಲೇ ತೀರ್ಮಾನ ಮಾಡಿ ಇದರ ಬಗ್ಗೆ ಕೂಡಲೇ ಒಂದು ನಿರ್ಣಯಕ್ಕೆ ಬರಲೇಬೇಕಾಗುತ್ತದೆ. ಇಲ್ಲದೇ ಹೋದರೆ ಈ ಸ್ಟ್ರೈಕ್‌ನ್ನು ನಿಲ್ಲಿಸತಕ್ಕದ್ದು ಅಥವಾ ಮುಂದುವರಿಸತಕ್ಕದ್ದು ಅವರಿಗೇ ಬಿಟ್ಟಿರತಕ್ಕದ್ದು. ನನಗಂತೂ ಬಹಳ ಸಂತೋಷ. ಅವರು ಮೊದಲನೇ ಸಲ ರಾಜ್ಯದ್ಯಾಂತ ಮುಷ್ಕರವನ್ನು ಮಾಡುತ್ತಿದ್ದಾರೆ. ನಾನೂ ಹಿಂದೆಯೇ ಇದನ್ನು ಮಾಡಿಸಬೇಕು ಅಂತ ಇದ್ದೆ. ಈಗ ಅವರೇ ಮಾಡಿದ್ದಾರೆ.

ಅಧ್ಯಕ್ಷರು.—ಶ್ರೀ ಬಸವಲಿಂಗಪ್ಪನವರೇ, ಹೇಳಬೇಕಾದದ್ದನ್ನು ಬೇಗ ಹೇಳಿಬಿಡಿ. ನೀವೇನೋ ಸಾಯಂಕಾಲ ಸಿದ್ಧರಾಗಿಯೇ ಬಂದುಬಿಡುತ್ತೀರಿ. ಇಲ್ಲಿ ಮುಂಜಾನೆಯಿಂದ ಕುಳಿತುಕೊಂಡಿರುವವರು ಏನು ಮಾಡಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಹಿಂದೆ ಈ ಪೌರಕಾರ್ಮಿಕರಿಗೋಸ್ಕರ ಒಂದು ಸಮಿತಿಯನ್ನು ಮಾಡಲಾಗಿತ್ತು.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಸಾಕು.

ಶ್ರೀ ಬಿ. ಬಸವಲಿಂಗಪ್ಪ.—ಅದರ ಶಿಫಾರಸ್ಸು ಸರ್ಕಾರದ ಮುಂದಿದೆ. ಅದನ್ನು ಜಾರಿಗೆ ಕೊಡುವಷ್ಟರಲ್ಲಿ ನಮ್ಮ ಸರ್ಕಾರ ಹೋಯಿತು. ನಾನು ಕೂಡ ಮಂತ್ರಿಪದವಿಯಿಂದ ನಿರ್ಗಮಿಸಬೇಕಾಯಿತು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಿಯಮ ೩೩೪ರ ಪ್ರಕಾರ ನಾನು ಕಳಿಸಿ ಕೊಟ್ಟಿದ್ದೆ. ಅದರ ಪ್ರಕಾರ ಕೇಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ. ಇಲ್ಲಿ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಸಾಕಷ್ಟು ದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಎಲ್ಲಾ ಬೇಡಿಕೆಗಳನ್ನೂ ಈಡೇರಿಸಿದ್ದು ಇದು ಒಂದು ಮಾತ್ರ ಉಳಿದಿದೆ ಎಂದು ಹೇಳಿದ್ದಾರೆ. ಈ ಬೇಡಿಕೆಯೇ ಬಹಳ ಮುಖ್ಯವಾದದ್ದು. ಇದೇ ಅತ್ಯಂತ ಪ್ರಮುಖವಾದ ಬೇಡಿಕೆ ಕೆ. ಸಿ. ಎಸ್. ಆರ್. ಅನ್ನು ಪುರಸಭೆಯ ನೌಕರರಿಗೂ ಅನ್ವಯಿಸಬೇಕು ಎನ್ನುವುದು ಅವರ ಬಹು ದಿನಗಳ ಬೇಡಿಕೆ. ಇದನ್ನು ಅವರಿಗೂ ವಿಸ್ತರಿಸುವುದಕ್ಕೆ ತೊಂದರೆ ಏನಿದೆ ಎಂದು ಹೇಳುವುದು ಬಿಟ್ಟು ಬಾಕಿ ಎಲ್ಲಾ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ಬಾಕಿ ಇಲಾಖೆಗಳ ಜೊತೆಗೆ ಸಮಾಲೋಚನೆ ಮಾಡಬೇಕಾದ ತಾಂತ್ರಿಕ ಅಡಚಣೆ ಏನಿದೆ ? ತಾಂತ್ರಿಕವಾದಂಥ ಕೆಲವು ಅಡಚಣೆ ಇದ್ದರೂ ಕೂಡ ಒಂದು ನಿಶ್ಚಿತ ಅವಧಿಯಲ್ಲಿ ಇದನ್ನು ಬಗೆಹರಿಸಬಹುದು. ಈಗ ಏನಾಗಿದೆ ಎಂದರೆ, ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಈ ಮುಷ್ಕರವನ್ನು ಮುಂದುವರೆಸಬೇಕು ಎನ್ನುವ ಮಾತನ್ನು ಹೇಳಿದರು. ಬಹುಶಃ ಅವರ ಮೇಲಿನ ಅನುಕಂಪದಿಂದ ಈ ಮಾತನ್ನು ಶ್ರೀ ಬಸವಲಿಂಗಪ್ಪನವರು ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ, ನಿಜವಾಗಿಯೂ ಈ ಚಳುವಳಿಯನ್ನು ಪ್ರೋತ್ಸಾಹಿಸಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂಬುದು ಅವರ ಇಚ್ಛೆ ಇರಲಾರದು.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಅಭಿಪ್ರಾಯವನ್ನು ನೀವು ವ್ಯಾಖ್ಯಾನ ಮಾಡಬೇಡಿ. ಅವರ ಬೇಡಿಕೆ ಶತಮಾನದ ಬೇಡಿಕೆ. ಅದನ್ನು ಪರಿಹಾರ ಮಾಡುವ ಮನಸ್ಸು ಮಾಡದೇ ಹೋದರೆ ಅವರು ಅದನ್ನು ಮುಂದುವರೆಸುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—೧೯೮೪ನೇ ಇಸವಿಯಲ್ಲೇ ಅವರು ಚಳುವಳಿ ಮಾಡುತ್ತೇವೆ ಎಂದು ಹೇಳಿದಾಗ, ಆಗ ಇದ್ದಂಥ ಸಚಿವರು ಮತ್ತು ಸರ್ಕಾರ ಎರಡು ತಿಂಗಳ ಅವಧಿಯಲ್ಲಿ ಎಲ್ಲವನ್ನೂ ಪರಿಶೀಲಿಸಿ ಬಗೆಹರಿಸುತ್ತೇವೆ ಎಂದು ವಾಗ್ದಾನ ನೀಡಿದರು. ಅದರ ಪ್ರಕಾರ ಅವರು ತಮ್ಮ ಚಳುವಳಿಯನ್ನು ಮಾಡಲಿಲ್ಲ ಆದರೆ ಇವತ್ತು ಅವರಿಗೆ ಯಾರು ಹೇಳಿದರೂ ಕೂಡ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳದಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ವಿಧಾನಸಭೆ ನಡೆಯುವಾಗಲೇ ತಮ್ಮ ಬೇಡಿಕೆಯನ್ನು ಈಡೇರಿಸಬೇಕು, ಇಲ್ಲದಿದ್ದರೆ ಸರ್ಕಾರ ಮತ್ತೆ ಇದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ ಎನ್ನುವ ಅಪನಂಬಿಕೆ ಅವರಿಗೆ ಬಂದಿರುವುದರಿಂದ ಪಟ್ಟು ಹಿಡಿದು ಕೇಳುತ್ತಿದ್ದಾರೆ, ಪರಿಸ್ಥಿತಿ ಹೀಗೆಯೇ

ಮುಂದುವರಿದರೆ ಮೊದಲೇ ಮಳೆ ಕಡಿಮೆಯಾಗಿರುವುದರಿಂದ ರೋಗರುಜಿನಗಳು ಹರಡತಕ್ಕಂಥ ಪರಿಸ್ಥಿತಿ ಇದೆ. ಬಳ್ಳಾರಿಯಲ್ಲಿ ಇದರ ಸೂಚನೆ ಕೂಡ ಕಂಡುಬಂದಿದೆ. ಆದ್ದರಿಂದ ಇದನ್ನು ಚಾಲೆಂಜ್ ಎಂದು ಪರಿಗಣಿಸದೆ ಇದನ್ನು ಮಾಡುತ್ತೇವೆ ಎಂದು ನಿರ್ಧಿಷ್ಟವಾಗಿ ಘೋಷಣೆ ಮಾಡುವುದಕ್ಕೆ ಏನು ತೊಂದರೆ ಇದೆ ? ಅವರಿಗೆ ಕೆ. ಸಿ. ಎಸ್. ಆರ್. ನ್ನು ವಿಸ್ತರಣೆ ಮಾಡಿಸಿ, ಆಮೇಲೆ ಬೇಕಾದರೆ ತಾಂತ್ರಿಕ ಅಡಚಣೆಯನ್ನು ಬಗೆಹರಿಸಬಹುದು. ಇದನ್ನು ಮಾಡಲಿಕ್ಕೆ ಸರ್ಕಾರ ಮುಂದಾಗಬೇಕೇ ಹೊರತು ಸುಮ್ಮನೆ ಪರೋಕ್ಷವಾಗಿ ಎಚ್ಚರಿಕೆಯನ್ನು ಕೊಡುತ್ತಾ ಕುಳಿತುಕೊಳ್ಳುವುದರಿಂದ ನಿಮ್ಮ ಈ ಜಿದ್ದಾಜಿದ್ದಿನ ಪ್ರಶ್ನೆಯಿಂದಾಗಿ ದೊಡ್ಡ ಅನಾಹುತವೇ ಸಂಭವಿಸುವ ಸಾಧ್ಯತೆ ಇದೆ, ಈ ರೀತಿ ಆಗುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ವೆಂಕಟರಾಮಯ್ಯನವರು ನಾನು ಹೇಳಿದ್ದು ನುಣುಚಿಕೊಳ್ಳತಕ್ಕಂಥ ಪ್ರಯತ್ನ ಎಂದು ಹೇಳಿದರು. ಅವರು ಕೇಳಿದ ಎಲ್ಲಾ ಬೇಡಿಕೆಗಳನ್ನೂ ಒಪ್ಪಿಕೊಂಡಿದ್ದೇವೆ. ಆದರೂ ಕೂಡ ತಿರುಗಿ ಇದು ಬುದ್ಧಿವಂತಿಕೆಯ ಮಾತು ಎಂದು ಹೇಳುತ್ತಾರೆ. ಇದಕ್ಕಿಂತ ಬೇರೆ ಉತ್ತರ ಕೊಡುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ಆಮೇಲೆ ಜೈಲಿಗೆ ಹಾಕುತ್ತೀರಿ ಎಂದು ಹೇಳಿದರು. ಬಹುಶಃ ಜೈಲಿಗೆ ಹಾಕುತ್ತೇವೆ ಎನ್ನುವ ಮಾತನ್ನು ನಾನು ಹೇಳಿಯೇ ಇಲ್ಲ. ಜನರಿಗೆ ತೊಂದರೆ ಮಾಡುವುದು ಬೇಡ. ನಿಮ್ಮ ಸತ್ಯಾಗ್ರಹವನ್ನು ಶಾಂತ ರೀತಿಯಿಂದ ಮಾಡಿ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ.

ಅವರು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ನಾನು ನೋಡಿದ್ದೇನೆ, ಏನು ಸಹಾಯ ಮಾಡಿದರು ಎಂದು. ಒಂದು ಯೂನಿಯನ್ ರೆಕಗ್ನಿಷನ್ ಕೊಡುವುದಕ್ಕೆ ಅವರ ಕೈಯಲ್ಲಿ ಆಗಿರಲಿಲ್ಲ. ಇವತ್ತು ದೊಡ್ಡದಾಗಿ ನನ್ನ ಹತ್ತಿರ ಭಾಷಣ ಮಾಡುತ್ತಾರೆ. I may advice. You may disregard my advice. But, I am entilted to take my own decision. I will have to consult various departments.

(ಗೊಂದಲ)

SRI K. H. SRINIVAS.— What is your difficulty ?

ಶ್ರೀ ಬಿ. ಬಸವಲಿಂಗಪ್ಪ.— ಪರಿಶೀಲನೆ ಮಾಡುತ್ತೇನೆಂದು ಹೇಳುವುದು ಬೇಡ, ಅವರ ಬೇಡಿಕೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿ.

ಅಧ್ಯಕ್ಷರು.— ಬಸವಲಿಂಗಪ್ಪನವರೇ, ಸಮಾಧಾನವಾಗಿ ಕೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಬೇಡಿಕೆಯನ್ನು ಈಡೇರಿಸುವ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೀರಾ ಸ್ವಾಮಿ ?

(ಗೊಂದಲ)

ಅಧ್ಯಕ್ಷರು.— ಸ್ವಲ್ಪ ಕುಳಿತುಕೊಳ್ಳಿ. ಅವರು ಮುಕ್ತಾಯ ಮಾಡಲಿ. ನಿಮಗೆ ನಾಲ್ಕು ಜನ ಮಾನ್ಯ ಸದಸ್ಯರಿಗೆ ಅವಕಾಶ ಕೊಟ್ಟಿದ್ದೇನೆ. ತಾವೂ ಕೇಳಿದ್ದೀರಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಬಸವಲಿಂಗಪ್ಪನವರು ಪರಿಶೀಲನೆ ಮಾಡುವುದು ಬೇಡ ಎಂದು ಹೇಳಿದ್ದಾರೆ. ಅವರು ಮಂತ್ರಿಗಳಾಗಿದ್ದಾಗ ಆ ರೀತಿ ಮಾಡಿದ್ದರೋ ಏನೋ ಗೊತ್ತಿಲ್ಲ. ಪರಿಶೀಲನೆಯನ್ನು ಮಾಡಲೇಬೇಕಾಗುತ್ತದೆ. ಹಲವಾರು ಇಲಾಖೆಗಳನ್ನು ನಾನು ಕನ್‌ಸಲ್ಟ್ ಮಾಡಲೇಬೇಕಾಗುತ್ತದೆ,

(ಗೊಂದಲ)

ಅಧ್ಯಕ್ಷರು.— ಇನ್ನೊಮ್ಮೆ ಅವಕಾಶ ಕೊಡಿ ಎಂದು ಹೇಳಿದರೆ ಕೊಡುತ್ತೇನೆ.

SRI K. H. SRINIVAS.— What is your difficulty in extending KCSR to them ?

ಶ್ರೀ ಎ. ಲಕ್ಷ್ಮೀಸಾಗರ್.— ಕೆ.ಸಿ.ಎಸ್.ಆರ್‌ನ್ನು ಅಷ್ಟು ಸುಲಭವಾಗಿ ಮಾಡುವುದಕ್ಕೆ ಬರುವುದಿಲ್ಲ ಎಂದು ಪ್ರಾರಂಭದಲ್ಲೇ ಹೇಳಿದ್ದೇನೆ, ಬೇರೆ ಬೇರೆ ಇಲಾಖೆಗಳನ್ನು ಕೇಳಬೇಕಾಗುತ್ತದೆ. ಕಾನೂನು ತೊಡಕುಗಳು ಇದೆಯೆಂದು ಕಾನೂನು ಇಲಾಖೆಯುವರೇ ಹೇಳಿದ್ದಾರೆ. ಅದನ್ನು ಕೂಡಾ ಸರಿಪಡಿಸತಕ್ಕಂಥ ಪ್ರಯತ್ನ ಮಾಡುತ್ತಿದ್ದೇನೆ, ಅದಕ್ಕಾಗಿ ಇವತ್ತು ಮೀಟಿಂಗ್ ಕರೆದಿದ್ದೇನೆ ಎಂದು ಹೇಳಿದ್ದೇನೆ. ಇಷ್ಟೆಲ್ಲಾ ಆದಮೇಲೆ ನನ್ನ ಹಿಂದಿನ ಕಾರ್ಯಚಟುವಟಿಕೆಗಳಿಂದ ಅವರ ಬೇಡಿಕೆಗಳನ್ನು ಈಡೇರಿಸುವ ದಾರಿಯಲ್ಲಿ ಹೋಗಿದ್ದೇನೆ. ಆದ್ದರಿಂದ ಅವರಿಗೆ ನಂಬಿಕೆ ಬರಬೇಕು ಎಂದು ಹೇಳಿದ್ದೇನೆ. ಟೊಳ್ಳು ಆಶ್ವಾಸನೆಗಳನ್ನು ನಾನು ಕೊಟ್ಟಿಲ್ಲ. ಹಿಂದಿನ ಮಂತ್ರಿಗಳ ವಿಚಾರವನ್ನು ನಾನು ಮಾತನಾಡುವುದಿಲ್ಲ. ನಾನು ಹೇಳಿದ ರೀತಿಯಲ್ಲಿ ೯ ತಿಂಗಳಲ್ಲಿ ಮೂರು ಸಲ ಭೇಟಿ ಮಾಡಿದ್ದೇನೆ. ಆದ್ದರಿಂದ ಕೊನೆಯುಸಲ ನೀವು ೨೩–೨೪ನೇ ತಾರೀಖು ಈ ತಿಂಗಳು ಬನ್ನಿ ಮಾತಾಡೋಣ ಎಂದು ಅವರಿಗೆ ಹೇಳಿ ಅವರಿಗೆ ಟೆಲೆಕ್ಸನ್ನೂ ಕೂಡಾ ಕಳಿಸಿದ್ದೇನೆ. ಇಷ್ಟೆಲ್ಲಾ ಆದರೂ ಕೂಡಾ ಈಗಲೇ ತೀರ್ಮಾನ ಮಾಡಿ ಎಂದು ಹೇಳಿದರೆ......

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಂದು ನಿಮಿಷ ತಾವು ಯೀಲ್ಡ್ ಆದರೆ...

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಯೀಲ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಅತ್ಯಂತ ಸಹಾನುಭೂತಿಯಿಂದ ಇದನ್ನು ಪರಿಶೀಲಿಸುತ್ತೇನೆ ಎಂದು ಹೇಳಿದ್ದೇನೆ. ಒಂದು ಸಲ ಅಲ್ಲ. ಎರಡು ಸಲ ಅಲ್ಲ. ಮೀಟಿಂಗ್‌ಗೆ ಬನ್ನಿ ಕುಳಿತುಕೊಂಡು ಮಾತಾಡೋಣ ಎಂದು ಕರೆದರೂ ಕೂಡಾ ಇಷ್ಟೆಲ್ಲಾ ಹಿನ್ನೆಲೆಯಲ್ಲಿ ನಾನು ಅವರಿಗೆ ಸಹಾನುಭೂತಿಯಾಗಿ ಇದ್ದೇನೆ ಎಂದು ಹೇಳಿದರೂ ಕೂಡ ಬರುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪಕ್ಷದ ಅಧ್ಯಕ್ಷರು ನಿಮ್ಮ ನಿಲುವು ಸರಿಯಾಗಿದೆ, ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ಮೇಲ್ಮನೆಯಲ್ಲಿ ಈ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸಹಾನುಭೂತಿಯಿಂದ ನೋಡುತ್ತೇನೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ತಮ್ಮ ರಾಗ ಬೇರೆ ಆಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಬೇಕು ಎಂದು ಇದ್ದೇನೆ ಎಂದರೆ......

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾವು ಸ್ಪಷ್ಟವಾಗಿ ಕೇಳುತ್ತಿದ್ದೇವೆ. ಕೆ.ಸಿ.ಎಸ್.ಆರ್.ನ್ನು ವಿಸ್ತರಣೆ ಮಾಡುವುದಕ್ಕೆ, ತೀರ್ಮಾನ ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ ? ನಮಗೂ ತಿಳಿದುಕೊಳ್ಳುವುದಕ್ಕೆ ಅಧಿಕಾರ ಇದೆ. ಇವತ್ತು ಡಿಸಿಪ್ಲಿನರಿ ಆ್ಯಕ್ಷನ್‌ಗೆ ಸಂಬಂಧಪಟ್ಟು ಅವರಿಗೆ ಕೆ.ಸಿ.ಎಸ್.ಆರ್. ಅನ್ವಯವಾಗಿದೆ. ಅಂದರೆ ಅವರ ಮೇಲೆ ಶಿಸ್ತಿಗೆಲ್ಲಾ ಕೆ.ಸಿ.ಎಸ್.ಆರ್. ಸೌಲಭ್ಯಕ್ಕೆ ಮಾತ್ರ ಕೆ.ಸಿ.ಎಸ್.ಆರ್. ಇಲ್ಲ. ಈ ರೀತಿಯ ನಿಲುವನ್ನು ಸರ್ಕಾರ ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತದೋ ನನಗಂತೂ ಅರ್ಥವಾಗುವುದಿಲ್ಲ. ನಿಜವಾಗಿ ಅಂಥ ದೊಡ್ಡ ಅನಾಹುತ ಕಾರ್ಯಗಳಿಗೆ ಯಾವ ಅಡೆತಡೆಗಳೂ ಇಲ್ಲ. ಇದನ್ನು ತೀರ್ಮಾನ ಮಾಡಿ ಇವತ್ತೇ ತೆಗೆದುಕೊಳ್ಳಿ. ಇದರಿಂದ ಒಂದು ದೊಡ್ಡ ಅನಾಹುತ ತಪ್ಪುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಮಾಡಿ.

ಅಧ್ಯಕ್ಷರು.— ಅವರದು ಮೊದಲು ಮುಗಿಯಲಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಪೌರ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದು ಒಂದು. ಕಳೆದ ಆರು ದಿವಸದಿಂದ ಎಲ್ಲೂ ಸ್ವಚ್ಛತೆ ಕೆಲಸವಾಗದೇ ಅವ್ಯವಸ್ಥೆ ಆಗಿದೆ. ಇದನ್ನು ಸರಿ ಮಾಡುವುದಕ್ಕೆ ಸರ್ಕಾರದವರು ಏನು ಕ್ರಮವನ್ನು ಕೈಗೊಂಡಿದ್ದಾರೆ. ಜನಗಳ ಗತಿ ಏನು ?